ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮೇ 16 ಸೋಮವಾರ 2022

ಸಂಪುಟ: 43 | ಸಂಚಿಕೆ: 30 | ಪುಟಗಳು: 10

₹4

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

ಇಂದಿನಿಂದ ಶಾಲೆಗಳು ಆರಂಭ

ಮೈಸೂರು, ಮೇ 15 (ಎಂಟಿವೈ)–ನಾಳೆ (ಮೇ 16)ಯಿಂದ ಮೈಸೂರು ಸೇರಿದಂತೆ ರಾಜ್ಯಾದ್ಯಂತ ಪ್ರಾಥಮಿಕ ಮತ್ತು ಪ್ರೌಢಶಾಲೆಗಳು ಆರಂಭವಾಗಲಿದ್ದು, ಮೈಸೂರು ಜಿಲ್ಲೆಯಲ್ಲಿ ಸಕಲ ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿದೆ.

ಕೋವಿಡ್ ಹಿನ್ನೆಲೆಯಲ್ಲಿ ಕಳೆದ 2 ವರ್ಷದಿಂದ ಶೈಕ್ಷಣಿಕ ಚಟುವಟಿಕೆ ಪೂರ್ಣ ಪ್ರಮಾಣದಲ್ಲಿ ನಡೆಸಲು ಸಾಧ್ಯವಾಗಿರಲಿಲ್ಲ. ಈ ಹಿನ್ನೆಲೆಯಲ್ಲಿ 4ನೇ ಅಲೆಯ ಭೀತಿಯ ನಡುವೆಯೂ ರಾಜ್ಯಾದ್ಯಂತ ಮೇ 16ರಿಂದ 1ರಿಂದ 10ನೇ ತರಗತಿಯ ಶಾಲೆಗಳು ಪುನರಾರಂಭವಾಗುತ್ತಿದ್ದು, ಶೈಕ್ಷಣಿಕ ಚಟುವಟಿಕೆ ಗರಿಗೆದರಲಿದೆ ಅದಕ್ಕಾಗಿ ಸಕಲ ಸಿದ್ಧತೆಯನ್ನು ಮಾಡಿಕೊಳ್ಳಲಾಗಿದ್ದು, ಎಲ್ಲಾ ಶಾಲೆಗಳಲ್ಲೂ ವಿದ್ಯಾರ್ಥಿಗಳ ಹಿತ ಕಾಯುವ ನಿಟ್ಟಿನಲ್ಲಿ ಸೂಕ್ತ ಕ್ರಮ ಕೈಗೊಳ್ಳುವಂತೆ ಶಿಕ್ಷಣ ಇಲಾಖೆಯ ಅಧಿಕಾರಿಗಳು ಸೂಚನೆ ನೀಡಿದ್ದಾರೆ.



ಮೈಸೂರು ಜಿಲ್ಲೆಯಲ್ಲಿ ಸಕಲ ಸಿದ್ಧತೆ

ಜಿಲ್ಲೆಯಲ್ಲಿ 1,880 ಸರ್ಕಾರಿ ಪ್ರಾಥಮಿಕ ಶಾಲೆ, ಬುಡಕಟ್ಟು ಮತ್ತು ಸಮಾಜ ಕಲ್ಯಾಣ ಇಲಾಖೆಯ 28, ಅನುದಾನಿತ 133, ಅನುದಾನ ರಹಿತ 545, ಕೇಂದ್ರ ಸರ್ಕಾರದ ಎರಡು ಶಾಲೆ ಸೇರಿದಂತೆ ಜಿಲ್ಲೆಯಲ್ಲಿ 2,588 ಪ್ರಾಥಮಿಕ ಶಾಲೆಗಳಿವೆ. ಜಿಲ್ಲೆಯಲ್ಲಿ 232 ಸರ್ಕಾರಿ ಪ್ರೌಢಶಾಲೆಗಳಿದ್ದು, ಬುಡಕಟ್ಟು ಮತ್ತು ಸಮಾಜ ▶ 8ನೇ ಪುಟಕ್ಕೆ

ಕುಟುಂಬ ರಾಜಕಾರಣಕ್ಕೆ ಅಂತ್ಯ ಹಾಡಲು ಮುಂದಾದ ಕಾಂಗ್ರೆಸ್

ಒಂದು ಕುಟುಂಬಕ್ಕೆ ಒಂದೇ ಟಿಕೆಟ್

- ಉದಯಪುರ್‌ನಲ್ಲಿ ನಡೆದ ಸಿಡಬ್ಲ್ಯುಸಿ ಸಭೆ ನಿರ್ಧಾರ
- ಪಕ್ಷಕ್ಕಾಗಿ 5 ವರ್ಷ ದುಡಿದ ಕುಟುಂಬ ಸದಸ್ಯನಿಗೆ ವಿನಾಯಿತಿ
- ಯುವಕರಿಗೆ ಶೇ.50ರಷ್ಟು ಸ್ಥಾನ
- ಎಸ್‌ಸಿ–ಎಸ್‌ಟಿ, ಒಬಿಸಿ, ಅಲ್ಪಸಂಖ್ಯಾತರಿಗೆ ಎಲ್ಲಾ ಹಂತದಲ್ಲೂ ಶೇ.50 ಮೀಸಲು
- ಪದಾಧಿಕಾರಿಗಳ ಗರಿಷ್ಠ ಅವಧಿ ಐದು ವರ್ಷಕ್ಕೆ ನಿಗದಿ
- ರಾಹುಲ್ ಗಾಂಧಿಯಿಂದ ಭಾರತ್ ಜೋಡಣಾ ಯಾತ್ರೆ




ರಾಜಸ್ತಾನದ ಉದಯಪುರ್‌ನಲ್ಲಿ ಭಾನುವಾರ ನಡೆದ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಎಐಸಿಸಿ ಅಧ್ಯಕ್ಷೆ ಸೋನಿಯಾ ಗಾಂಧಿ ಅವರು ಅಧ್ಯಕ್ಷತೆ ವಹಿಸಿ ಮಾತನಾಡುತ್ತಿರುವುದನ್ನು ಕಾಣಬಹುದು.

ಉದಯಪುರ್ (ರಾಜಸ್ತಾನ್), ಮೇ 15– ಕುಟುಂಬ ರಾಜಕಾರಣಕ್ಕೆ ಅಂತ್ಯ ಹಾಡಲು ಕಾಂಗ್ರೆಸ್ ಮುಂದಾಗಿದೆ. ಎಐಸಿಸಿ ಅಧ್ಯಕ್ಷೆ ಸೋನಿಯಾ ಗಾಂಧಿ ಅಧ್ಯಕ್ಷತೆಯಲ್ಲಿ ರಾಜಸ್ತಾನದ ಉದಯಪುರ್‌ನಲ್ಲಿ ನಡೆದ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸಭೆಯಲ್ಲಿ (CWC) ಈ ಸಂಬಂಧ ನಿರ್ಣಯ ಕೈಗೊಂಡಿದೆ.

ಮುಂಬರುವ ಚುನಾವಣೆಗಳಲ್ಲಿ ಒಂದು ಕುಟುಂಬಕ್ಕೆ ಒಂದೇ ಟಿಕೆಟ್ ನೀಡಬೇಕು ಎಂಬ ನಿಯಮಕ್ಕೆ ಅನುಮೋದನೆ ನೀಡಲಾಗಿದೆ. ಆದರೆ ಅದೇ ಕುಟುಂಬದ ಮತ್ತೊಬ್ಬ ಸದಸ್ಯ 5 ವರ್ಷ ▶ 8ನೇ ಪುಟಕ್ಕೆ

70 ವರ್ಷ ಮೇಲ್ಪಟ್ಟವರಿಗೆ ಟಿಕೆಟ್ ನಿರಾಕರಿಸುವ ಬಗ್ಗೆ ಸಿಡಬ್ಲ್ಯುಸಿಯಲ್ಲಿ ಗಂಭೀರ ಚರ್ಚೆ ನಡೆಯಿತಾದರೂ, ಒಮ್ಮತ ಮೂಡದ ಹಿನ್ನೆಲೆಯಲ್ಲಿ ಅದರ ಬಗ್ಗೆ ಯಾವುದೇ ನಿರ್ಧಾರ ಕೈಗೊಂಡಿಲ್ಲ. 70 ವರ್ಷ ಮೇಲ್ಪಟ್ಟವರಿಗೆ ಟಿಕೆಟ್ ನಿರಾಕರಿಸುವ ಪ್ರಸ್ತಾವನೆಗೆ ಹಲವರು ಆಕ್ಷೇಪ ವ್ಯಕ್ತಪಡಿಸಿದರು. ಈ ನಿರ್ಧಾರದಿಂದ ಅರ್ಹ ವ್ಯಕ್ತಿಗಳು ಟಿಕೆಟ್ ವಂಚಿತರಾಗುತ್ತಾರೆ. ಅದು ಪಕ್ಷದ ಬೆಳವಣಿಗೆಗೂ ಪೆಟ್ಟು ನೀಡುತ್ತದೆ ಎಂದು ಹಲವು ಹಿರಿಯ ನಾಯಕರು ಆಕ್ಷೇಪ ವ್ಯಕ್ತಪಡಿಸಿದರು. ಈ ವೇಳೆ ಸಿದ್ದರಾಮಯ್ಯನವರು 70 ವರ್ಷ ಮೀರಿದ ಆರೋಗ್ಯವಂತರಿಗೆ ಟಿಕೆಟ್ ನೀಡಬಹುದು ಎಂದು ತಮ್ಮ ಅಭಿಪ್ರಾಯ ತಿಳಿಸಿದರು. 70 ವರ್ಷ ಮೀರಿದ ಪದಾಧಿಕಾರಿಗಳಿಂದ ರಾಜೀನಾಮೆ ಪಡೆಯಬೇಕು ಎಂಬ ಪ್ರಸ್ತಾವನೆ ಬಗ್ಗೆ ಕೂಡ ವಿರೋಧ ವ್ಯಕ್ತವಾಯಿತು. ಪ್ರಭಾವಿಗಳು, ಸಂಪನ್ಮೂಲ ವ್ಯಕ್ತಿಗಳು ಮತ ಕ್ರೋಢೀಕರಿಸುವ ಸಾಮರ್ಥ್ಯವಿರುವವರಿಗೆ ವಿನಾಯಿತಿ ನೀಡಬೇಕು ಎಂಬ ಸಲಹೆಗಳು ಕೇಳಿ ಬಂದವು. ಅಂತಿಮವಾಗಿ ಈ ಪ್ರಸ್ತಾವನೆಯನ್ನು ಕೈಬಿಡಲಾಯಿತು.

ಜನರೊಂದಿಗೆ ಸಂಪರ್ಕ ಕಡಿದಿದೆ...



ಉದಯ್‌ಪುರ್: ಕಾಂಗ್ರೆಸ್ ಜನಸಾಮಾನ್ಯರ ಜೊತೆ ಸಂಪರ್ಕ ಕಳೆದುಕೊಂಡಿದೆ. ಅದನ್ನು ಮರುಸ್ಥಾಪಿಸಲು ಕಠಿಣ ಪರಿಶ್ರಮ ಪಡಬೇಕು ಎಂದು ಎಐಸಿಸಿ ಮುಖಂಡ ರಾಹುಲ್ ಗಾಂಧಿ ತಿಳಿಸಿದ್ದಾರೆ.

ಸಿಡಬ್ಲ್ಯುಸಿ ಸಭೆಯಲ್ಲಿ ಮಾತನಾಡಿದ ಅವರು, ಜನಸಾಮಾನ್ಯರೊಂದಿಗಿನ ಸಂಪರ್ಕವನ್ನು ಮರುಸ್ಥಾಪಿಸಲು ಕಾಶ್ಮೀರದಿಂದ ಕನ್ಯಾಕುಮಾರಿವರೆಗೆ ▶ 8ನೇ ಪುಟಕ್ಕೆ

ಪಿಎಸ್‌ಐ ಹಗರಣ: ಡಿವೈಎಸ್ಪಿ ಮನೆಯಲ್ಲಿ ಸಿಕ್ಕಿದೆ ಮಹತ್ವದ ಸಿಡಿ

ಬೆಂಗಳೂರು, ಮೇ 15–ಪಿಎಸ್‌ಐ ಅಕ್ರಮ ನೇಮಕಾತಿಯ ಕಿಂಗ್‌ಪಿನ್ ಡಿವೈಎಸ್ಪಿ ಶಾಂತಕುಮಾರ್ ಮನೆಯನ್ನು ಸಿಐಡಿ ಅಧಿಕಾರಿಗಳು ಜಾಲಾಡಿದ್ದು, ಆಡುಗೋಡಿಯಲ್ಲಿರುವ ಮನೆಯಲ್ಲಿ ಒನ್ ಟೈಂ ಲಾಕ್ ಹಾಗೂ ಸಿಡಿ ಪತ್ತೆಯಾಗಿದೆ. ಶಾಂತಕುಮಾರ್ ಮನೆಯಲ್ಲಿ ಸಿಕ್ಕ ಈ ವಸ್ತುಗಳು ನೇಮಕಾತಿ ಹಗರಣದ ವಿಚಾರವನ್ನು ಬಹಿರಂಗಪಡಿಸುತ್ತಿದೆ. ಮೇ 14ರಂದು ಶಾಂತಕುಮಾರನ ಆಡುಗೋಡಿ ಮನೆಯನ್ನು ಪರಿಶೀಲಿಸಿದ ಸಿಐಡಿ ಅಧಿಕಾರಿಗಳಿಗೆ 5 ಒನ್ ಟೈಂ ಲಾಕ್ ಕೇಬಲ್‌ಗಳು ದೊರೆತಿವೆ. ಈ ಒನ್ ಟೈಮ್ ಲಾಕ್ ಪಿಎಸ್‌ಐ ಎಕ್ಸಾಂ ಬರೆದ ಅಭ್ಯರ್ಥಿಗಳ ಓಎಂಆರ್ ಶೀಟ್ ಇಡುವ ಟ್ರಂಕ್‌ಗೆ ಅಳವಡಿಸಲಾಗಿರುತ್ತದೆ. ಈ ಒನ್ ಟೈಮ್ ಲಾಕ್ ಬೇರೆ ಯಾರೂ ತೆಗೆದುಕೊಂಡು ಬಳಸುವಂತಿಲ್ಲ. ಆದರೆ ನೇಮಕಾತಿ ವಿಭಾಗದ ಡಿವೈಎಸ್ಪಿ ಶಾಂತಕುಮಾರ್ ಓಎಂಆರ್ ಇರೋ ಟ್ರಂಕ್‌ನ ಒನ್ ಟೈಂ ಲಾಕ್ ▶ 8ನೇ ಪುಟಕ್ಕೆ

ಆಸ್ಟ್ರೇಲಿಯಾ ಕ್ರಿಕೆಟ್ ದಿಗ್ಗಜ ಆಂಡ್ರ್ಯೂ ಸೈಮಂಡ್ಸ್ ನಿಧನ



ಸಿಡ್ನಿ,ಮೇ 15–ಭೀಕರ ಕಾರು ಅಪಘಾತದಲ್ಲಿ ಆಸ್ಟ್ರೇಲಿಯಾ ಕ್ರಿಕೆಟ್ ತಂಡದ ಮಾಜಿ ಸ್ಫೋಟಕ ಆಲ್‌ರೌಂಡರ್ ಆಂಡ್ರ್ಯೂ ಸೈಮಂಡ್ಸ್ ಮೃತಪಟ್ಟಿದ್ದಾರೆ.

ಶನಿವಾರ ರಾತ್ರಿ ಕ್ವೀನ್ಸ್‌ಲ್ಯಾಂಡ್‌ನ ಟೌನ್ಸ್‌ವಿಲ್ಲೆ ಹೊರವಲಯದಲ್ಲಿ ಸಂಭವಿಸಿದ ಕಾರು ಅಪಘಾತದಲ್ಲಿ ಸೈಮಂಡ್ಸ್ ಸಾವನ್ನಪ್ಪಿದ್ದಾರೆ. ಮಾಹಿತಿ ಪ್ರಕಾರ ಮಧ್ಯರಾತ್ರಿ 11ರ ಸುಮಾರಿಗೆ ಹಾರ್ವೇ ರೇಂಜ್ ರಸ್ತೆಯಲ್ಲಿ ಕಾರು ಚಲಾಯಿಸುತ್ತಿದ್ದಾಗ ಅಪಘಾತ ಸಂಭವಿಸಿದೆ.

ಕಾರಿನಲ್ಲಿ ಸೈಮಂಡ್ಸ್ ಒಬ್ಬರೇ ಇದ್ದರು. ಅಲೈಸ್ ರಿವರ್ ಬ್ರಿಡ್ಜ್ ಸಮೀಪ ನಿಯಂತ್ರಣ ತಪ್ಪಿದ ಕಾರು ರಸ್ತೆಯಿಂದ ಹೊರಗೆ ಸಂಚರಿಸಿ, ಪಲ್ಟಿಯಾಗಿದೆ. ತುರ್ತು ಸೇವಾ ತಂಡವು ಸೈಮಂಡ್ಸ್ ಅವರ ಜೀವ ಉಳಿಸಲು ಪ್ರಯತ್ನ ನಡೆಸಿದ್ದು, ಸಫಲವಾಗಿಲ್ಲ ಎಂದು ಪೊಲೀಸರು ನೀಡಿದ್ದಾರೆ. 46 ವರ್ಷದ ಕ್ರಿಕೆಟಿಗ ಸೈಮಂಡ್ಸ್ 26 ಟೆಸ್ಟ್, 198 ಏಕದಿನ ಅಂತರರಾಷ್ಟ್ರೀಯ ಕ್ರಿಕೆಟ್ ಪಂದ್ಯಗಳನ್ನು ಆಡಿದ್ದಾರೆ. 1998ರಿಂದ 2009 ನಡುವೆ ಒಟ್ಟು 198 ಏಕದಿನ, 26 ಟೆಸ್ಟ್ ಹಾಗೂ 14 ಟಿ–20 ಪಂದ್ಯಗಳಲ್ಲಿ ಆಸ್ಟ್ರೇಲಿಯಾ ತಂಡವನ್ನು ಪ್ರತಿನಿಧಿಸಿದ್ದಾರೆ. 2003, 2007ರ ವಿಶ್ವಕಪ್ ಗೆಲುವಲ್ಲಿ ಪ್ರಮುಖ ಪಾತ್ರವಹಿಸಿದ್ದರು.

ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಬಲಿಷ್ಠ ಇಂಡೋನೇಷ್ಯಾ ಮಣಿಸಿದ ಭಾರತಕ್ಕೆ ಥಾಮಸ್ ಕಪ್

- 14 ಬಾರಿಯ ಚಾಂಪಿಯನ್ ಇಂಡೋನೇಷ್ಯಾ ಮಣಿಸಿ ಚೊಚ್ಚಲ ಚಾಂಪಿಯನ್ ಪಟ್ಟ
- ಮೋದಿ ಸೇರಿದಂತೆ ಗಣ್ಯರಿಂದ ಶುಭಾಶಯ
- ಇತಿಹಾಸ ಸೃಷ್ಟಿಸಿದ ಭಾರತ ತಂಡಕ್ಕೆ ಕೋಟಿ ರೂ. ಬಹುಮಾನ



ಬ್ಯಾಂಕಾಕ್, ಮೇ 15– ಬಲಿಷ್ಠ ಹಾಗೂ 14 ಬಾರಿಯ ಚಾಂಪಿಯನ್ ಇಂಡೋನೇಷ್ಯಾ ವಿರುದ್ಧ ಅಮೋಘ ಗೆಲುವು ದಾಖಲಿಸಿರುವ ಭಾರತ, ಥಾಮಸ್ ಕಪ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಚೊಚ್ಚಲ ಚಾಂಪಿಯನ್ ಪಟ್ಟ ಅಲಂಕರಿಸಿದೆ.

ಭಾನುವಾರ ನಡೆದ ಫೈನಲ್ ಪಂದ್ಯದಲ್ಲಿ ಬಲಿಷ್ಠ ಇಂಡೋನೇಷ್ಯಾ ತಂಡವನ್ನು 3–0 ಅಂತರದಲ್ಲಿ ಬಗ್ಗುಬಡಿದ ಭಾರತ ಟ್ರೋಫಿ ಎತ್ತಿ ಹಿಡಿಯಿತು. ಅಲ್ಲದೇ ಮೊದಲ ಬಾರಿ ಚಿನ್ನದ ಪದಕ ಗಳಿಸಿ ಇತಿಹಾಸ ಸೃಷ್ಟಿಸಿತು.

ನಾಕ್‌ಔಟ್ ಹಂತದಲ್ಲಿ ಸಾಧಾರಣ ಪ್ರದರ್ಶನ ನೀಡಿದ್ದ ಭಾರತ ತಂಡ ಫೈನಲ್‌ನಲ್ಲಿ ಅಧಿಕಾರಯುತ ಪ್ರದರ್ಶನ ನೀಡಿ ಎಲ್ಲರನ್ನು ಹುಬ್ಬೇರುವಂತೆ ಮಾಡಿತು. ಮೊದಲ ಸಿಂಗಲ್ಸ್ ಪಂದ್ಯದಲ್ಲಿ ಭಾರತದ ಪರ ಲಕ್ಷ್ಯ ಸೇನ್ ಅವರು ಇಂಡೋನೇಷ್ಯಾದ ಆಂಥೋನಿ ಗಿಂಟಿಂಗ್ ಅವರನ್ನು 21–8, 17–21, 16–21ರಿಂದ ಸೋಲಿಸಿ ತಂಡಕ್ಕೆ 1–0 ಅಂತರದ ಮುನ್ನಡೆ ತಂದುಕೊಟ್ಟರು.

ನಂತರ ನಡೆದ ಡಬಲ್ಸ್ ವಿಭಾಗದ ಪಂದ್ಯದಲ್ಲಿ ವಿಶ್ವದ 8ನೇ ಶ್ರೇಯಾಂಕ ಹೊಂದಿರುವ ಸಾತ್ವಿಕ್ ಸಾಯ್‌ರಾಜ್ ಮತ್ತು ಚಿರಾಗ್ ಶೆಟ್ಟಿ ಒತ್ತಡ ನಿಭಾಯಿಸುವ ಮೂಲಕ ಇಂಡೋನೇಷ್ಯಾದ ಚಾಂಪಿಯನ್ ಜೋಡಿ ಸವಾಲನ್ನು ಹತ್ತಿಕ್ಕಿದರು. ಚಿರಾಗ್–ಸಾತ್ವಿಕ್ ಜೋಡಿ, ಮೊದಲ ಗೇಮ್‌ನಲ್ಲಿ ಜಿದ್ದಾಜಿದ್ದಿನ ಪೈಪೋಟಿ ನಡುವೆಯೂ ನಿರಾಸೆ ಅನುಭವಿಸಿತ್ತು. ಆದರೆ, ಹೋರಾಟ ಬಿಡದ ಭಾರತೀಯ ಆಟಗಾರರು 18–21, 23–21, 21–19 ಅಂಕಗಳ ಅಂತರದ ಗೇಮ್‌ಗಳಿಂದ ಮೊಹಮ್ಮದ್ ಅಹ್ಸಾನ್ ಮತ್ತು ಕೆವಿನ್ ಸಂಜಯ ಸುಕಮುಲ್ಜೊ ಎದುರು ▶ 8ನೇ ಪುಟಕ್ಕೆ

> “ಭಾರತ ಬ್ಯಾಡ್ಮಿಂಟನ್ ತಂಡ ಇತಿಹಾಸ ಬರೆದಿದೆ! ಥಾಮಸ್ ಕಪ್ ಗೆದ್ದು ಇಡೀ ಭಾರತ ದೇಶವೇ ಸಂಭ್ರಮಿಸಿದೆ! ನಮ್ಮ ನಿಪುಣ ತಂಡಕ್ಕೆ ಅಭಿನಂದನೆಗಳು ಮತ್ತು ಅವರ ಮುಂದಿನ ಪ್ರಯತ್ನಗಳಿಗಾಗಿ ಅವರಿಗೆ ಶುಭಾಶಯಗಳು. ಈ ಗೆಲುವು ಮುಂಬರುವ ಹಲವು ಕ್ರೀಡಾ ಪಟುಗಳಿಗೆ ಪ್ರೇರಣೆ ನೀಡಲಿದೆ.
>
> –ಪ್ರಧಾನಿ ಮೋದಿ ಟ್ವೀಟ್.

ಭಾರತೀಯ ನೌಕಾಪಡೆಗೆ ಸದ್ಯದಲ್ಲೇ ಮತ್ತೆರಡು ಯುದ್ಧ ನೌಕೆಗಳ ಸೇರ್ಪಡೆ

ನವದೆಹಲಿ: ಭಾರತೀಯ ನೌಕಾಪಡೆಗೆ ಎರಡು ಹೊಸ ಯುದ್ಧನೌಕೆಗಳು ಸಮುದ್ರ ಸಂಚಾರ ಆರಂಭಿಸಲಿದ್ದು, ನಂತರ ಅವುಗಳು ನೌಕಾಪಡೆಗೆ ಸೇರ್ಪಡೆಯಾಗಲಿವೆ. ಇದರಿಂದ ನೌಕಾಪಡೆಗೆ ಭವಿಷ್ಯದಲ್ಲಿ ಇನ್ನೂ ಎರಡು ಯುದ್ಧನೌಕೆಗಳು ನಿಯೋಜನೆಗೊಳ್ಳಲಿವೆ. ಕಾರ್ಯಾರಂಭವಾದ ಮೇಲೆ ಒಂದು ಯುದ್ಧನೌಕೆಗೆ ಐಎನ್‌ಎಸ್ ಸೂರತ್ ಎಂದು ನಾಮಕರಣ ಮಾಡಲಾಗುವುದು. ವಿಶಾಖಪಟ್ಟಣಂದಲ್ಲಿನ 4ನೇ ಯುದ್ಧನೌಕೆ ▶ 8ನೇ ಪುಟಕ್ಕೆ

ಸಂಪುಟ ವಿಸ್ತರಣೆ: ಒಂದೆರಡು ದಿನದಲ್ಲಿ ಹೈಕಮಾಂಡ್ ಜೊತೆ ಚರ್ಚೆ



ಹುಬ್ಬಳ್ಳಿ, ಮೇ 15– ಸಚಿವ ಸಂಪುಟ ವಿಸ್ತರಣೆ ಕುರಿತಂತೆ ಒಂದೆರಡು ದಿನಗಳಲ್ಲಿ ಹೈಕಮಾಂಡ್ ಜೊತೆಗೆ ಫೋನ್‌ನಲ್ಲಿ ಚರ್ಚಿಸಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು. ರಾಜ್ಯ ಸರ್ಕಾರ ಚುನಾವಣಾ ಪ್ರಕ್ರಿಯೆಯಲ್ಲಿದೆ. ಹೈಕಮಾಂಡ್ ನಿರ್ದೇಶನದ ನಂತರ ಸಂಪುಟ ವಿಸ್ತರಣೆ ಮಾಡಲಾಗುವುದು, ಈ ಸಂಬಂಧ ಇನ್ನೆರಡು ದಿನದಲ್ಲಿ ಹೈಕಮಾಂಡ್ ಜೊತೆಗೆ ದೂರವಾಣಿ ಮೂಲಕ ಮಾತನಾಡುತ್ತೇನೆ ಎಂದರು. ಮಾಜಿ ಸಿಎಂ ಯಡಿಯೂರಪ್ಪ ಅವರ ಪುತ್ರ ವಿಜಯೇಂದ್ರ ಸಂಪುಟ ಸೇರ್ಪಡೆ ವಿಷಯ ಹೈಕಮಾಂಡ್‌ಗೆ ಬಿಟ್ಟಿದ್ದು, ಸುಪ್ರೀಂಕೋರ್ಟ್ ಸೂಚನೆ ಮೇರೆಗೆ ಸ್ಥಳೀಯ ಸಂಸ್ಥೆ ಚುನಾವಣೆ ನಡೆಸುವ ಬಗ್ಗೆ ಗಮನ ಹರಿಸಲಾಗುವುದು ಎಂದರು.

ರಥಕ್ಕೆ ಸಿಲುಕಿ ಇಬ್ಬರು ಸಾವು

ಓರ್ವನಿಗೆ ಗಾಯ; ಗುಂಡ್ಲುಪೇಟೆ ಬಳಿ ಪಾರ್ವತಾಂಬ ರಥೋತ್ಸವದಲ್ಲಿ ದುರ್ಘಟನೆ

ಗುಂಡ್ಲುಪೇಟೆ, ಮೇ 15(ಸೋಮ್ ಜಿ.)– ಎರಡು ವರ್ಷಗಳ ಬಳಿಕ ನಡೆದ ಪಾರ್ವತಾಂಬ ರಥೋತ್ಸವದಲ್ಲಿ ರಥದ ಚಕ್ರ ಹರಿದು ಇಬ್ಬರು ಸಾವನ್ನಪ್ಪಿ, ಓರ್ವ ಗಾಯಗೊಂಡ ದುರಂತ ನಡೆದಿದೆ. ಕಂದೇಗಾಲ ಗ್ರಾಮದ ಬಸವಣ್ಣ ಅವರ ಪುತ್ರ ಸರ್ಪಭೂಷಣ್ (25), ಕಬ್ಬಹಳ್ಳಿ ಗ್ರಾಮದ ಸ್ವಾಮಿ (35) ಮೃತಪಟ್ಟವರು. ಕೊಡಸೋಗೆ ಗ್ರಾಮದ ಕರಿನಾಯಕ (45) ಗಂಭೀರವಾಗಿ ಗಾಯಗೊಂಡಿದ್ದು, ಪಟ್ಟಣದ ಸಾರ್ವಜನಿಕ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.



ಸರ್ಪಭೂಷಣ್



ಸ್ವಾಮಿ

ರಥೋತ್ಸವ ಆರಂಭವಾದ ಬಳಿಕ ಜನಸಂದಣಿ ಹೆಚ್ಚಾಗಿ ನೂಕುನುಗ್ಗಲು ಉಂಟಾದ ಪರಿಣಾಮ ರಥದ ಮುಂಭಾಗವಿದ್ದ ಸರ್ಪಭೂಷಣ್, ಕರಿನಾಯಕ ಹಾಗೂ ಸ್ವಾಮಿ ರಥದ ಚಕ್ರಕ್ಕೆ ಸಿಲುಕಿದ್ದಾರೆ. ಪರಿಣಾಮ ಗಂಭೀರವಾಗಿ ಗಾಯಗೊಂಡ ಅವರನ್ನು ಕೂಡಲೇ ಗುಂಡ್ಲುಪೇಟೆ ಪಟ್ಟಣದ ಸಾರ್ವಜನಿಕ ಆಸ್ಪತ್ರೆಗೆ ದಾಖಲಿಸಲಾಯಿತು. ಆದರೆ, ಚಿಕಿತ್ಸೆ ಫಲಕಾರಿಯಾಗದೇ ಸರ್ಪಭೂಷಣ್ ಸಾವನ್ನಪ್ಪಿದ್ದಾರೆ. ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ ಆಸ್ಪತ್ರೆಗೆ ದಾಖಲಿಸಲಾಗಿದ್ದ ಸ್ವಾಮಿ ಅವರು ಕೂಡ ಭಾನುವಾರ ಸಂಜೆ ಸಾವನ್ನಪ್ಪಿದ್ದಾರೆ. ಉಳಿದ ಕರಿನಾಯಕ ಅವರ ಸ್ಥಿತಿಯೂ ಗಂಭೀರವಾಗಿದ್ದು, ಚಿಕಿತ್ಸೆ ನೀಡಲಾಗುತ್ತಿದೆ.

ಆಸ್ಪತ್ರೆಗೆ ಶಾಸಕರು, ಮುಖಂಡರ ಭೇಟಿ: ವಿಷಯ ತಿಳಿದು ಆಸ್ಪತ್ರೆಗೆ ಶಾಸಕ ಸಿ.ಎಸ್.ನಿರಂಜನಕುಮಾರ್, ಕಾಂಗ್ರೆಸ್ ಮುಖಂಡ ಹೆಚ್.ಎಂ.ಗಣೇಶ್ ಪ್ರಸಾದ್ ಭೇಟಿ ನೀಡಿ, ಗಾಯಾಳುಗಳ ಆರೋಗ್ಯ ವಿಚಾರಿಸಿ, ಮೃತ ಯುವಕನ ಕುಟುಂಬಕ್ಕೆ ಸಾಂತ್ವನ ಹೇಳಿದರು.

ಮೈಸೂರಿನ ಅನುಪಮರಾವ್‌ಗೆ ಮಿಸೆಸ್ ಸೌತ್ ಏಷಿಯಾ ಕಿರೀಟ

ಸಿಂಗಾಪುರದ ವರ್ಲ್ಡ್‌ವೈಡ್ ಸ್ಪರ್ಧೆಗೆ ಆಯ್ಕೆ



ಮೈಸೂರು, ಮೇ 15–ಮಿಸೆಸ್ ಇಂಡಿಯಾ ಯೂನಿವರ್ಸ್ ಸ್ಪರ್ಧೆಯ ಪ್ಲಾಟಿನಂ ವಿಭಾಗದ ವಿಜೇತರಾದ ಮೈಸೂರಿನ ಕುವೆಂಪುನಗರ ನಿವಾಸಿ ಅನುಪಮಾ ರಾವ್ ಅವರು ಮುಂಬಯಿಯಲ್ಲಿ ಇತ್ತೀಚೆಗೆ ನಡೆದ ಸೌಂದರ್ಯ ಸ್ಪರ್ಧೆಯಲ್ಲಿ ಮಿಸೆಸ್ ಸೌತ್ ಏಷಿಯಾ–2022 ಕಿರೀಟವನ್ನು ಮುಡಿಗೇರಿಸಿಕೊಂಡಿದ್ದಾರೆ.

ಮುಂಬಯಿಯ ಸಂಮಕಿತ್ ಪ್ರೊಡಕ್ಷನ್ಸ್ ಹಾಗೂ ತುಷಾರ್ ದಾರಿವಾಲ್ ಈ ಪೇಜೆಂಟ್‌ನ ಆಯೋಜಕರಾಗಿದ್ದರು. ಮಿಸೆಸ್ ಇಂಡಿಯಾ ಯೂನಿವರ್ಸ್ ಸ್ಪರ್ಧೆಯ ಮುಂದುವರೆದ ಈ ಸ್ಪರ್ಧೆಯಲ್ಲಿ ಗೆಲ್ಲುವ ಮೂಲಕ ಅನುಪಮರಾವ್ ಅವರು ಮುಂಬರುವ ಅಕ್ಟೋಬರ್‌ನಲ್ಲಿ ಸಿಂಗಾಪುರದಲ್ಲಿ ನಡೆಯುವ ಮಿಸೆಸ್ ವರ್ಲ್ಡ್ ವೈಡ್ 2022 ಸ್ಪರ್ಧೆಗೆ ಆಯ್ಕೆಯಾಗಿದ್ದಾರೆ. ಈ ಸ್ಪರ್ಧೆಯಲ್ಲಿ ಅವರು ಭಾರತವನ್ನು ಪ್ರತಿನಿಧಿಸಲಿದ್ದಾರೆ. ಅನುಪಮರಾವ್ ಭರತ ನಾಟ್ಯ ಕಲಾವಿದೆಯಾಗಿಯೂ ಜನ ಪ್ರಿಯತೆ ಪಡೆದವರು. ಅನುಪಮರಾವ್ ಅನೇಕ ಸಮಾಜಮುಖಿ ಸೇವಾ ಕಾರ್ಯ ದಲ್ಲಿಯೂ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಶ್ರೀಮತಿಯವರು ಮೈಸೂರಿನ ಎಸ್‌ಬಿಐ ಉದ್ಯೋಗಿಯಾಗಿದ್ದಾರೆ. ಕಳೆದ ಮಾರ್ಚ್ ತಿಂಗಳಲ್ಲಿ ಗೋವಾದಲ್ಲಿ ನಡೆದ ಮಿಸಸ್ ಇಂಡಿಯಾ ಯೂನಿವರ್ಸ್ 2020–21 ಸ್ಪರ್ಧೆಯಲ್ಲಿ ಅನುಪಮಾ ರಾವ್ ಮಿಸಸ್ ಇಂಡಿಯಾ ಯೂನಿವರ್ಸ್ ವಿಶ್ವ ಪ್ಲಾಟಿನಂ ವಿಭಾಗದಲ್ಲಿ ವಿಜೇತರಾಗಿದ್ದರು.

ಸುತ್ತೂರು ಮಠದಲ್ಲಿ ಇಂದು ಬೆಳದಿಂಗಳ ಸಂಗೀತ

ಮೈಸೂರು, ಮೇ 15– ಮೈಸೂರಿನ ಶ್ರೀ ಸುತ್ತೂರು ಮಠದಲ್ಲಿ ಮೇ 16ರಂದು ಸೋಮವಾರ ಸಂಜೆ 6 ಗಂಟೆಗೆ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಾನ್ನಿಧ್ಯದಲ್ಲಿ ಬೆಳದಿಂಗಳ ಸಂಗೀತ–242ರ ಅಂಗವಾಗಿ ವಿದುಷಿ ತನ್ಮಯೀ ಕೃಷ್ಣ ಮೂರ್ತಿ ಅವರಿಂದ ಗಾಯನವನ್ನು ಏರ್ಪಡಿಸಲಾಗಿದೆ.



ವಿದುಷಿ ತನ್ಮಯೀ ಕೃಷ್ಣಮೂರ್ತಿಯವರು ಕರ್ನಾಟಕ ಸಂಗೀತದ ಖ್ಯಾತ ಗಾಯಕರಲ್ಲೊಬ್ಬರು. ಸಂಗೀತದ ಕೌಟುಂಬಿಕ ಹಿನ್ನೆಲೆಯುಳ್ಳ ಇವರು ಪ್ರಸ್ತುತ ಖ್ಯಾತ ಸಂಗೀತಗಾರ–ಲೇಖಕ ವಿದ್ವಾನ್ ಟಿ.ಎಂ.ಕೃಷ್ಣರವರ ಬಳಿ ಸಂಗೀತದ ಉನ್ನತ ಅಧ್ಯಯನದಲ್ಲಿ ತೊಡಗಿದ್ದಾರೆ. ಹನ್ನೊಂದನೆ ವರ್ಷದಲ್ಲೇ ಮೊದಲ ಕಛೇರಿ ನೀಡಿದ ಪ್ರತಿಭಾನ್ವಿತರು. ಭಾರತ ಮತ್ತು ಅಮೆರಿಕದ ಪ್ರತಿಷ್ಠಿತ ಸಂಗೀತೋತ್ಸವಗಳಲ್ಲಿ ಭಾಗವಹಿಸಿದ್ದಾರೆ. "ಕಗ್ಗ ಲಹರಿ" ಎಂಬ ಆಲ್ಬಂ ತಂದಿದ್ದಾರೆ. "ಗ್ರಹಭೇದ" ಕಿರುಚಿತ್ರಕ್ಕೆ ಸಂಗೀತ ನೀಡಿದ್ದಾರೆ. ಪಕ್ಕವಾದ್ಯದಲ್ಲಿ ವಿದುಷಿ ಶ್ರುತಿ (ವಯೋಲಿನ್), ವಿದ್ವಾನ್ ವಿಕ್ರಂ ಭಾರದ್ವಾಜ್ (ಮೃದಂಗ) ಮತ್ತು ವಿದ್ವಾನ್ ರಮೇಶ್ (ಘಟಂ) ಸಹಕಾರ ನೀಡಲಿದ್ದಾರೆ.

ಎಸ್‌ಸಿ, ಎಸ್‌ಟಿ ಮೀಸಲಾತಿ ಹೆಚ್ಚಳಕ್ಕೆ ಆಗ್ರಹಿಸಿ ಮೇ 20ರಂದು ತಾಲೂಕು ಕೇಂದ್ರಗಳಲ್ಲಿ ಪ್ರತಿಭಟನೆ

ಮೈಸೂರು, ಮೇ 15(ಎಂಟಿವೈ)–ರಾಜ್ಯ ನಾಯಕರ ಹಿತರಕ್ಷಣಾ ವೇದಿಕೆ ವತಿಯಿಂದ ಪರಿಶಿಷ್ಟ ಜಾತಿಗೆ ಶೇ.17ರಷ್ಟು ಹಾಗೂ ಪರಿಶಿಷ್ಟ ಪಂಗಡಕ್ಕೆ ಶೇ.7ರಷ್ಟು ಮೀಸಲಾತಿ ಹೆಚ್ಚಳಕ್ಕೆ ಆಗ್ರಹಿಸಿ ಮೇ 20ರಂದು ಎಲ್ಲಾ ತಾಲೂಕು ಕೇಂದ್ರಗಳಲ್ಲಿ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದು ದಲಿತ ಮುಖಂಡ ಪುಟ್ಟನಂಜಯ್ಯ ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಕಳೆದ 95 ದಿನಗಳಿಂದ ಈ ನಿಟ್ಟಿನಲ್ಲಿ ಪ್ರಸನ್ನಾನಂದಸ್ವಾಮೀಜಿ ಅವರು ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ನಿರಂತರ ಧರಣಿ ನಡೆಸುತ್ತಿದ್ದಾರೆ. ಹೀಗಿದ್ದರೂ ರಾಜ್ಯ ಸರ್ಕಾರ ಗಮನ ಹರಿಸದಿರುವುದು ಬೇಸರದ ಸಂಗತಿಯಾಗಿದೆ. ಹೀಗಾಗಿ ಸರ್ಕಾರದ ಮೇಲೆ ಒತ್ತಡ ಹೇರಲು ಮೇ 20ರಂದು ಎಲ್ಲ ತಾಲೂಕುಗಳಲ್ಲಿ ಪ್ರತಿಭಟನಾ ಧರಣಿ ಹಮ್ಮಿಕೊಳ್ಳಲಾಗುತ್ತಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ರಾಜ್ಯ ನಾಯಕರ ಹಿತರಕ್ಷಣಾ ವೇದಿಕೆ ರಾಜ್ಯಾಧ್ಯಕ್ಷ ದ್ಯಾವಪ್ಪ ನಾಯಕ, ಪ್ರಭಾಕರ್ ಹುಣಸೂರು, ಎಸ್.ಸಿದ್ದಯ್ಯ, ಶಿವಕುಮಾರ್ ಇದ್ದರು.

ಶಾಸಕರಾಗಿ 4 ವರ್ಷ ಪೂರೈಸಿದ ನಾಗೇಂದ್ರಗೆ ಅಭಿನಂದನೆ



ಚಾಮರಾಜ ಕ್ಷೇತ್ರದ ಶಾಸಕರಾಗಿ ನಾಲ್ಕು ವರ್ಷಗಳನ್ನು ಪೂರೈಸಿದ ಎಲ್.ನಾಗೇಂದ್ರ ಅವರನ್ನು ಮುಡಾ ಸದಸ್ಯ ಕೆ.ಮಾದೇಶ್ ಶಾಸಕರ ಕಚೇರಿಯಲ್ಲಿ ಅಭಿನಂದಿಸಿದರು. ಕಾರ್ಪೋರೇಟರ್‌ಗಳಾದ ವೇದಾವತಿ, ಪ್ರಮೀಳಾ ಭರತ್ ಈ ವೇಳೆ ಉಪಸ್ಥಿತರಿದ್ದರು.

ಕೊಲೆ ಬೆದರಿಕೆ ಆರೋಪ: ಆರ್‌ಟಿಐ ಕಾರ್ಯಕರ್ತನ ವಿರುದ್ಧ ದೂರು ದಾಖಲು

ಮೈಸೂರು, ಮೇ 15– ಮುಡಾ ಕಚೇರಿಗೆ ಕೆಲಸದ ನಿಮಿತ್ತ ಹೋಗಿದ್ದಾಗ ಆರ್‌ಟಿಐ ಕಾರ್ಯಕರ್ತ ಗಂಗಾರಾಜು ಮತ್ತಿತರರು ತಮಗೆ ಕೊಲೆ ಬೆದರಿಕೆ ಹಾಕಿ 5 ಲಕ್ಷ ರೂ. ನೀಡುವಂತೆ ಬ್ಲಾಕ್‌ಮೇಲ್ ಮಾಡಿದ್ದಾರೆ ಎಂದು ಮೈಸೂರಿನ ಕೆ.ಜಿ.ಕೊಪ್ಪಲು ನಿವಾಸಿ ರಘು ಎಂಬುವರು ತಡವಾಗಿ ದೂರು ಸಲ್ಲಿಸಿದ್ದಾರೆ.

ತಾವು ಮತ್ತು ತಮ್ಮ ಅಣ್ಣ ಅರುಣ ಕುಮಾರ್ ಕಳೆದ ಏಪ್ರಿಲ್ 29ರಂದು ಮಧ್ಯಾಹ್ನ 12.30ರ ಸುಮಾರಿನಲ್ಲಿ ಮುಡಾ ಕಚೇರಿಗೆ ಹೋದಾಗ ಮೊದಲನೇ ಮಹಡಿಯಲ್ಲಿದ್ದ ಆರ್‌ಟಿಐ ಕಾರ್ಯಕರ್ತ ಗಂಗರಾಜು ತಮ್ಮನ್ನು ನೋಡಿ ಸಾ.ರಾ.ಮಹೇಶ್ ಸಹಚರರು ಬರುತ್ತಿದ್ದಾರೆ ಎಂದು ಏರು ದನಿಯಲ್ಲಿ ಹೇಳಿದ್ದಲ್ಲದೇ ನಿಮ್ಮ ಜಮೀನಿನ ವಿಷಯ ತೆಗೆದುಕೊಂಡು ಯಾವ ರೀತಿ ಬುದ್ಧಿ ಕಲಿಸಬೇಕು ಎಂಬುದು ನನಗೆ ಗೊತ್ತು. ನಾನು ನಿನ್ನ ವಿಚಾರಕ್ಕೆ ಬರಬಾರದೆಂದರೆ 5 ಲಕ್ಷ ರೂ. ಕೊಡಬೇಕು, ಇಲ್ಲದಿದ್ದರೆ ನಿನ್ನನ್ನು ಬಿಡುವುದಿಲ್ಲ, ಕೊಲೆ ಮಾಡುತ್ತೇನೆ ಎಂದು ಬೆದರಿಕೆ ಹಾಕಿದ್ದಲ್ಲದೇ ಅವಾಚ್ಯ ಶಬ್ದಗಳಿಂದ ನಿಂದಿಸಿದ್ದಾರೆ.

ಏಪ್ರಿಲ್ 29ರಂದು ತಮ್ಮ ತಾಯಿಯ ಸಹೋದರ ನಿಧನರಾಗಿದ್ದರಿಂದ ಆ ಕಾರ್ಯಗಳನ್ನೆಲ್ಲಾ ಮುಗಿಸಿ ತಡವಾಗಿ ದೂರು ಸಲ್ಲಿಸುತ್ತಿದ್ದೇನೆ ಎಂದು ರಘು ಅವರು ಮೇ 14ರಂದು ನೀಡಿದ ದೂರನ್ನು ದಾಖಲಿಸಿಕೊಂಡಿರುವ ಲಕ್ಷ್ಮೀಪುರಂ ಠಾಣೆ ಪೊಲೀಸರು ತಕರಾರು ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ಆನ್‌ಲೈನ್‌ನಲ್ಲಿ ಹಣ ಹೂಡಿಕೆ ಹೆಸರಲ್ಲಿ 1.95 ಲಕ್ಷ ರೂ. ವಂಚನೆ

ಮೈಸೂರು, ಮೇ 15–ಫ್ಲಿಪ್ ಕಾರ್ಟ್‌ನಲ್ಲಿ ಸೆಲ್ಲಿಂಗ್ ಮರ್ಚೆಂಟ್ ಆಗಿ ಹಣ ಹೂಡಿಕೆ ಮಾಡಿದರೆ ಕಮಿಷನ್ ಸಿಗುತ್ತದೆ ಎಂದು ನಂಬಿಸಿ ವಿದ್ಯಾರ್ಥಿನಿಗೆ 1.95 ಲಕ್ಷ ರೂ. ವಂಚಿಸಿದ ಬಗ್ಗೆ ವರದಿಯಾಗಿದೆ. ಮೈಸೂರಿನ ಚಾಮುಂಡೇಶ್ವರಿ ಲೇಔಟ್ ನಿವಾಸಿ ಹೆಚ್.ಬಿ.ರಶ್ಮಿ(29) ಎಂಬುವರೇ ವಂಚನೆಗೊಳಗಾಗಿದ್ದು, ಇವರ ಮೊಬೈಲ್‌ಗೆ ಮೇ 13ರಂದು ಮಧ್ಯಾಹ್ನ ತನ್ನನ್ನು ರಾಹುಲ್ ಸಿಂಗ್ ತನ್ವರ್ ಎಂದು ಪರಿಚಯಿಸಿಕೊಂಡ ಅಪರಿಚಿತ ವ್ಯಕ್ತಿಯೋರ್ವ ವಾಟ್ಸಾಪ್ ಮೆಸೇಜ್ ಮಾಡಿ, ಫ್ಲಿಪ್ ಕಾರ್ಟ್‌ನಲ್ಲಿ ಸೆಲ್ಲಿಂಗ್ ಮರ್ಚೆಂಟ್ ಆಗಿ ಆನ್‌ಲೈನ್‌ನಲ್ಲಿ ಹಣ ಹೂಡಿಕೆ ಮಾಡಿದರೆ ಒಳ್ಳೇ ಕಮಿಷನ್ ಸಿಗುತ್ತದೆ ಎಂದು ನಂಬಿಸಿ 1,95,549 ರೂ. ಹಣವನ್ನು ತನ್ನ ಖಾತೆಗೆ ವರ್ಗಾವಣೆ ಮಾಡಿಸಿಕೊಂಡು ಮೋಸ ಮಾಡಿದ್ದಾನೆ ಎಂದು ರಶ್ಮಿ ನೀಡಿದ ದೂರನ್ನು ದಾಖಲಿಸಿಕೊಂಡಿರುವ ಮೈಸೂರು ಸೆನ್ ಪೊಲೀಸರು ತನಿಖೆ ಮುಂದುವರೆಸಿದ್ದಾರೆ.

ಇಂದು ಬುದ್ಧವಿಹಾರದಲ್ಲಿ ವೈಶಾಖ ಬುದ್ಧ ಪೂರ್ಣಿಮೆ ಜಯಂತ್ಯುತ್ಸವ

ಮೈಸೂರು, ಮೇ 15(ಎಂಟಿವೈ)– ಮೈಸೂರಿನ ಅಶೋಕಪುರಂನಲ್ಲಿರುವ ಬುದ್ಧವಿಹಾರದಲ್ಲಿ ಮೇ 16 ರಂದು ಸಂಜೆ 5.30ಕ್ಕೆ 2566ನೇ ವೈಶಾಖ ಬುದ್ಧಪೂರ್ಣಿಮಾ ಜಯಂತ್ಯೋತ್ಸವವನ್ನು ಆಯೋಜಿಸಲಾಗಿದೆ ಎಂದು ಮಾಜಿ ಮೇಯರ್ ವಿ.ಪುರುಷೋತ್ತಮ ತಿಳಿಸಿದ್ದಾರೆ.



ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ವಿಶ್ವಮೈತ್ರಿ ಬುದ್ಧ ವಿಹಾರ ಹಾಗೂ ಮಹಾಬೋಧಿ ಮೈತ್ರಿ ಮಂಡಲದ ಸಹಯೋಗದಲ್ಲಿ ಈ ಜಯಂತ್ಯೋತ್ಸವ ಹಮ್ಮಿಕೊಳ್ಳಲಾಗಿದೆ. ಕಾರ್ಯಕ್ರಮದ ಅಂಗವಾಗಿ ಅಂದು ಬೆಳಗ್ಗೆ 8 ಗಂಟೆಗೆ ಸರಸ್ವತಿಪುರಂ ಮಹಾಬೋಧಿ ಮೈತ್ರಿ ಮಂಡಲದಿಂದ ವಿಶ್ವಮೈತ್ರಿ ಬುದ್ಧ ವಿಹಾರದವರೆಗೆ ಬುದ್ಧನ ಮೂರ್ತಿ ಮೆರವಣಿಗೆ ನಡೆಸಲಾಗುತ್ತದೆ. ಮೆರವಣಿಗೆಯನ್ನು ಹಂಗಾಮಿ ಮೇಯರ್ ಸುನಂದಾ ಪಾಲನೇತ್ರ ಉದ್ಘಾಟಿಸಲಿದ್ದಾರೆ ಎಂದು ಹೇಳಿದರು.

ಸಂಜೆ 5.30ಕ್ಕೆ ಬುದ್ಧವಿಹಾರದಲ್ಲಿ ಡಾ.ಕಲ್ಯಾಣಸಿರಿ ಭಂತೇಜಿ ಸಮ್ಮುಖದಲ್ಲಿ, ಸಂಸದ ವಿ.ಶ್ರೀನಿವಾಸ್ ಪ್ರಸಾದ್ ಅಧ್ಯಕ್ಷತೆಯಲ್ಲಿ ಭಗವಾನ್ ಬುದ್ಧರ ಜಯಂತ್ಯೋತ್ಸವ ಜರುಗಲಿದೆ. ಜಿ.ಪಂ ಉಪಕಾರ್ಯದರ್ಶಿ ಡಾ.ಎಸ್.ಪ್ರೇಮಕುಮಾರ್ ಅವರು 'ಬೌದ್ಧ ಧಮ್ಮ ಭಾರತದಲ್ಲಿ ಬಹುಜನರ ಧಮ್ಮವಾಗಿತ್ತೆ, ಹಾಗಾದರೆ ಪ್ರಸ್ತುತ ಭಾರತದಲ್ಲಿ..?' ವಿಷಯ ಕುರಿತು ಮಾತನಾಡಲಿದ್ದಾರೆ. ರಾಜ್ಯ ಲೆಕ್ಕಪತ್ರ ಇಲಾಖೆ ಜಂಟಿ ನಿರ್ದೇಶಕ ಉದ್ದನೂರು ಮಹದೇವನಾಯಕ ಅವರು 'ಬಹುಜನರಿಗೆ ಬೌದ್ಧ ಧಮ್ಮ ಅನುಸರಣೆ ಮಾರ್ಗಗಳು' ವಿಷಯ ಕುರಿತು ಮಾತನಾಡಲಿದ್ದಾರೆ. ಕಾರ್ಯಕ್ರಮದಲ್ಲಿ ಮಾಜಿ ಮೇಯರ್ ನಾರಾಯಣ್ ಹಾಗೂ ಇನ್ನಿತರರು ಪಾಲ್ಗೊಳ್ಳಲಿದ್ದಾರೆ. ಗೋಷ್ಠಿಯಲ್ಲಿ ಸಾಹಿತಿ ಸಿದ್ಧಸ್ವಾಮಣ್ಣ, ತುಂಬಲ ರಾಮಣ್ಣ, ಭವಿತ ಹಾಗೂ ರಾಜು ಅಶೋಕಪುರಂ ಇದ್ದರು.

ಗಾಂಧಿನಗರ ಶಿವಯೋಗಿ ಮಠದಲ್ಲಿ ಬುದ್ಧ ಪೂರ್ಣಿಮೆ

ಮೈಸೂರು, ಮೇ 15(ಎಂಟಿವೈ)– ಮೈಸೂರಿನ ಗಾಂಧಿ ನಗರದ 5ನೇ ಕ್ರಾಸ್‌ನಲ್ಲಿರುವ ಶಿವಯೋಗಿ ಮಠದಲ್ಲಿ ನಾಳೆ(ಮೇ 16) ಮಧ್ಯಾಹ್ನ 2 ಗಂಟೆಗೆ 2566ನೇ ಬುದ್ಧಪೂರ್ಣಿಮೆ, ವಿಶೇಷ ಉಪನ್ಯಾಸ ಹಾಗೂ ಧಮ್ಮ ಸಂಗೀತ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಭಾರತ್ ಮೂಲ ನಿವಾಸಿ ಫೌಂಡೇಷನ್ ಮುಖಂಡ ಆರ್.ಸಿದ್ದಪ್ಪ ತಿಳಿಸಿದ್ದಾರೆ. ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಭಾರತ್ ಮೂಲ ನಿವಾಸಿ ಫೌಂಡೇಷನ್ ಹಾಗೂ ಭಗವಾನ್ ಬುದ್ಧ ಸ್ನೇಹ ಬಳಗದ ಸಂಯುಕ್ತಾಶ್ರಯದಲ್ಲಿ ಬುದ್ಧ ಪೌರ್ಣಿಮೆ ಪ್ರಯುಕ್ತ ವಿವಿಧ ಕಾರ್ಯಕ್ರಮ ನಡೆಸಲಾಗುತ್ತಿದೆ. ಉರಿಲಿಂಗಪೆದ್ದಿ ಮಠದ ಜ್ಞಾನಪ್ರಕಾಶ ಸ್ವಾಮೀಜಿ, ಅಷ್ಟಾಂಗ ಮಾರ್ಗ ಧ್ಯಾನ ಕೇಂದ್ರದ ಭಂತೆ ತಿಸ್ಸ ಸಾನ್ನಿಧ್ಯ ವಹಿಸುವ ಕಾರ್ಯಕ್ರಮವನ್ನು ಮಾಜಿ ಸಂಸದ ಆರ್. ಧ್ರುವ ನಾರಾಯಣ್ ಉದ್ಘಾಟಿಸಲಿದ್ದಾರೆ. ಕಸಾಪ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್ ಅಧ್ಯಕ್ಷತೆ ವಹಿಸುವ ಕಾರ್ಯಕ್ರಮದಲ್ಲಿ ಪಾಲಿಕೆ ಸದಸ್ಯೆ ಅಶ್ವಿನಿ ಶರತ್ ಹಾಗೂ ಇನ್ನಿತರರು ಪಾಲ್ಗೊಳ್ಳಲಿದ್ದಾರೆ ಎಂದರು. ಬಳಿಕ ಸಂಜೆ 6ಕ್ಕೆ ಗಾಂಧಿನಗರದ ಡಾ.ಬಿ.ಆರ್. ಅಂಬೇಡ್ಕರ್ ವೃತ್ತದ ಬಳಿಯಿಂದ ಸೌಹಾರ್ದತೆಯ ಸರಳ ದೀಪೋತ್ಸವ ಮತ್ತು ಮೆರವಣಿಗೆ ನಡೆಯಲಿದೆ. ಪರಿಷತ್ ಸದಸ್ಯ ಅಡಗೂರು ಹೆಚ್.ವಿಶ್ವನಾಥ್ ಚಾಲನೆ ನೀಡುವರು. ಮಾಜಿ ಸಚಿವರಾದ ಡಾ.ಹೆಚ್.ಸಿ.ಮಹದೇವಪ್ಪ ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಭಾರತ್ ಮೂಲನಿವಾಸಿ ಫೌಂಡೇಷನ್ ಮುಖಂಡರಾದ ಶರತ್ ಸತೀಶ್, ಚೇತನ್ ಕಾಂತರಾಜು, ಪ್ರಕಾಶ್, ಕಿರಣ್‌ಕುಮಾರ್, ರಾಮ್‌ಸಿಂಗ್ ಹಾಗೂ ಪಾಪಣ್ಣ ಇದ್ದರು.

ಮೇ 29ರಿಂದ ಮೈಸೂರಲ್ಲಿ ಎಐಟಿಯುಸಿ ರಾಜ್ಯ ಸಮ್ಮೇಳನ

ಕಾರ್ಮಿಕ ವಿರೋಧಿ ನೀತಿ, ಜನರ ಸಮಸ್ಯೆಗಳ ಬಗ್ಗೆ ಚರ್ಚೆ

ಮೈಸೂರು, ಮೇ 15(ಎಂಟಿವೈ)– ದೇಶದಲ್ಲಿ ಕಾರ್ಮಿಕರು ಹಾಗೂ ಜನರು ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ಹಾಗೂ ಕಾರ್ಮಿಕ ವಿರೋಧಿ ನೀತಿ ವಿರುದ್ಧ ಚರ್ಚಿಸಲು ಮೈಸೂರಲ್ಲಿ ಮೇ 29ರಿಂದ 30ರವರೆಗೆ ಅಖಿಲ ಭಾರತ ಟ್ರೇಡ್ ಯೂನಿಯನ್ ಕಾಂಗ್ರೆಸ್ (ಎಐಟಿಯುಸಿ)ನ 11ನೇ ರಾಜ್ಯ ಸಮ್ಮೇಳನ ಆಯೋಜಿಸಲಾಗಿದೆ ಎಂದು ಎಐಟಿಯುಸಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಹೆಚ್.ಆರ್. ಶೇಷಾದ್ರಿ ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ದೇಶದ ಅತ್ಯಂತ ಹಳೆಯ ಕಾರ್ಮಿಕ ಸಂಘಟನೆಗಳಲ್ಲಿ ಒಂದಾಗಿರುವ ಅಖಿಲ ಭಾರತ ಟ್ರೇಡ್ ಯೂನಿಯನ್ ಕಾಂಗ್ರೆಸ್(ಎಐಟಿಯುಸಿ) ಹಲವು ದಶಕಗಳಿಂದಲೂ ಕಾರ್ಮಿಕರ ಹಿತಕಾಯುವುದಕ್ಕೆ ಬದ್ಧವಾಗಿ ಸೇವೆ ಸಲ್ಲಿಸುತ್ತಾ ಬಂದಿದೆ ಎಂದರು.

ದೇಶದಲ್ಲಿ ಕೇಂದ್ರ ಸರ್ಕಾರ ಕಾರ್ಮಿಕ ವಿರೋಧಿ ನೀತಿಯನ್ನು ಅನುಸರಿಸುವ ಮೂಲಕ ಕಾರ್ಮಿಕರನ್ನು ಶೋಷಣೆಗೆ ಗುರಿಯಾಗಿಸುತ್ತಿದೆ. ಕಾರ್ಮಿಕ ಕಾಯ್ದೆಗಳಿಗೆ ತಿದ್ದುಪಡಿ ತರುವ ಮೂಲಕ ಕಾರ್ಮಿಕರ ಮೇಲೆ ದೌರ್ಜನ್ಯ ನಡೆಸುತ್ತಿದೆ. ತಿದ್ದುಪಡಿ ಮೂಲಕ ಕಾರ್ಮಿಕ ಕಾಯ್ದೆಗಳನ್ನು 4 ಕೋಡ್‌ಗಳಾಗಿ ವಿಂಗಡಿಸಲಾಗಿದೆ. ಇದರಿಂದ ಮುಂಬರುವ ದಿನಗಳಲ್ಲಿ ಕಾರ್ಮಿಕರ ಮೇಲೆ ಇನ್ನಷ್ಟು ಗದಾಪ್ರಹಾರ ನಡೆಯುವ ಸಾಧ್ಯತೆ ಹೆಚ್ಚಾಗಲಿದೆ. ಕಾರ್ಮಿಕ ಹಕ್ಕುಗಳನ್ನು ಕಸಿಯುವ ಹುನ್ನಾರ ನಿರಂತರವಾಗಿ ನಡೆಯುತ್ತಿದೆ. ಈ ಹಿನ್ನೆಲೆಯಲ್ಲಿ ಕಾರ್ಮಿಕರು ಹಾಗೂ ಜನರು ಎದುರಿಸುತ್ತಿರುವ ಸಮಸ್ಯೆಗಳನ್ನು ಚರ್ಚಿಸಲು ಮೈಸೂರಲ್ಲಿ ರಾಜ್ಯ ಸಮ್ಮೇಳನ ಹಾಗೂ ಪ್ರತಿನಿಧಿ ಸಮಾವೇಶ ಹಮ್ಮಿಕೊಳ್ಳಲಾಗಿದೆ ಎಂದರು.

ಮೇ 29ರಂದು ಬೆಳಗ್ಗೆ 10.30ಕ್ಕೆ ಮೈಸೂರಿನ ಪುರಭವನದ ಮೈದಾನದಲ್ಲಿ ಕಾರ್ಮಿಕರ ಮೆರವಣಿಗೆ ಚಾಲನೆ ದೊರೆಯಲಿದೆ. ವಿವಿಧ ರಸ್ತೆಗಳಲ್ಲಿ ಸಂಚರಿಸಿದ ಬಳಿಕ ಪುರಭವನ ತಲುಪಲಿದೆ. ಬಳಿಕ ಅಂದು ಮಧ್ಯಾಹ್ನ 12ಕ್ಕೆ ಪುರಭವನದ ಮೈದಾನದಲ್ಲಿ ಬಹಿರಂಗ ಅಧಿವೇಶನ ನಡೆಯಲಿದೆ. ಎಐಟಿಯುಸಿ ಕರ್ನಾಟಕ ರಾಜ್ಯ ಸಮಿತಿ ಅಧ್ಯಕ್ಷ ಕಾಂ.ಹೆಚ್.ವಿ.ಅನಂತ ಸುಬ್ಬರಾವ್ ಅಧ್ಯಕ್ಷತೆಯಲ್ಲಿ ನಡೆಯುವ ಸಮಾವೇಶವನ್ನು ಎಐಟಿಯುಸಿ ಪ್ರಧಾನ ಕಾರ್ಯದರ್ಶಿ ಕಾಂ.ಅಮರ್‌ಜೀತ್ ಕೌರ್ ಉದ್ಘಾಟಿಸಲಿದ್ದಾರೆ. ಭಾರತ್ ಕಮ್ಯುನಿಸ್ಟ್ ಪಕ್ಷದ ಕಾರ್ಯದರ್ಶಿ ಕಾಂ.ಸಾತಿ ಸುರೇಶ್ ಹಾಗೂ ಇನ್ನಿತರರು ಪಾಲ್ಗೊಳ್ಳಲಿದ್ದಾರೆ ಎಂದು ತಿಳಿಸಿದರು.

ಸಂಜೆ 4 ಗಂಟೆಗೆ ಗುರು ರೆಸಿಡೆನ್ಸಿ ಸಮೀಪದ ಗೋವಿಂದರಾವ್ ಮೆಮೋರಿಯಲ್ ಹಾಲ್‌ನಲ್ಲಿ ಪ್ರತಿನಿಧಿ ಸಮಾವೇಶ ಆರಂಭವಾಗಲಿದೆ. ಮೇ 31ರವರೆಗೂ ವಿವಿಧ ವಿಷಯಗಳ ಬಗ್ಗೆ ಚರ್ಚೆ ನಡೆಯಲಿದೆ. ಕೇಂದ್ರದ ಕಾರ್ಪೊರೇಟ್ ಪರ ನೀತಿ ವಿರುದ್ಧ ಪ್ರತಿಭಟನೆ ಹಮ್ಮಿಕೊಳ್ಳುವುದು ಹಾಗೂ ಕಾರ್ಮಿಕರ ಐಕ್ಯತೆ ಮುರಿಯಲು ನಡೆಸುತ್ತಿರುವ ಯತ್ನಗಳನ್ನು ಹಿಮ್ಮೆಟ್ಟಿಸುವ ಬಗ್ಗೆ ಈ ಸಮ್ಮೇಳನ ಗಮನ ಹರಿಸಲಿದೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಎಐಟಿಯುಸಿ ರಾಜ್ಯ ಪ್ರಧಾನ ಕಾರ್ಯದರ್ಶಿ ಡಿ.ಎ.ವಿಜಯಭಾಸ್ಕರ್, ಎನ್.ಕೆ.ದೇವದಾಸ್, ಹೆಚ್.ಬಿ.ರಾಮಕೃಷ್ಣ, ಕೆ.ಜಿ.ಸೋಮರಾಜೇ ಅರಸ್ ಇನ್ನಿತರರು ಉಪಸ್ಥಿತರಿದ್ದರು.

ಬುದ್ಧನ ಚಿಂತನೆಗಳ ಕುರಿತು ಇಂದು ಉಪನ್ಯಾಸ

ಮೈಸೂರು, ಮೇ 15(ಪಿಎಂ)– ಮೈಸೂರು ವಿವಿ ಡಾ.ಬಿ.ಆರ್. ಅಂಬೇಡ್ಕರ್ ಸಂಶೋಧನಾ ಹಾಗೂ ವಿಸ್ತರಣಾ ಕೇಂದ್ರ ಮತ್ತು ಸಮಾನತೆ–ಸ್ವಾಭಿಮಾನ–ಸ್ವಾವಲಂಬನೆ ಪ್ರತಿಷ್ಠಾನದ ಜಂಟಿ ಆಶ್ರಯದಲ್ಲಿ ಮೇ 16ರಂದು 2566ನೇ ಬುದ್ಧ ಪೂರ್ಣಿಮೆ ಹಾಗೂ 'ಸಮಕಾಲೀನ ಜಗತ್ತಿಗೆ ಬುದ್ಧನ ಚಿಂತನೆಗಳು' ಕುರಿತು ವಿಶೇಷ ಉಪನ್ಯಾಸ ಹಮ್ಮಿಕೊಳ್ಳಲಾಗಿದೆ. ಮೈಸೂರು ಮಾನಸ ಗಂಗೋತ್ರಿಯ ವಿಶ್ವಜ್ಞಾನಿ ಸಭಾಂಗಣದಲ್ಲಿ ಬೆಳಗ್ಗೆ 11ಕ್ಕೆ ಸಂಸದ ವಿ.ಶ್ರೀನಿವಾಸ ಪ್ರಸಾದ್ ಕಾರ್ಯಕ್ರಮದ ಉದ್ಘಾಟನೆ ನೆರವೇರಿಸಲಿದ್ದಾರೆ. ಮೈಸೂರು ಅಶೋಕ ವೃತ್ತದ ವಿಶ್ವಮೈತ್ರಿ ಬುದ್ಧ ವಿಹಾರದ ಡಾ.ಕಲ್ಯಾಣಸಿರಿ ಭಂತೇಜಿ ಉಪನ್ಯಾಸ ನೀಡಲಿದ್ದಾರೆ. ಮೈಸೂರು ವಿವಿ ಕುಲಪತಿ ಪ್ರೊ.ಜಿ.ಹೇಮಂತ್ ಕುಮಾರ್ ಅಧ್ಯಕ್ಷತೆ ವಹಿಸಲಿದ್ದಾರೆ.

'ದೇಸಿ ಉತ್ಸವ'ದಲ್ಲಿ ಗಮನ ಸೆಳೆದ ಕುಂಟೆ ಬಿಲ್ಲೆ, ಪಗಡೆ, ಚೌಕಾಬಾರ, ಹುಲಿ–ಕುರಿ ಆಟ

ಮೈಸೂರು, ಮೇ 15(ಜಿಎ)–ರಾಷ್ಟ್ರೋತ್ಥಾನ ವಿದ್ಯಾ ಕೇಂದ್ರದ ವತಿಯಿಂದ ಎನ್‌ಐಇ ಸುವರ್ಣ ಮಹೋತ್ಸವ ಸಭಾಂಗಣದಲ್ಲಿ ಆಯೋಜಿಸಿದ್ದ 'ದೇಸಿ ಉತ್ಸವ'ವನ್ನು ಅಂತಾರಾಷ್ಟ್ರೀಯ ಯೋಗ ಪಟು ಖುಷಿ ಶನಿವಾರ ಉದ್ಘಾಟಿಸಿದರು.

ನಂತರ ಮಾತನಾಡಿದ ಅವರು, ಲಾಕ್‌ಡೌನ್ ಸಂದರ್ಭದಲ್ಲಿ ಮನೆಯಿಂದ ಹೊರಬರಲಾಗದ ಪರಿಸ್ಥಿತಿಯಿದ್ದಾಗ ಚೌಕಾಬಾರ, ಪಗಡೆ, ಅಳಿಗುಳಿಮನೆ ಮತ್ತು ಅನೇಕ ದೇಸಿ ಆಟಗಳು ಮಕ್ಕಳನ್ನು ಆಕರ್ಷಿಸಿದೆ. ಅದೇ ರೀತಿ ಪ್ರತಿಯೊಬ್ಬರಿಗೂ ಈ ಕ್ರೀಡೆ ತಲುಪುವಂತಾಗಬೇಕು. ದೇಸಿ ಕ್ರೀಡೆಗಳಿಗೆ ಅಂತಾರಾಷ್ಟ್ರೀಯ ಮಟ್ಟದಲ್ಲಿ ಮಾನ್ಯತೆ ದೊರೆಯುತ್ತಿದೆ. ಅದೇ ರೀತಿ ಇನ್ನಷ್ಟು ಕ್ರೀಡೆಗಳು ಮುನ್ನೆಲೆಗೆ ಬರಬೇಕು ಎಂದರು.

ಕೆಲ ಪೋಷಕರ ತಪ್ಪಿನಿಂದ ಮಕ್ಕಳಿಗೆ ದೇಸಿ ಕ್ರೀಡೆ ಬಗ್ಗೆಯೇ ತಿಳಿದಿಲ್ಲ. ಏಕೆಂದರೆ ತಂದೆ, ತಾಯಿಗಳು ತಮ್ಮ ಹಿಂದಿನ ತಲೆಮಾರಿನ ಆಟ, ಸಂಸ್ಕೃತಿ, ನಡವಳಿಕೆಗಳನ್ನು ಮಕ್ಕಳಿಗೆ ಹೇಳಿಕೊಟ್ಟಿಲ್ಲ ಎಂದು ರಾಷ್ಟ್ರೋತ್ಥಾನ ವಿದ್ಯಾ ಕೇಂದ್ರದ ಕಾರ್ಯದರ್ಶಿ ಎ.ಆರ್.ಮಲ್ಲರಾಜ್ ಅರಸು ಬೇಸರ ವ್ಯಕ್ತಪಡಿಸಿದರು.

'ದೇಸಿ ಉತ್ಸವ'ದಲ್ಲಿ ಪಾಲ್ಗೊಂಡಿದ್ದ ಮೈಸೂರಿನ ವಿವಿಧ ಶಾಲೆಯ ವಿದ್ಯಾರ್ಥಿಗಳು ಕುಂಟೆ ಬಿಲ್ಲೆ, ಪಗಡೆ, ಚೌಕಾಬಾರ, ಹುಲಿ– ಕುರಿ, ಅಳಿಗುಳಿ ಮನೆ ಮತ್ತಿತರ ಗ್ರಾಮೀಣ ಸೊಗಡಿನ ಆಟಗಳನ್ನು ಆಡಿ ಗಮನಸೆಳೆದರು ಮಕ್ಕಳು ಕೂಡ ಅಷ್ಟೇ ಆಸಕ್ತಿಯಿಂದ ಪ್ರತಿಯೊಂದರಲ್ಲೂ ಭಾಗವಹಿಸಿ ಮಕ್ಕಳು ಎತ್ತಿನ ಗಾಡಿಯಲ್ಲಿನ ಕುಳಿತು ಸ್ವಲ್ಪ ದೂರ ಚಲಿಸಿ ಸಂತಸಪಟ್ಟರು.



ಸಫಾಯಿ ಕರ್ಮಚಾರಿಗಳಿಗೆ 28,000 ವೇತನ, ಉದ್ಯೋಗ ಭದ್ರತೆ, ಪಿಂಚಣಿ ಸೌಲಭ್ಯಕ್ಕೆ ಆಗ್ರಹ

ಮೈಸೂರು, ಮೇ 15(ಎಂಟಿವೈ)–ರಾಜ್ಯದ ವಿವಿಧ ಭಾಗಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಫಾಯಿ ಕರ್ಮಚಾರಿಗಳಿಗೆ ಕನಿಷ್ಠ 28,000 ವೇತನ, ಉದ್ಯೋಗ ಭದ್ರತೆ ಹಾಗೂ ನಿವೃತ್ತಿ ಪಿಂಚಣಿಯಂತಹ ಭದ್ರತಾ ಸೌಲಭ್ಯ ಜಾರಿಗೊಳಿಸಬೇಕು ಎಂದು ರಾಜ್ಯ ಸಫಾಯಿ ಕರ್ಮಚಾರಿ ಮ್ಯಾನುವಲ್ ರಾಜ್ಯ ಉಸ್ತುವಾರಿ ಎಂ.ವಿ.ವೆಂಕಟೇಶ್ ಒತ್ತಾಯಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದ ಮಹಾನಗರಗಳಲ್ಲಿ, ಪುರಸಭೆಗಳು ಹಾಗೂ ಹಳ್ಳಿಗಳಲ್ಲಿ ಪೌರ ಕಾರ್ಮಿಕರು ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಅವರಿಗೆ ಯಾವುದೇ ರೀತಿಯ ಜೀವನ ಭದ್ರತೆ ದೊರೆಯುತ್ತಿಲ್ಲ ಹಾಗೂ ಕೆಲಸ ನಿರ್ವಹಿಸುವ ಸ್ಥಳಗಳಲ್ಲಿ ಮಹಿಳಾ ಸಿಬ್ಬಂದಿಗಳಿಗೆ ವಿಶ್ರಾಂತಿ ಕೊಠಡಿಗಳ ಸೌಲಭ್ಯವಿಲ್ಲ. ಈ ಕಾರ್ಮಿಕರಿಗೆ ಕಾನೂನಿನ ಅರಿವಿಲ್ಲದ ಕಾರಣ ಇದನ್ನೆ ಬಂಡವಾಳವಾಗಿಸಿಕೊಂಡು ಕೆಲವು ಅನಧಿಕೃತ ಸಂಘಟನೆಗಳು ನಿಮಗೆ ಸರ್ಕಾರದ ಸೌಲಭ್ಯ ದೊರಕಿಸಿಕೊಡುತ್ತೇವೆ ಎಂದು ಆಸೆ ತೋರಿಸಿ ಅವರಿಂದ ಹಣ ಸಂಗ್ರಹ ಮಾಡುತ್ತಿದ್ದಾರೆ. ದಿಕ್ಕು ದೋಚದೆ ಕಾರ್ಮಿಕರು ಹಣ ನೀಡಿ ಮೋಸ ಹೋಗುತ್ತಿದ್ದಾರೆ ಎಂದು ಆರೋಪಿಸಿದರು.

2018ರಲ್ಲಿ ಶಂಕರಲಿಂಗೇಗೌಡ ಎಂಬ ಐಎಎಸ್ ಅಧಿಕಾರಿಯೊಬ್ಬರು ನೋಂದಣಿ ಪತ್ರವಿಲ್ಲದ 24 ಅನಧಿಕೃತ ಸಂಘಟನೆಗಳನ್ನು ನಿಷೇಧಿಸಿದ್ದರು. ಅದೇ ಮಾದರಿಯಲ್ಲಿ ಪೌರಕಾರ್ಮಿಕರ ಸಂಘಟನೆ ಎಂದು ಹೇಳಿಕೊಂಡು ದಿಕ್ಕು ತಪ್ಪಿಸುವ ಸಂಘಟನೆಗಳ ವಿರುದ್ಧ ಕ್ರಮ ಕೈಗೊಳ್ಳಬೇಕು. ಸರ್ಕಾರ ಕೂಡಲೇ ಸಫಾಯಿ ಕರ್ಮಚಾರಿ ಕಾರ್ಮಿಕರ ಸಮಸ್ಯೆಗಳಿಗೆ ಸೂಕ್ತವಾಗಿ ಸ್ಪಂದಿಸಿ ಬೇಡಿಕೆಗಳನ್ನು ಈಡೇರಿಸಬೇಕು. ಕ್ಷುಲ್ಲಕ ಕಾರಣಕ್ಕಾಗಿ ನಗರ ಪಾಲಿಕೆ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದ 12 ಜನ ಪೌರ ಕಾರ್ಮಿಕರನ್ನು ಅಮಾನತು ಮಾಡಲಾಗಿದೆ ಅವರನ್ನು ಕೂಡಲೇ ಮರು ನೇಮಕ ಮಾಡಿಕೊಳ್ಳಬೇಕೆಂದು ಎಂ.ವಿ.ವೆಂಕಟೇಶ್ ಒತ್ತಾಯಿಸಿದರು.

ಬೈಕ್‌ಗೆ ಲಾರಿ ಡಿಕ್ಕಿ: ಸವಾರ ಸಾವು

ಮೈಸೂರು, ಮೇ 15–ಬೈಕಿಗೆ ಲಾರಿ ಡಿಕ್ಕಿ ಹೊಡೆದು ಸವಾರ ಸ್ಥಳದಲ್ಲೇ ಸಾವನ್ನಪ್ಪಿದ ಘಟನೆ ಮೈಸೂರು–ತಿ.ನರಸೀಪುರ ರಸ್ತೆಯ ಪ್ರಕೃತಿ ಬಡಾವಣೆ ಬಳಿ ಮೇ 12ರಂದು ರಾತ್ರಿ ಸಂಭವಿಸಿದೆ. ಮೈಸೂರು ತಾಲೂಕು ಚಿಕ್ಕಹಳ್ಳಿ ಗ್ರಾಮದ ಚೇತನ್ ಎಂಬಾತನೇ ಅಪಘಾತದಲ್ಲಿ ಮೃತಪಟ್ಟವನಾಗಿದ್ದು, ಈತ ತನ್ನ ಬೈಕ್‌ನಲ್ಲಿ (ಕೆಎ 55 ಇಎ 5245) ಚಿಕ್ಕಳ್ಳಿಯಿಂದ ಆಲನಹಳ್ಳಿ ಕಡೆಗೆ ಬರುತ್ತಿದ್ದಾಗ ಅತೀ ವೇಗವಾಗಿ ಬಂದ ಲಾರಿ (ಕೆಎ 01 ಎಜೆ 9816) ಬೈಕ್‌ಗೆ ಹಿಂಬದಿಯಿಂದ ಡಿಕ್ಕಿ ಹೊಡೆದಿದೆ. ಸವಾರ ಚೇತನ್ ತಲೆಗೆ ತೀವ್ರ ಪೆಟ್ಟಾಗಿ ಸ್ಥಳದಲ್ಲೇ ಸಾವನ್ನಪ್ಪಿದ್ದಾನೆ. ಈ ಸಂಬಂಧ ಸಿದ್ಧಾರ್ಥನಗರ ಸಂಚಾರ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ಇಂದು ಶನಿ ಮಹಾ ಶಾಂತಿ


ಮೈಸೂರು,ಮೇ 15–ಮೈಸೂರಿನ ದೇವರಾಜ ಮೊಹಲ್ಲಾದಲ್ಲಿರುವ ಶ್ರೀ ಅಮೃತೇಶ್ವರ ದೇವಸ್ಥಾನದಲ್ಲಿ ಸೋಮವಾರ ಮೇ 16ರಂದು ಹುಣ್ಣಿಮೆ ಪ್ರಯುಕ್ತ ಮಿಥುನ, ಕನ್ಯಾ, ಧನಸ್ಸು. ಮಕರ, ಕುಂಭ ರಾಶಿಯವರಿಗೆ ವಿಶೇಷ ಸಂಕಲ್ಪದೊಂದಿಗೆ ಶನಿ ಮಹಾ ಶಾಂತಿ, ಬಾಧಾ ನಿವಾರಕ ಶ್ರೀ ಮಹಾ ಸುದರ್ಶನ ಹೋಮ, ಕುಜ ದೋಷ ಶಾಂತಿ ಮಹಾ ಮೃತ್ಯುಂಜಯ ಹೋಮ ಮತ್ತು ಶ್ರೀ ಸತ್ಯನಾರಾಯಣ ಪೂಜೆ ಏರ್ಪಡಿಸಿದೆ. ಬೆಳಗ್ಗೆ 8.30ಗೆ ಪ್ರಾರಂಭವಾಗಿ 12ಕ್ಕೆ ಮಹಾ ಮಂಗಳಾರತಿ. ಹೆಚ್ಚಿನ ವಿವರಗಳಿಗೆ ಮೈ ಕುಮಾರ್ (ಜಾತಕ ವಿಮರ್ಶಕ)ರನ್ನು ಮೊ. ಸಂ.9845 183392 948096 6522 ಸಂಪರ್ಕಿಸಬಹುದು.

ಅಪರಿಚಿತ ವಾಹನ ಡಿಕ್ಕಿ: ಬೈಕ್ ಸವಾರ ಸಾವು

ಬನ್ನೂರು, ಮೇ 15–ಅಪರಿಚಿತ ವಾಹನ ಡಿಕ್ಕಿ ಹೊಡೆದು ಬೈಕ್ ಸವಾರ ಸಾವನ್ನಪ್ಪಿದ ಘಟನೆ ನಂಜಾಪುರ ಗ್ರಾಮದ ಬಳಿ ಮೇ 12ರಂದು ಸಂಭವಿಸಿದೆ. ನಂಜನಗೂಡು ತಾಲೂಕು ತಾಯೂರು ಗ್ರಾಮದ ಟಿ.ಎಸ್.ಕುಮಾರ್(35) ಎಂಬಾತ ಮದುವೆಗೆಂದು ಮಳವಳ್ಳಿಗೆ ಹೋಗಿ ಹಿಂತಿರುಗುತ್ತಿದ್ದಾಗ ಮೇ 12ರಂದು ರಾತ್ರಿ 9 ಗಂಟೆ ಸುಮಾರಿನಲ್ಲಿ ನಂಜಾಪುರ ಗ್ರಾಮದಲ್ಲಿ ಅಪರಿಚಿತ ವಾಹನ ಬೈಕ್‌ಗೆ ಡಿಕ್ಕಿ ಹೊಡೆದ ಪರಿಣಾಮ ಆತ ತೀವ್ರವಾಗಿ ಗಾಯಗೊಂಡಿದ್ದಾನೆ.

ದಾರಿಹೋಕರು ಆತನನ್ನು ಬನ್ನೂರು ಸರ್ಕಾರಿ ಆಸ್ಪತ್ರೆಗೆ ದಾಖಲಿಸಿದ್ದು, ಮಾರ್ಗ ಮಧ್ಯೆಯೇ ಆತ ಸಾವನ್ನಪ್ಪಿರುವುದಾಗಿ ವೈದ್ಯರು ಘೋಷಿಸಿದ್ದಾರೆ. ಈ ಸಂಬಂಧ ಬನ್ನೂರು ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ


16.05.2022 ಸೋಮವಾರ, ಮಳೆ ನಕ್ಷತ್ರ : ಕೃತಿಕ 11.05.2022 ರಿಂದ 24.05.2022 ಶ್ರೀ ಶುಭಕೃತುನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ, ಶುಕ್ಲ ಪಕ್ಷ ತಿಥಿ: ಹುಣ್ಣಿಮೆ, ನಕ್ಷತ್ರ: ವಿಶಾಖ, ರಾಹುಕಾಲ: ಬೆಳಗ್ಗೆ 7.30 ರಿಂದ 9ರವರೆಗೆ

■ **ವಿಶ್ವ ಮೈತ್ರಿ ಬುದ್ಧ ವಿಹಾರ:** ಸರಸ್ವತಿಪುರಂ ಮಹಾ ಬೋಧಿ ಕಾಲೋನಿ ಮಂಡಲದಿಂದ ವಿಶ್ವ ಜ್ಯೋತಿ ಬುದ್ಧವಿಹಾರದ ವರೆಗೆ ಬೆಳಗ್ಗೆ 8 ಗಂಟೆಗೆ ಮೆರವಣಿಗೆ. ಉದ್ಘಾಟನೆ: ಹಂಗಾಮಿ ಮೇಯರ್ ಸುನಂದಾ ಪಾಲನೇತ್ರ, ಸಂಜೆ 5.30ಕ್ಕೆ ವಿಶ್ವ ಮೈತ್ರಿ ಬುದ್ಧವಿಹಾರದಲ್ಲಿ ಭಗವಾನ್ ಬುದ್ಧಪೂರ್ಣಿಮೆ, ಸಮ್ಮುಖ: ವಿಶ್ವ ಮೈತ್ರಿ ಬುದ್ಧವಿಹಾರದ ಕಲ್ಯಾಣ ಸಿರಿ ಭಂತೇಜಿ, ಅಧ್ಯಕ್ಷತೆ ಸಂಸದ ವಿ.ಶ್ರೀನಿವಾಸ್ ಪ್ರಸಾದ್, ಉಪಸ್ಥಿತಿ: ಮಾಜಿ ಮಹಾಪೌರ ನಾರಾಯಣ್.

■ **ವಿಜಯನಗರ ಸಾಂಸ್ಕೃತಿಕ ಸಂಸ್ಥೆ:** ವಿಜಯನಗರ ಸಾಂಸ್ಕೃತಿಕ ಸಂಸ್ಥೆ, ಮೈಸೂರು ತೆಲುಗು ರೆಡ್ಡಿ ಶ್ರೀರಾಮ ಮಂದಿರ, ರೋಟರಿ ಕ್ಲಬ್ ಪಂಚಶೀಲ, ಮೈಸೂರು ರೇಸ್ ಕ್ಲಬ್ ಚಾರಿಟೆಬಲ್ ಕಣ್ಣಿನ ಆಸ್ಪತ್ರೆ, ಜಿಲ್ಲಾ ಅಂಧತ್ವ ನಿವಾರಣಾ ಸಂಸ್ಥೆ ಸಂಯುಕ್ತಾಶ್ರಯದಲ್ಲಿ ದಿ. ಬಿ.ಎಂ.ಮರಿಗೌಡರ ಸ್ಮರಣಾರ್ಥ ಉಚಿತ ಕಣ್ಣಿನ ಪೊರೆ ತಪಾಸಣಾ ಶಿಬಿರ, ಉದ್ಘಾಟನೆ: ಮಾಜಿ ಶಾಸಕ ವಾಸು, ಅಧ್ಯಕ್ಷತೆ: ತೆಲುಗು ರೆಡ್ಡಿ ಶ್ರೀರಾಮ ಮಂದಿರದ ಅಧ್ಯಕ್ಷ ಗುರುಪ್ರಸಾದ್, ಮುಖ್ಯ ಅತಿಥಿಗಳು: ಮೈಸೂರು ಮಹಾನಗರ ಪಾಲಿಕೆ ಸದಸ್ಯ ಆರ್.ರಂಗಸ್ವಾಮಿ, ತೆಲುಗು ರೆಡ್ಡಿ ಶ್ರೀರಾಮ ಮಂದಿರದ ಗೌರವಾಧ್ಯಕ್ಷ ಗುರುರಾಜ್, ಸಮಾಜ ಸೇವಕಿ ಸುಶೀಲ ಮರಿಗೌಡ ಸ್ಥಳ: ತೆಲುಗುರೆಡ್ಡಿ ಶ್ರೀರಾಮ ಮಂದಿರ ತಿಲಕ್ ನಗರ, ಸಮಯ: ಬೆಳಗ್ಗೆ 10ಕ್ಕೆ

■ **ಮೈಸೂರು ವಿಶ್ವವಿದ್ಯಾನಿಲಯ:** ಮಾನಸಗಂಗೋತ್ರಿ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಶ್ರೀ ಬಸವೇಶ್ವರ ಸಾಮಾಜಿಕ ಪರಿಷ್ಕರಣೆ, ಸಂಶೋಧನೆ ಮತ್ತು ವಿಸ್ತರಣಾ ಕೇಂದ್ರದಲ್ಲಿ ಬಸವ ಜಯಂತಿ ಕಾರ್ಯಕ್ರಮ, ಜನಪದರು ಕಂಡ ಬಸವೇಶ್ವರರು ಎಂಬ ವಿಷಯದ ಕುರಿತು ವಿಶೇಷ ಉಪನ್ಯಾಸ: ವಿಶ್ರಾಂತ ಪ್ರಾಧ್ಯಾಪಕ ಡಾ.ಪಿ.ಕೆ.ರಾಜಶೇಖರ, ಅಧ್ಯಕ್ಷತೆ: ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ನಿರ್ದೇಶಕ ಡಾ. ಎಂ.ಜಿ. ಮಂಜುನಾಥ, ಉಪಸ್ಥಿತಿ: ಬಸವೇಶ್ವರ ಸಂಶೋಧನಾ ಕೇಂದ್ರದ ಸಂದರ್ಶಕ ಪ್ರಾಧ್ಯಾಪಕ ಡಾ.ಚಂದ್ರಶೇಖರಯ್ಯ, ಸ್ಥಳ: ಸಮಿತಿ ಕೊಠಡಿ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಸಮಯ: ಬೆಳಗ್ಗೆ 11ಕ್ಕೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.05 ಚಿಂತನ, 6.20 ಗೀತಾರಾಧನ, 6.35 ಹಾಥೂ ಸಂಜೆ 5ಕ್ಕೆ ಶತಮಾನದ ಸ್ಮೃತಿಗಳು: ಮಂಡ್ಯ ಜಿಲ್ಲೆಯ ಶತಮಾನದ ನೆನಪುಗಳು–ಲೇಖನ ಪ್ರಸ್ತುತಿ: ಡಿ.ಎನ್. ಶ್ರೀಪಾದ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಕಾರ್ಯಕ್ರಮ, ಗಾಯನ–ಎಂ.ಎ.ಶೋಭಾ, ವ್ಯಾಖ್ಯಾನ: ಡಾ. ಪ್ರದೀಪ್ ಕುಮಾರ್ ಹೆಬ್ರಿ, 7.45 ನಿತ್ಯ ವಿಜ್ಞಾನ: ಪ್ರಾಯೋಜಿತ ಕಾರ್ಯಕ್ರಮ, 9.05 ಯಕ್ಷ ಸಂಪದ: ಯಕ್ಷಗಾನ ಬಡಗುತಿಟ್ಟಿನ ಮಟ್ಟುಗಳ ರೇಡಿಯೋ ಪ್ರಾತ್ಯಕ್ಷಿಕೆ ಕರ್ನಾಟಕ ಯಕ್ಷಗಾನ ಅಕಾಡೆಮಿ ಪ್ರಾಯೋಜಿತ ಕಾರ್ಯಕ್ರಮ, ನಿರ್ಮಾಣ: ದಿವಾಕರ ಹೆಗಡೆ, 9.35 ಭಾರತದ ಸ್ವಾತಂತ್ರ್ಯ ಅಮೃತ ಮಹೋತ್ಸವದ ಸಂದರ್ಭದಲ್ಲಿ ದೈನಂದಿನ ವಿಶೇಷ ಕಾರ್ಯಕ್ರಮ ಸರಣಿ 'ಸ್ವಾತಂತ್ರ್ಯ ಚಳುವಳಿಯ ಪಯಣ' ಆಕಾಶವಾಣಿಯೊಂದಿಗೆ, 10.00 ಲಯಸಂಭ್ರಮ: ತಾಳ, ಲಯ, ರಸಾಸ್ವಾದ, ಪ್ರಸ್ತುತಿ: ಹೆಚ್.ಎಲ್.ಶಿವಶಂಕರಸ್ವಾಮಿ, ನಿರ್ಮಾಣ: ಎಸ್. ಸುಬ್ರಹ್ಮಣ್ಯ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ. **ಮಧ್ಯಾಹ್ನ:** 12.05 ವನಿತಾ ವಿಹಾರ, 12.30 ಭಕ್ತಿಗೀತೆಗಳು–ಎಂ.ವೆಂಕಟೇಶ್ ಕುಮಾರ್, ಶಂಕರ್ ಶ್ಯಾನುಭಾಗ್, 12.45 ನಮ್ಮ ಆರೋಗ್ಯ: ರಕ್ತ ಹೀನತೆ ಅಥವಾ ಅನಿಮಿಯಾ–ಕಾರಣಗಳು ಮತ್ತು ಪರಿಹಾರ ಕುರಿತು ಡಾ. ಮಂಜುಭಾರ್ಗವ ಬಿ.ಆರ್. ಅವರೊಂದಿಗೆ ಮಾತುಕತೆ, 1.20 ಭಾವಗೀತೆಗಳು– ಡಾ.ಇಂದ್ರಾಣಿ ಅನಂತರಾಂ, 3.00 ಆರ್.ಮೋಹನ್: ಕ್ಲಾರಿಯೋನೆಟ್ ವಾದನ, 4.00 ಮಹಿಳಾರಂಗ: ಆಕಾಶವಾಣಿ ಅಡುಗೆ ಮನೆ, ಪ್ರಸ್ತುತಿ: ಕೆ.ಬಿ. ಮೀನಾ, 4.30 ಝೇಂಕಾರ: ಮಕ್ಕಳ ಗೀತ ಗಾಯನ ಕಲಿಕಾ ಕಾರ್ಯಕ್ರಮ, 6.50 ಕೃಷಿರಂಗ: ಕಿಸಾನ್ ವಾಣಿ 'ಟೊಮೇಟೋ ಬೆಳೆಯಲ್ಲಿ ಸಸ್ಯ ಸಂರಕ್ಷಣಾ ಕ್ರಮಗಳು' ಕುರಿತು ಡಾ. ಬಿ. ಪಂಪನಗೌಡ ಅವರೊಂದಿಗೆ ಸಂದರ್ಶನ, 9.30 ಅಮೃತ ಸ್ವಾತಂತ್ರ್ಯ ಮಾಲಿಕೆಯ ವಿಶೇಷ ಕಾರ್ಯಕ್ರಮ, 10.30 ಸವಿನೆನಪು.

■ **ಮೈಸೂರು ವಿಶ್ವವಿದ್ಯಾನಿಲಯ:** ಮೈಸೂರು ವಿವಿ ಸಸ್ಯಶಾಸ್ತ್ರ ವಿಭಾಗದ ಬಟಾನಿಕಲ್ ಸೊಸೈಟಿಯ 2022–23 ಶೈಕ್ಷಣಿಕ ವರ್ಷದ ಕಾರ್ಯಚಟುವಟಿಕೆಗಳ ಉದ್ಘಾಟನಾ ಸಮಾರಂಭ, ಉದ್ಘಾಟನೆ ಹಾಗೂ ಬಾಟನಿ ಅಂಡ್ ಟೆಕ್ನಾಲಜಿಕಲ್ ಇಂಟವ್‌ವೇಷನ್ ಫಾರ್ ಬಯೋಟೆಕ್ ಇಂಡಸ್ಟ್ರಿ ಕುರಿತು ವಿಶೇಷ ಉಪನ್ಯಾಸ, ಪ್ರೊ.ಹೆಚ್.ಶೇಖರ್‌ಶೆಟ್ಟಿ, ಮುಖ್ಯ ಅತಿಥಿ: ಗುಲ್ಬರ್ಗ ವಿವಿ ವಿಶ್ರಾಂತ ಕುಲಪತಿ ಪ್ರೊ.ಎಸ್.ಆರ್. ನಿರಂಜನ, ಅಧ್ಯಕ್ಷತೆ: ಮೈವಿವಿ ಕುಲಪತಿ ಪ್ರೊ.ಜಿ.ಹೇಮಂತ್‌ಕುಮಾರ್, ವಿಶೇಷ ಆಹ್ವಾನಿತರು: ಜೆಎಸ್‌ಎಸ್ ಅಕಾಡೆಮಿ ಆಫ್ ಹೈಯರ್ ಎಜುಕೇಶನ್ ಪ್ರೊ. ಕೆ.ಎ.ರವೀಶ, ಉಪಸ್ಥಿತಿ: ಮೈಸೂರು ವಿವಿ ಸಸ್ಯಶಾಸ್ತ್ರ ವಿಭಾಗದ ಮುಖ್ಯಸ್ಥ: ಪ್ರೊ. ಕೆ.ಎನ್.ಅಮೃತೇಶ್, ಸ್ಥಳ: ಲೀನಿಯಸ್ ಹಾಲ್, ಸಮಯ: ಬೆಳಗ್ಗೆ 10 ಗಂಟೆ

■ **ಆನಂದ ಮಾರ್ಗ ಪ್ರಚಾರಕರ ಸಂಘ:** ಆನಂದ ಮಾರ್ಗದ ಸಂಸ್ಥಾಪಕರಾದ ಶ್ರೀ ಆನಂದ ಮೂರ್ತಿ ಅವರ 101ನೇ ಜಯಂತಿ ಪ್ರಯುಕ್ತ ಬೆಳಗ್ಗೆ 3ರಿಂದ 8.30ರ ವರೆಗೆ ಆನಂದ ಪೂರ್ಣಿಮಾ ಆಚರಣೆ, ಸ್ಥಳ: ಆನಂದ ಮಾರ್ಗ ಪ್ರಚಾರಕರ ಸಂಘ ನಂ.7, 2ನೇ ಅಡ್ಡ ರಸ್ತೆ 8ನೇ ಮುಖ್ಯರಸ್ತೆ ಸರಸ್ವತಿ ಪುರಂ

■ **ಸಪ್ನ ಬುಕ್ ಹೌಸ್:** ಕನ್ನಡದ ಖ್ಯಾತ ಸಾಹಿತಿ ಸುಧಾ ಮೂರ್ತಿ ಅವರಿಂದ ಜೀವನ ಪಾಠ ಮತ್ತು ಹಸ್ತಾಕ್ಷರ ಕಾರ್ಯಕ್ರಮ, ಸ್ಥಳ: ನಾರಾಯಣ ಶಾಸ್ತ್ರಿ ರಸ್ತೆಯ ಸಪ್ನ ಬುಕ್ ಹೌಸ್, ಸಮಯ: ಸಂಜೆ 5ಕ್ಕೆ

■ **ಮೈಸೂರು ಉತ್ಸವ :** ವಸ್ತುಪ್ರದರ್ಶನ, ಸ್ಥಳ: ಜೆಎಸ್‌ಎಸ್ ಮೈದಾನ, ದೊಡ್ಡಕೆರೆ ಮೈದಾನದ ಪಕ್ಕ, ಸಂಜೆ 6ಕ್ಕೆ

ದಕ್ಷಿಣ ಪದವೀಧರ ಕ್ಷೇತ್ರದ ಚುನಾವಣೆಯಲ್ಲಿ ಪಕ್ಷದ ಅಭ್ಯರ್ಥಿಗೆ ಒಳಏಟು ಮರುಕಳಿಸಬಾರದು

ಬಿಜೆಪಿಯ ಚುನಾವಣೆ ನಿರ್ವಹಣಾ ಸಮಿತಿ ಸಭೆಯಲ್ಲಿ ಸಚಿವ ಎಸ್.ಟಿ.ಸೋಮಶೇಖರ್ ಎಚ್ಚರಿಕೆ

ಮೈಸೂರು,ಮೇ 15(ಪಿಎಂ)– ಇತ್ತೀಚೆಗೆ ಮೈಸೂರಿನಲ್ಲಿ ನಡೆದ ಪರಿಷತ್ ಚುನಾವಣೆಯನ್ನು ಹತ್ತಿರದಿಂದ ನೋಡಿದ್ದು, ದಕ್ಷಿಣ ಪದವೀಧರ ಕ್ಷೇತ್ರದ ಚುನಾವಣೆಯಲ್ಲಿ ಪಕ್ಷದ ಅಭ್ಯರ್ಥಿಗೆ ಯಾವುದೇ ಕಾರಣಕ್ಕೂ ಸ್ವಪಕ್ಷೀಯರ ಒಳಏಟು ಮರುಕಳಿಸಬಾರದು ಎಂದು ಸಹಕಾರ ಮತ್ತು ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಎಚ್ಚರಿಕೆ ನೀಡಿದರು.

ಮೈಸೂರಿನ ನಿತ್ಯೋತ್ಸವ ಕಲ್ಯಾಣ ಮಂಟಪದಲ್ಲಿ ದಕ್ಷಿಣ ಪದವೀಧರ ಕ್ಷೇತ್ರದ ವಿಧಾನ ಪರಿಷತ್ ಚುನಾವಣೆ ಸಂಬಂಧ ಬಿಜೆಪಿ ವತಿಯಿಂದ ಭಾನುವಾರ ಹಮ್ಮಿಕೊಂಡಿದ್ದ ಚುನಾವಣೆ ನಿರ್ವಹಣಾ ಸಮಿತಿ ಸಭೆ ಉದ್ಘಾಟಿಸಿ ಅವರು ಮಾತನಾಡಿದರು.

ಮೈಸೂರು–ಚಾಮರಾಜನಗರ ದ್ವಿಸದಸ್ಯ ಕ್ಷೇತ್ರದಿಂದ ವಿಧಾನಪರಿಷತ್‌ಗೆ ನಡೆದ ಚುನಾವಣೆಯನ್ನು ಹತ್ತಿರದಿಂದ ನೋಡಿದ್ದೇನೆ. ಈ ಚುನಾವಣೆಯಲ್ಲಿ ಆದಂತೆ ಯಾವುದೇ ಕಾರಣಕ್ಕೂ ಈ ಬಾರಿ ಒಳಏಟು ಆಗಬಾರದು. ಕಳೆದ 30 ವರ್ಷಗಳ ಪ್ರಾಮಾಣಿಕ ದುಡಿಮೆ ಪರಿಗಣಿಸಿ ಮೈ.ವಿ.ರವಿಶಂಕರ್‌ಗೆ ಪಕ್ಷ ಟಿಕೆಟ್ ನೀಡಿದೆ. ಅವರಿಗೆ ಎರಡನೇ ಬಾರಿಗೆ ಈ ಚುನಾವಣೆಯಲ್ಲಿ ಸ್ಪರ್ಧಿಸಲು ಪಕ್ಷ ಅವಕಾಶ ಕಲ್ಪಿಸಿದೆ. ಕಳೆದ ಬಾರಿ ಕೇವಲ ಅಲ್ಪ ಮತಗಳ ಅಂತರದಲ್ಲಿ ಅವರು ಸೋತಿದ್ದು, ಈ ಬಾರಿ ಅವರನ್ನು ಗೆಲ್ಲಿಸುವ ನಿಟ್ಟಿನಲ್ಲಿ ಪಕ್ಷದ ಪ್ರತಿಯೊಬ್ಬರೂ ಕೆಲಸ ಮಾಡಬೇಕು ಎಂದು ತಿಳಿಸಿದರು.

ಕಳೆದ ಬಾರಿಯಂತೆ ಒಳಏಟು ಮರುಕಳಿಸಬಾರದು. ಪಕ್ಷದಲ್ಲಿ ಇದ್ದುಕೊಂಡು ಪಕ್ಷಕ್ಕೆ ಮೋಸ ಮಾಡುವುದನ್ನು ಸಹಿಸುವುದಿಲ್ಲ. ಪಕ್ಷ ಟಿಕೆಟ್ ನೀಡಿದ ಅಭ್ಯರ್ಥಿಯ ಪರವಾಗಿ ಕೆಲಸ ಮಾಡಿ ಪಕ್ಷದ ತೀರ್ಮಾನಕ್ಕೆ ಗೌರವ ಕೊಡಬೇಕು. ಮತಾಂತರ ನಿಷೇಧ ಕಾಯ್ದೆ ವಿಧಾನಸಭೆಯಲ್ಲಿ ಅನುಮೋದನೆಗೊಂಡಿದೆ. ಆದರೆ ವಿಧಾನಪರಿಷತ್‌ನಲ್ಲಿ ನಮಗೆ ಬಹುಮತ ಇಲ್ಲದ ಕಾರಣ ಅಲ್ಲಿನ್ನೂ ಅಂಗೀಕಾರ ಸಾಧ್ಯವಾಗಿಲ್ಲ. ಹಾಗಾಗಿ ಪರಿಷತ್‌ನಲ್ಲಿ ನಮ್ಮ ಪಕ್ಷ ಬಹುಮತ ಸಾಧಿಸಬೇಕಿದೆ. ಈ ನಿಟ್ಟಿನಲ್ಲಿ ನಮ್ಮ ಪಕ್ಷದ ಅಭ್ಯರ್ಥಿಗೆ ಮೊದಲ ಪ್ರಾಶಸ್ತ್ಯದ ಮತ ಬರುವಂತೆ ಮಾಡಬೇಕಿದೆ ಎಂದು ಹೇಳಿದರು.



ಮೈಸೂರಿನ ನಿತ್ಯೋತ್ಸವ ಕಲ್ಯಾಣ ಮಂಟಪದಲ್ಲಿ ದಕ್ಷಿಣ ಪದವೀಧರ ಕ್ಷೇತ್ರದ ವಿಧಾನ ಪರಿಷತ್ ಚುನಾವಣೆ ಸಂಬಂಧ ಬಿಜೆಪಿ ವತಿಯಿಂದ ಭಾನುವಾರ ಹಮ್ಮಿಕೊಂಡಿದ್ದ ಚುನಾವಣೆ ನಿರ್ವಹಣಾ ಸಮಿತಿ ಸಭೆಯನ್ನು ಸಚಿವ ಎಸ್.ಟಿ.ಸೋಮಶೇಖರ್ ಉದ್ಘಾಟಿಸಿದರು.

ಮೈಸೂರು ಜಿಲ್ಲೆಯಲ್ಲಿ ಅತೀ ಹೆಚ್ಚು ಪದವೀಧರರನ್ನು ನೋಂದಣಿ ಮಾಡಲಾಗಿದೆ 6 ತಿಂಗಳ ಸತತ ಪ್ರಯತ್ನದಿಂದ 60 ಸಾವಿರ ಪದವೀಧರರನ್ನು ಮೈಸೂರು ಜಿಲ್ಲೆಯಲ್ಲಿ ನೋಂದಣಿ ಮಾಡಲಾಗಿದೆ. ಜೊತೆಗೆ ಈಗಾಗಲೇ 30 ಸಾವಿರ ಪದವೀಧರನ್ನು ಭೇಟಿ ಮಾಡಿ ಅವರ ಮೊಬೈಲ್ ನಂಬರ್ ಸಂಗ್ರಹ ಮಾಡಲಾಗಿದೆ. ನಮ್ಮ ಪಕ್ಷದ ಅಭ್ಯರ್ಥಿಯನ್ನು ಗೆಲ್ಲಿಸಲೇಬೇಕು ಎಂಬ ನಿಟ್ಟಿನಲ್ಲಿ ಕಾರ್ಯಕರ್ತರು ಸಕ್ರಿಯವಾಗಿ ಕೆಲಸ ಮಾಡುತ್ತಿದ್ದಾರೆ ಎಂದರು.

ಎಲ್ಲಾ ಇಲಾಖೆ ಖಾಲಿ ಹುದ್ದೆ ಭರ್ತಿ: ಕೋವಿಡ್ ಹಿನ್ನೆಲೆಯಲ್ಲಿ ಎರಡು–ಮೂರು ವರ್ಷ ಯಾವುದೇ ನೇಮಕಾತಿಗಳನ್ನು ಸರಿಯಾದ ರೀತಿಯಲ್ಲಿ ಮಾಡಲಾಗಲಿಲ್ಲ. ನಾಲ್ಕೈದು ತಿಂಗಳಿಂದ ಎಲ್ಲಾ ಸುಧಾರಣೆ ಕಂಡಿದ್ದು, ಎಲ್ಲಾ ಇಲಾಖೆಗಳಲ್ಲಿ ಖಾಲಿ ಉಳಿದಿರುವ ಹುದ್ದೆಗಳನ್ನು ಭರ್ತಿ ಮಾಡಲು ಮೊನ್ನೆ ನಡೆದ ಸಂಪುಟ ಸಭೆಯಲ್ಲಿ ಮುಖ್ಯಮಂತ್ರಿಗಳು ತೀರ್ಮಾನ ಮಾಡಿದ್ದಾರೆ. ಎಲ್ಲಾ ಇಲಾಖೆಗಳ ಖಾಲಿ ಹುದ್ದೆಗಳ ಭರ್ತಿಗೆ ಕ್ರಮ ವಹಿಸುವಂತೆ ಎಲ್ಲಾ ಸಚಿವರಿಗೆ ಮುಖ್ಯಮಂತ್ರಿಗಳು ಸೂಚನೆ ನೀಡಿದ್ದು, ಸಹಕಾರ ಕ್ಷೇತ್ರದಲ್ಲಿ ಸುಮಾರು 5 ಸಾವಿರ ಉದ್ಯೋಗ ನೀಡಲು ಈಗಾಗಲೇ ಚಾಲನೆ ನಿಡಲಾಗಿದೆ ಎಂದು ವಿವರಿಸಿದರು.

ನಿರುದ್ಯೋಗಿ ಪದವೀಧರರಿಗೆ ಅನುಕೂಲವಾಗುವಂತಹ ಐತಿಹಾಸಿಕ ತೀರ್ಮಾನವನ್ನು ಪ್ರಧಾನಿ ಮತ್ತು ಮುಖ್ಯಮಂತ್ರಿಗಳು ತೆಗೆದುಕೊಳ್ಳಲಿದ್ದಾರೆ. ಕಾಂಗ್ರೆಸ್, ಜೆಡಿಎಸ್ ಮತ್ತು ಪಕ್ಷೇತರರು ಗೆದ್ದು ಏನು ಮಾಡಲು ಸಾಧ್ಯ? ರವಿಶಂಕರ್ ಗೆದ್ದರೆ ಕೇಂದ್ರ ಮತ್ತು ರಾಜ್ಯ ಸರ್ಕಾರ ಅವರಿಗೆ ಸ್ಪಂದಿಸಲಿದೆ. ಇದನ್ನು ಪದವೀಧರರು ಮನವರಿಕೆ ಮಾಡಿಕೊಂಡು ಬೆಂಬಲ ನೀಡಬೇಕು. ಅನೇಕ ಮಂತ್ರಿಗಳು ರವಿಶಂಕರ್ ಪರ ಮತಯಾಚನೆ ಮಾಡಲಿದ್ದಾರೆ ಎಂದು ತಿಳಿಸಿದರು.

ಇತ್ತೀಚಿಗೆ ಪರಿಷತ್‌ಗೆ ಲ್ಯಾಂಡ್ ಮಾಫಿಯಾದವರು ಪ್ರವೇಶ ಪಡೆಯುತ್ತಿದ್ದಾರೆ. ಮನುಷ್ಯನ ಅಂಗಾಂಗ ಮಾರುವಂತಹವರು ಇಂದು ಪರಿಷತ್ ಸದಸ್ಯರಾಗಿ ಆಯ್ಕೆಯಾಗಿದ್ದಾರೆ. ಒಂದು ಸೈಟ್ ಅನ್ನು ನಾಲ್ಕೈದು ಜನಕ್ಕೆ ಮಾರಾಟ ಮಾಡಿದವರು ಪರಿಷತ್‌ಗೆ ಸ್ಪರ್ಧೆ ಮಾಡುತ್ತಿದ್ದಾರೆ ಎಂದು ದೂರಿದರು.

ಈ ವರ್ಷ 33 ಲಕ್ಷ ರೈತರಿಗೆ 24 ಸಾವಿರ ಕೋಟಿ ಸಾಲ ನೀಡಲು ಬಜೆಟ್‌ನಲ್ಲಿ ಘೋಷಣೆ ಮಾಡಲಾಗಿದೆ. ನಮ್ಮ ಸರ್ಕಾರ 6,350 ಕೋಟಿ ರೂ. ರೈತರ ಸಾಲ ಮನ್ನಾ ಮಾಡಿದೆ. ಹಿಂದಿದ್ದ ಸರ್ಕಾರ ರೈತರ ಸಾಲಮನ್ನಾ ಘೋಷಣೆ ಮಾಡಿದ್ದಷ್ಟೇ. ಆದರೆ ಮನ್ನಾ ಮಾಡಿದ್ದು ನಮ್ಮ ಸರ್ಕಾರ ಎಂದರು.

ಸಂಸದ ಪ್ರತಾಪ್ ಸಿಂಹ, ಶಾಸಕರಾದ ಎಲ್. ನಾಗೇಂದ್ರ, ಪ್ರೀತಂಗೌಡ, ಎನ್.ಮಹೇಶ್, ಮಾಜಿ ಶಾಸಕರಾದ ಭಾರತಿಶಂಕರ್, ಪರಿಮಳಾ ನಾಗಪ್ಪ, ಅಭ್ಯರ್ಥಿ ಮೈ.ವಿ. ರವಿಶಂಕರ್, ಬಿಜೆಪಿ ಮುಖಂಡ ರಘು ಕೌಟಿಲ್ಯ, ವಿಧಾನ ಪರಿಷತ್ ಮಾಜಿ ಸದಸ್ಯ ತೋಂಟದಾರ್ಯ, ಬಿಜೆಪಿ ರಾಜ್ಯ ಉಪಾಧ್ಯಕ್ಷ ನಿರ್ಮಲ ಕುಮಾರ್ ಸುರಾನ, ರಾಜ್ಯ ಪ್ರಧಾನ ಕಾರ್ಯದರ್ಶಿ ಸಿದ್ದರಾಜು ಮತ್ತಿತರರು ಹಾಜರಿದ್ದರು.

ಮತ್ತೆ ವೈಫಲ್ಯಕ್ಕೆ ಅವಕಾಶ ಬೇಡ

ಮೈಸೂರು,ಮೇ 15(ಪಿಎಂ)–ಕಳೆದ ಮೈಸೂರು–ಚಾಮರಾಜನಗರ ದ್ವಿಸದಸ್ಯ ಕ್ಷೇತ್ರದಿಂದ ವಿಧಾನ ಪರಿಷತ್‌ಗೆ ನಡೆದ ಚುನಾವಣೆಯಲ್ಲಿ ನಮ್ಮೆಲ್ಲರಿಂದ ಆದ ಸಣ್ಣ ವೈಫಲ್ಯದಿಂದ ಗೆಲ್ಲುವ ಅವಕಾಶ ಪಕ್ಷದ ಕೈತಪ್ಪಿದೆ. ಇಂದು ಮತ್ತೊಂದು ಅವಕಾಶ ಸಿಕ್ಕಿದ್ದು, ಈ ಚುನಾವಣೆಯಲ್ಲಿ ಅಂತಹ ವೈಫಲ್ಯಕ್ಕೆ ಅವಕಾಶ ನೀಡಬಾರದು ಎಂದು ಸಂಸದ ಪ್ರತಾಪ್ ಸಿಂಹ ಹೇಳಿದರು.

ಮೈ.ವಿ.ರವಿಶಂಕರ್ ಪಕ್ಷ ನಿಷ್ಠರು. ಜೊತೆಗೆ ತಮ್ಮ ವಿದ್ಯೆಗೆ ಅನುಗುಣವಾಗಿಯೂ ಸೇವೆ ಸಲ್ಲಿಸುತ್ತಿರುವ ಸೇವಾ ನಿಷ್ಠರೂ ಹೌದು. ಯಾವುದೇ ಹಣಕಾಸು ಹಿನ್ನೆಲೆ ಹೊಂದಿರದ ವ್ಯಕ್ತಿಯಾದ ಅವರು, ಪಕ್ಷ ಸಂಘಟನೆಯೇ ಸಂಪನ್ಮೂಲ ಎಂದು ನಂಬಿದ್ದಾರೆ. ನಾವು ಅವರಿಗೆ ಬೆಂಬಲವಾಗಿ ನಿಲ್ಲುವುದು ನಮ್ಮ ಆದ್ಯ ಕರ್ತವ್ಯ. ಹತ್ತಾರು ಅಭಿವೃದ್ಧಿ ಕಾರ್ಯಗಳು ನಮ್ಮ ಪಕ್ಷದಿಂದ ಆಗಿದ್ದು, ಜನತೆ ಬಳಿ ನಾವು ಆತ್ಮವಿಶ್ವಾಸದಿಂದ ಮತ ಯಾಚಿಸಬಹುದು. ಹಳೇ ಮೈಸೂರು ಭಾಗ ಬಿಜೆಪಿ ಭದ್ರಕೋಟೆ ಮಾಡುವ ಸಂಕಲ್ಪ ತೊಟ್ಟು ನಾವೆಲ್ಲಾ ಕೆಲಸ ಮಾಡೋಣ ಎಂದು ತಿಳಿಸಿದರು.

ಜೂ.21ರಂದು ವಿಶ್ವ ಯೋಗ ದಿನಾಚರಣೆಗಾಗಿ ಮೈಸೂರಿಗೆ ಪ್ರಧಾನಿ ನರೇಂದ್ರ ಮೋದಿಯವರು ಭೇಟಿ ನೀಡುವ ನಿರೀಕ್ಷೆ ಇದ್ದು, ಇನ್ನು ಎರಡು ದಿನಗಳಲ್ಲಿ ಅವರ ಮೈಸೂರು ಭೇಟಿ ಖಚಿತಗೊಳ್ಳುವ ನಿರೀಕ್ಷೆ ಇದೆ ಎಂದರು.

ಬೈಕ್ ಸವಾರರಿಂದ ಮಣ್ಣು ಉಳಿಸಿ ಅಭಿಯಾನ

ಮೈಸೂರಿನ ರಸ್ತೆಗಳಲ್ಲಿ ಸಾಗಿದ ಬೈಕ್ ರ್‍ಯಾಲಿ



ಮಣ್ಣು ಉಳಿಸಿ ಅಭಿಯಾನದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ನೃತ್ಯ ವಿದ್ವಾನ್ ಆಪ್ತಮಿತ್ರ ಖ್ಯಾತಿಯ ಶ್ರೀಧರ್ ಜೈನ್ ದಂಪತಿ ಮತ್ತು ರೋಟರಿ ಜಿಲ್ಲಾ ಗೌರ್ನರ್ ರವೀಂದ್ರ ಭಟ್ ಚಿತ್ರದಲ್ಲಿದ್ದಾರೆ.

ಮೈಸೂರು, ಮೇ 15(ಆರ್‌ಕೆಬಿ)– ಮಣ್ಣು ಉಳಿಸಿ ಅಭಿಯಾನವನ್ನು ಬೆಂಬಲಿಸಿ ವಿವಿಧ ಬೈಕಿಂಗ್ ಕ್ಲಬ್‌ಗಳ 100ಕ್ಕೂ ಹೆಚ್ಚು ಬೈಕ್ ಸವಾರರು ಭಾನುವಾರ ಮೈಸೂರಲ್ಲಿ ಬೈಕ್ ರ್‍ಯಾಲಿ ನಡೆಸಿದರು. ಬೆಂಗಳೂರು ಮತ್ತು ತುಮಕೂರಿನಿಂದ ಮಧ್ಯಾಹ್ನ ಆಗಮಿಸಿದ ಬೈಕ್ ಸವಾರರನ್ನು ಮೈಸೂರಿನ ಬೆಂಗಳೂರು ಗೇಟ್ ಬಳಿ (ಕೊಲಂಬಿಯಾ ಏಷಿಯಾ ವೃತ್ತ)ದ ಬಳಿ ಸ್ವಾಗತಿಸಲಾಯಿತು.



ಅಲ್ಲಿಂದ ಸಾಗಿದ ಬೈಕ್ ಸವಾರು ಜೆಎಸ್‌ಎಸ್ ಮೆಡಿಕಲ್ ಕಾಲೇಜು, ಬನ್ನಿಮಂಟಪ, ಸಯ್ಯಾಜಿರಾವ್ ರಸ್ತೆ, ಅಶೋಕ ರಸ್ತೆ, ಮೈಸೂರು ಅರಮನೆ ರಸ್ತೆ, ಗನ್ ಹೌಸ್, ಚಾಮರಾಜ ಜೋಡಿ ರಸ್ತೆ, ಕೃಷ್ಣರಾಜ ಬುಲೆವಾರ್ಡ್ ರಸ್ತೆ, ಜಿಲ್ಲಾಧಿಕಾರಿ ಕಚೇರಿ ಬಳಿ, ಆದಿಪಂಪ ರಸ್ತೆ, ಕಾಳಿದಾಸ ರಸ್ತೆ, ಪಂಚವಟಿ ವೃತ್ತ, ಸಾಹಿತ್ಯ ಭವನ ರಸ್ತೆ ಮೂಲಕ ಮುಡಾ ಕ್ರೀಡಾಂಗಣ ತಲುಪಿತು.

ಅಲ್ಲಿ ಬೈಕ್ ಸಮಾವೇಶಗೊಂಡ ಬೈಕ್ ಸವಾರರನ್ನು ಇಷಾ ಮಣ್ಣಿನ ಸ್ವಯಂ ಸೇವಕರು ಬರಮಾಡಿಕೊಂಡರು. ನಂತರ ನಡೆದ ಸಮಾರಂಭದಲ್ಲಿ ರೋಟರಿ ಜಿಲ್ಲಾ ಗೌರ್ನರ್ ರವೀಂದ್ರ ಭಟ್, ನೃತ್ಯ ಕಲಾವಿದ (ಆಪ್ತಮಿತ್ರ ಖ್ಯಾತಿ) ಶ್ರೀಧರ್ ಜೈನ್ ದಂಪತಿ ಪಾಲ್ಗೊಂಡಿದ್ದರು.

ಈ ವೇಳೆ ಶ್ರೀಧರ್ ಜೈನ್, ಪ್ರಸ್ತುತ ಮಣ್ಣಿನ ಫಲವತ್ತತೆ ಬಗ್ಗೆ ಮಾತನಾಡಿ, ಹಿಂದೆ ಮಣ್ಣು ಬಹಳ ಫಲವತ್ತಾಗಿತ್ತು. ಆದರೆ ಇಂದು ರಸಗೊಬ್ಬರ ಬಳಕೆಯಿಂದ ಮಣ್ಣಿನ ಫಲವತ್ತತೆ ನಾಶವಾಗಿದೆ. ಹಾಗಾಗಿ ಸಾವಯವ ಗೊಬ್ಬರ ಬಳಕೆಗೆ ಹೆಚ್ಚು ಒತ್ತು ನೀಡಬೇಕಾಗಿದೆ. ಈ ಬಗ್ಗೆ ಹೆಚ್ಚು ಜನಜಾಗೃತಿ ಆಗಬೇಕಾಗಿದೆ. ಈ ನಿಟ್ಟಿನಲ್ಲಿ ಮಣ್ಣು ಉಳಿಸಿ ಅಭಿಯಾನ ಕೈಗೊಂಡಿರುವ ಬೈಕ್ ಸವಾರರ ಪ್ರಯತ್ನವನ್ನು ಅವರು ಶ್ಲಾಘಿಸಿದರು. ಈ ಸಂದರ್ಭದಲ್ಲಿ ಇಷಾ ಮಣ್ಣು ಉಳಿಸಿ ಅಭಿಯಾನದ ಬೈಕ್ ಸವಾರರ ಪರವಾಗಿ ಮನು, ಕಮಲ್, ಬೈಕರ್ಸ್ ಅಸೋಸಿಯೇಷನ್ ಆಫ್ ಬೈಕರ್ಸ್ ಕಮಿಟಿ (ಎಬಿಸಿ) ಅಧ್ಯಕ್ಷ ರಂಜಿತ್ ಇನ್ನಿತರರು ಉಪಸ್ಥಿತರಿದ್ದರು.

ಮೈಸೂರಲ್ಲಿ ಸಾಧಕರಿಗೆ 'ಚಿದಾನಂದ ಪ್ರಶಸ್ತಿ' ಪ್ರದಾನ

ನಾಡೋಜ ಪ್ರಶಸ್ತಿ ಪುರಸ್ಕೃತ ವಿದ್ವಾಂಸ ಡಾ. ಟಿ.ವಿ. ವೆಂಕಟಾಚಲಶಾಸ್ತ್ರಿ ಅವರಿಗೆ ಸನ್ಮಾನ

ಮೈಸೂರು, ಮೇ 15(ಎಂಟಿವೈ)– ಬೆಂಗಳೂರಿನ ಚಿದಾನಂದ ಪ್ರಶಸ್ತಿ ಪ್ರದಾನ ಸಮಿತಿ ವತಿಯಿಂದ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿರುವ ಮೂವರು ಸಾಧಕರಿಗೆ 'ಚಿದಾನಂದ ಪ್ರಶಸ್ತಿ' ಪ್ರದಾನ ಮಾಡಿ ಗೌರವಿಸಲಾಯಿತು.

ಮೈಸೂರಿನ ಅಗ್ರಹಾರದಲ್ಲಿರುವ ಜೆಎಸ್‌ಎಸ್ ಆಸ್ಪತ್ರೆಯ ಆವರಣದಲ್ಲಿರುವ ರಾಜೇಂದ್ರ ಭವನದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಇತಿಹಾಸ ತಜ್ಞ ಮತ್ತು ಪುರಾತತ್ವಶಾಸ್ತ್ರಜ್ಞ ಡಾ.ಎಂ.ಎಸ್. ಕೃಷ್ಣಮೂರ್ತಿ (2020ನೇ ಸಾಲಿನ ಪ್ರಶಸ್ತಿ), ಗ್ರಂಥ ಸಂಪಾದಕರು ಮತ್ತು ಹರಿದಾಸ ಸಾಹಿತ್ಯ ಸಂಶೋಧಕರಾದ ಡಾ.ಟಿ.ಎನ್. ನಾಗರತ್ನ (2021ನೇ ಸಾಲು) ಹಾಗೂ ಸಮುದಾಯ ಅಧ್ಯಯನ ಸಂಶೋಧಕ ಡಾ.ಬಿ.ಕೆ.ಪ್ರಣತಾರ್ತಿಹರನ್ (2022ನೇ ಸಾಲು) ಅವರಿಗೆ 'ಚಿದಾನಂದ ಪ್ರಶಸ್ತಿ' ನೀಡಿ ಸನ್ಮಾನಿಸಲಾಯಿತು.

ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದವರಿಗೆ ಪ್ರತಿ ವರ್ಷ 'ಚಿದಾನಂದ ಪ್ರಶಸ್ತಿ' ನೀಡಿ ಗೌರವಿಸುವ ಸಂಪ್ರದಾಯವನ್ನು ಬೆಂಗಳೂರಿನ ಚಿದಾನಂದ ಪ್ರಶಸ್ತಿ ಪ್ರದಾನ ಸಮಿತಿ ಅನುಸರಿಸುತ್ತಿದ್ದು, ಕೋವಿಡ್ ಹಿನ್ನೆಲೆಯಲ್ಲಿ ಕಳೆದ ಎರಡು ವರ್ಷಗಳಿಂದ ಪ್ರಶಸ್ತಿ ಪ್ರದಾನ ಸಮಾರಂಭ ನಡೆಸಿರಲಿಲ್ಲ. ಈ ಹಿನ್ನೆಲೆಯಲ್ಲಿ ಇಂದು ನಡೆದ ಕಾರ್ಯಕ್ರಮದಲ್ಲಿ ಮೂರು ವರ್ಷಗಳ ಪ್ರಶಸ್ತಿಯನ್ನು ಪ್ರದಾನ ಮಾಡಿ ಗೌರವಿಸಲಾಯಿತು.

ಅಮೆರಿಕ ಪ್ರವಾಸದಲ್ಲಿರುವ ಕಾರಣ ಎಂ.ಎಸ್.ಕೃಷ್ಣಮೂರ್ತಿ ಅವರು ಸಮಾರಂಭದಲ್ಲಿ ಪಾಲ್ಗೊಳ್ಳಲು ಸಾಧ್ಯವಾಗಲಿಲ್ಲ. ಬದಲಾಗಿ ಅವರ ಅಕ್ಕ ಉಮಾ ಎಸ್.ರಾವ್, ಅಣ್ಣನ ಮಗ ಉದಯಶಾಸ್ತ್ರಿ ಪ್ರಶಸ್ತಿ ಸ್ವೀಕರಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ವಿದ್ವಾಂಸ ಡಾ.ಟಿ.ವಿ.ವೆಂಕಟಾಚಲಶಾಸ್ತ್ರಿ ಮಾತನಾಡಿ, ಸಂಶೋಧನಾ ಕ್ಷೇತ್ರದಲ್ಲಿ ಸಾಕಷ್ಟು ಸೇವೆ ಸಲ್ಲಿಸಿದವರನ್ನು ಗುರುತಿಸಿ ಚಿದಾನಂದಮೂರ್ತಿ ಅವರ ಹೆಸರಿನಲ್ಲಿ ಪ್ರಶಸ್ತಿ ನೀಡುತ್ತಿರುವುದು ಶ್ಲಾಘನೀಯ. ಚಿದಾನಂದಮೂರ್ತಿ ಅವರ ಹೆಸರಲ್ಲಿ ಸಾಧಕರಿಗೆ ಪ್ರಶಸ್ತಿ ನೀಡುವ ಮೂಲಕ ಇನ್ನಷ್ಟು ಮಂದಿ ಸಾಧಕರಾಗಿ ಹೊರಹೊಮ್ಮಲು ಪ್ರೇರಣೆ ನೀಡಿದಂತಾಗಿದೆ. ಚಿದಾನಂದ ಪ್ರಶಸ್ತಿ ಪ್ರದಾನ ಸಮಿತಿಯು ಉನ್ನತ ವ್ಯಕ್ತಿತ್ವಗಳನ್ನು ಹುಡುಕಿ ಪ್ರಶಸ್ತಿ ನೀಡುವ ಮೂಲಕ ತನ್ನ ಬದ್ಧತೆಯನ್ನು ತೋರ್ಪಡಿಸಿದೆ ಎಂದರು.

ಇದೇ ವೇಳೆ ನಾಡೋಜ ಪ್ರಶಸ್ತಿ ಪಡೆದ ಹಿನ್ನೆಲೆಯಲ್ಲಿ ವಿದ್ವಾಂಸ ಡಾ.ಟಿ.ವಿ.ವೆಂಕಟಾಚಲಶಾಸ್ತ್ರಿ ಅವರನ್ನು ಸನ್ಮಾನಿಸಲಾಯಿತು. ಕಾರ್ಯಕ್ರಮದಲ್ಲಿ ಚಿದಾನಂದ ಪ್ರಶಸ್ತಿ ಪ್ರದಾನ ಸಮಿತಿ ಅಧ್ಯಕ್ಷ ಸಿ.ಯು.ಮಂಜುನಾಥ್, ಕಾರ್ಯದರ್ಶಿ ಡಾ.ಎಸ್.ಎಲ್.ಶ್ರೀನಿವಾಸಮೂರ್ತಿ, ಎನ್.ಎಂ.ಶಿವಕುಮಾರ್ ಪಾಲ್ಗೊಂಡಿದ್ದರು.



ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆಯ ರಾಜೇಂದ್ರ ಭವನದಲ್ಲಿ ಭಾನುವಾರ ಬೆಂಗಳೂರಿನ ಚಿದಾನಂದ ಪ್ರಶಸ್ತಿ ಪ್ರದಾನ ಸಮಿತಿ ವತಿಯಿಂದ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ನಾಡೋಜ ಪ್ರಶಸ್ತಿ ಪಡೆದ ವಿದ್ವಾಂಸ ಡಾ.ಟಿ.ವಿ.ವೆಂಕಟಾಚಲಶಾಸ್ತ್ರಿ ಅವರನ್ನು ಸನ್ಮಾನಿಸಲಾಯಿತು. ಇದೇ ವೇಳೆ ಹರಿದಾಸ ಸಾಹಿತ್ಯ ಸಂಶೋಧಕರಾದ ಡಾ.ಟಿ.ಎನ್.ನಾಗರತ್ನ ಹಾಗೂ ಸಮುದಾಯ ಅಧ್ಯಯನ ಸಂಶೋಧಕ ಡಾ.ಬಿ.ಕೆ.ಪ್ರಣತಾರ್ತಿಹರನ್ ಅವರಿಗೆ ಚಿದಾನಂದ ಪ್ರಶಸ್ತಿ ಪ್ರದಾನ ಮಾಡಿ ಗೌರವಿಸಲಾಯಿತು.

ಡಾ.ಸುಧಾಮೂರ್ತಿ ಅವರಿಂದ 'ಹಸ್ತಾಕ್ಷರ' ಕಾರ್ಯಕ್ರಮ

ಪುಸ್ತಕಕ್ಕೆ ಸಹಿ ಹಾಕಿ ಓದುಗರೊಂದಿಗೆ ಫೋಟೊ ತೆಗೆಸಿಕೊಂಡರು

ಮೈಸೂರು, ಮೇ 15(ಎಂಕೆ)– ನಗರದ ಫೋರಂ ಸೆಂಟರ್ ಸಿಟಿ ಮಾಲ್‌ನಲ್ಲಿರುವ ಕ್ರಾಸ್‌ವರ್ಲ್ಡ್ ಪುಸ್ತಕ ಮಳಿಗೆಯಲ್ಲಿ ಇನ್‌ಫೋಸಿಸ್ ಪ್ರತಿಷ್ಠಾನದ ಮಾಜಿ ಅಧ್ಯಕ್ಷೆ ಮತ್ತು ಕವಯಿತ್ರಿ ಡಾ.ಸುಧಾಮೂರ್ತಿ ಅವರು 'ಹಸ್ತಾಕ್ಷರ' ಕಾರ್ಯಕ್ರಮ ನಡೆಸಿಕೊಟ್ಟರು.

ಈ ವೇಳೆ ಡಾ.ಸುಧಾಮೂರ್ತಿ ಅವರು ತಾವು ಬರೆದ ಪುಸ್ತಕಗಳನ್ನು ಖರೀದಿಸಿದ ನೂರಾರು ಮಂದಿ ಓದುಗರು, ವಿದ್ಯಾರ್ಥಿಗಳೊಂದಿಗೆ ಫೋಟೊ ತೆಗೆಸಿಕೊಂಡರಲ್ಲದೆ, ಪುಸ್ತಕಗಳಿಗೆ ಸಹಿ ಹಾಕಿ ಹೆಚ್ಚೆಚ್ಚು ಪುಸ್ತಕ ಓದುವಂತೆ ಪ್ರೋತ್ಸಾಹಿಸಿದರು. ಬಳಿಕ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿ, ವಿದ್ಯಾರ್ಥಿಗಳು, ಮಕ್ಕಳು ಮೊಬೈಲ್ ಬಿಟ್ಟು ಪುಸ್ತಕಗಳನ್ನು ಓದುವಂತಾಗಬೇಕು. ಪುಸ್ತಕಗಳೊಂದಿಗೆ ಹೆಚ್ಚಾಗಿ ಬೆರೆಯಬೇಕು. ಕೊರೊನಾ ನಂತರ ಹೊರಗೆ ಬಂದಿದ್ದು, ಓದುಗರೊಂದಿಗೆ ಬೆರೆಯುವ ಉದ್ದೇಶದಿಂದ 'ಹಸ್ತಾಕ್ಷರ' ಕಾರ್ಯಕ್ರಮ ಹಮ್ಮಿಕೊಂಡಿದ್ದೇವೆ ಎಂದರು.

ದೇಶದೆಲ್ಲೆಡೆ 33 ಲಕ್ಷಕ್ಕೂ ಹೆಚ್ಚು ಇಂಗ್ಲಿಷ್ ಪುಸ್ತಕಗಳೇ ಮಾರಾಟವಾಗಿವೆ. ಪುಸ್ತಕಗಳು ಖರ್ಚಾಗುವುದಕ್ಕಿಂತ ಮಕ್ಕಳು ಓದಬೇಕು. ಪುಸ್ತಕ ಕೊಟ್ಟರೆ ಮಕ್ಕಳು ಓದುತ್ತಾರೆ ಎಂಬುದು ನನ್ನ ಮನಸ್ಸಿನಲ್ಲಿದೆ. ಆದ್ದರಿಂದ ಸಹಿ ಮಾಡಿ ಪುಸ್ತಕಗಳನ್ನು ನೀಡಿ, ಪ್ರೋತ್ಸಾಹಿಸುವ ಕೆಲಸ ಮಾಡುತ್ತಿದ್ದೇನೆ ಎಂದು ಹೇಳಿದರು.

ಸಂಭ್ರಮಿಸಿದ ಓದುಗರು, ವಿದ್ಯಾರ್ಥಿಗಳು: ನೆಚ್ಚಿನ ಸಾಧಕಿ ಡಾ.ಸುಧಾಮೂರ್ತಿ ಅವರನ್ನು ಕಂಡ ನೂರಾರು ಮಂದಿ ಓದುಗರು, ವಿದ್ಯಾರ್ಥಿಗಳು, ಅಭಿಮಾನಿಗಳು ಪುಸ್ತಕಗಳನ್ನು ಖರೀದಿಸಿ ಸಹಿ ಪಡೆದರಲ್ಲದೆ, ಫೋಟೊ ತೆಗೆದು ಕೊಂಡು ಸಂಭ್ರಮಿಸಿದರು. ನಿಮ್ಮಂತೆ ಸಾಧಕರಾಗುವ ಆಸೆ, ನಿಮ್ಮ ಇನ್‌ಫೋಸಿಸ್ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದೇವೆ ಎಂದರಲ್ಲದೆ ಕುಶಲೋಪರಿ ವಿಚಾರಿಸಿದರು.



ಹೆಬ್ಬಾಳ ಕೆರೆಯಲ್ಲಿದ್ದ ಮೀನುಗಳು ಕಲುಷಿತ ನೀರಿ ನಿಂದ ಸಾವನ್ನಪ್ಪಿರುವುದು ಗಮನಕ್ಕೆ ಬಂದಿದೆ. ನೂರಾರು ಕೋಟಿ ರೂ., ಖರ್ಚು ಮಾಡಿ ಅಭಿವೃದ್ಧಿಪಡಿಸಿದ್ದೇವೆ. ಆದರೆ ಕೆರೆಯ ಸದ್ಬಳಕೆಯಾಗುತ್ತಿಲ್ಲ. ಸದ್ಯದಲ್ಲಿಯೇ ಹೆಬ್ಬಾಳ ಕೆರೆ ನೋಡಲು ಹೋಗುತ್ತೇನೆ.
- ಡಾ.ಸುಧಾಮೂರ್ತಿ



ಮೈಸೂರಿನ ಜೆ.ಪಿ.ನಗರ ಸಮೀಪದ ಶ್ರೀನಗರದಲ್ಲಿರುವ ರಾಷ್ಟ್ರೋತ್ಥನ ವಿದ್ಯಾಕೇಂದ್ರ (ಆರ್‌ವಿಕೆ)ದ ವತಿಯಿಂದ ಎನ್‌ಐಇ ಒಳಾಂಗಣ ಕ್ರೀಡಾಂಗಣದಲ್ಲಿ ನಡೆದ ದೇಸಿ ಉತ್ಸವವನ್ನು ಅಂತಾರಾಷ್ಟ್ರೀಯ ಯೋಗಪಟು ಖುಷಿ ಹೇಮಚಂದ್ರ ಅವರು ಉದ್ಘಾಟಿಸಿದರು. ಚಿತ್ರದಲ್ಲಿ ಶ್ರೀನಗರ ಆರ್‌ವಿಕೆ ಕಾರ್ಯದರ್ಶಿ ಎಂ.ಜಿ. ಚಂದ್ರಶೇಖರ್, ವಿಜಯನಗರ ಆರ್‌ವಿಕೆ ಕಾರ್ಯದರ್ಶಿ ಎ.ಆರ್. ಮಲ್ಲರಾಜ ಅರಸ್, ಮ್ಯಾನೇಜಿಂಗ್ ಕಮಿಟಿ ಸದಸ್ಯ ಹರೀಶ್ ಶೆಣೈ, ಆರ್‌ವಿಕೆ ನಿರ್ದೇಶಕಿ ಡಾ. ಎಲ್. ಸವಿತಾ, ಪ್ರಾಂಶುಪಾಲೆ ಶ್ರೀಮತಿ ಅನಿತಾ ಇನ್ನಿತರರಿದ್ದಾರೆ.

ಮೈಸೂರಲ್ಲಿ ಮಳೆಯ ಆರ್ಭಟ

ಮನೆಗಳು, ರಸ್ತೆಗಳು ಜಲಾವೃತ್ತ, ಜನರ ಪರದಾಟ

ಮೈಸೂರು, ಮೇ 15(ಎಂಕೆ)– ಮೈಸೂರಿನಲ್ಲಿ ವರುಣನ ಆರ್ಭಟ ಮುಂದುವರೆದಿದ್ದು, ಭಾನುವಾರ ರಾತ್ರಿ ಸುರಿದ ಭಾರೀ ಮಳೆಗೆ ಅನೇಕ ಪ್ರದೇಶಗಳಲ್ಲಿನ ಮನೆಗಳು, ರಸ್ತೆಗಳು ಜಲಾವೃತವಾಗಿವೆ. ಬಡಾವಣೆಗಳ ಒಳಗೆ ನೀರು ನುಗ್ಗಿದ್ದು, ಜನರು ನಿದ್ದೆಯಿಲ್ಲದೆ ಪರದಾಡುವಂತಾಗಿದೆ.



ಬೆಳಗ್ಗೆಯಿಂದ ಬಿಡುವು ನೀಡಿದ್ದ ಮಳೆ ರಾತ್ರಿ 7.30ರಿಂದ ತಡರಾತ್ರಿವರೆಗೆ ನಗರದ ಕೆಲವೆಡೆ ಧಾರಾಕಾರವಾಗಿ ಸುರಿಯಿತು. ಬನ್ನಿಮಂಟಪ, ತಿಲಕ್‌ನಗರ, ಯಾದವಗಿರಿ, ಕೆ.ಟಿ.ಸ್ಟ್ರೀಟ್, ಶಿವರಾಂಪೇಟೆ, ಉದಯಗಿರಿ, ರಾಜೀವ್‌ನಗರ, ಶಾಂತಿನಗರ, ಸಿದ್ಧಾರ್ಥ ಬಡಾವಣೆ ಸೇರಿದಂತೆ ಕೆಲವೆಡೆ ಧಾರಾಕಾರವಾಗಿ ಸುರಿಯಿತು. ಪರಿಣಾಮ ರಸ್ತೆಯಲ್ಲಿ ನೀರು ನಿಂತು ವಾಹನ ಸವಾರರು ವಾಹನ ಚಲಾಯಿಸಲು ಪರದಾಡುವಂತಾಯಿತು.

ತಿಲಕ್‌ನಗರ, ಉದಯಗಿರಿ, ರಾಜೀವ್‌ನಗರದಲ್ಲಿನ ಕೆಲವು ಮನೆಗಳಿಗೆ ನೀರು ನುಗ್ಗಿ ಅವಾಂತರ ಸೃಷ್ಟಿಸಿದ್ದು, ನಿವಾಸಿಗಳು ಪರದಾಡುವಂತಾಯಿತು. ಒಳಚರಂಡಿ ಮ್ಯಾನ್‌ಹೋಲ್‌ಗಳು ತುಂಬಿ ಹರಿದು ತಿರುಗಾಡುವುದಕ್ಕೂ ಕಷ್ಟಪಡುವಂತಾಯಿತು. ಗಾಳಿ ಕಡಿಮೆಯಿದ್ದರಿಂದ ಮರಗಳು, ವಿದ್ಯುತ್ ಕಂಬಗಳು ಮುರಿದು ಬಿದ್ದಿರುವ ಕುರಿತು ಯಾವುದೇ ಮಾಹಿತಿ ಬಂದಿಲ್ಲ. ಕೆಲವೆಡೆ ವಿದ್ಯುತ್ ವ್ಯತ್ಯಯವಾಗಿದೆ ಎಂದು ನಗರ ಪಾಲಿಕೆ ಕಂಟ್ರೋಲ್ ರೂಂ ಸಿಬ್ಬಂದಿ ಮಾಹಿತಿ ನೀಡಿದರು.

ಕೆಎಸ್‌ಸಿಎಗೆ ಪೊಲೀಸ್ ಇಲಾಖೆಯ ಕ್ರೀಡಾಂಗಣ

● ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಪೊಲೀಸ್ ಆಯುಕ್ತ ಡಾ. ಚಂದ್ರಗುಪ್ತ ● ಕ್ರಿಕೆಟ್ ಆಡಲು ಅವಕಾಶ ಕೋರಿರುವ ಕೆಎಸ್‌ಸಿಎ ● ಮಕ್ಕಳಿಗೆ ಕ್ರೀಡೆ ಬಗ್ಗೆ ಪ್ರೋತ್ಸಾಹ ನೀಡಿ

ಮೈಸೂರು,ಮೇ15(ಜಿಎ)–ಕ್ರಿಕೆಟ್ ಆಡಲು ಪೊಲೀಸ್ ಇಲಾಖೆಯ ಕ್ರೀಡಾಂಗಣವೊಂದನ್ನು ನೀಡುವಂತೆ ಕರ್ನಾಟಕ ಕ್ರಿಕೆಟ್ ಸಂಸ್ಥೆ (ಕೆಎಸ್‌ಸಿಎ) ಮನವಿ ಮಾಡಿದ್ದು, ಮುಂದಿನ ದಿನಗಳಲ್ಲಿ ಇದರ ಬಗ್ಗೆ ಚರ್ಚಿಸಿ ಕ್ರೀಡಾಂಗಣವನ್ನು ಕೆಎಸ್‌ಸಿಎಗೆ ನೀಡುವ ಬಗ್ಗೆ ತೀರ್ಮಾನ ತೆಗೆದುಕೊಳ್ಳಲಾಗುವುದು ಎಂದು ಮೈಸೂರು ನಗರ ಪೊಲೀಸ್ ಆಯುಕ್ತ ಡಾ.ಚಂದ್ರಗುಪ್ತ ತಿಳಿಸಿದರು.

ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ (ಕೆಎಸ್‌ಸಿಎ)ಯ ಮೈಸೂರು ವಲಯದ ವತಿಯಿಂದ ಆಯೋಜಿಸಿದ್ದ ಪಂದ್ಯಾವಳಿಯಲ್ಲಿ ಭಾಗವಹಿಸಿ ವಿಜೇತರಾದ ತಂಡಗಳಿಗೆ, ಉತ್ತಮ ಪ್ರದರ್ಶನ ನೀಡಿದ ಬ್ಯಾಟ್ಸ್‌ಮೆನ್, ಬೌಲರ್ ಹಾಗೂ ರಾಜ್ಯವನ್ನು ಪ್ರತಿನಿಧಿಸುವ ಕ್ರೀಡಾಪಟುಗಳಿಗಾಗಿ ಮೈಸೂರಿನ ಖಾಸಗಿ ಕಲ್ಯಾಣ ಮಂಟಪದಲ್ಲಿ ಏರ್ಪಡಿಸಲಾಗಿದ್ದ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಭಾಗವಹಿಸಿ ಅವರು ಮಾತನಾಡುತ್ತಿದ್ದರು.

ಮೈಸೂರು ಪೊಲೀಸ್ ಇಲಾಖೆ ಮತ್ತು ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯ ಮೈಸೂರು ವಲಯ ಒಡಂಬಡಿಕೆ ಮಾಡಿಕೊಂಡು ಮೈಸೂರಿನಲ್ಲಿರುವ ಪೊಲೀಸ್ ಇಲಾಖೆಯ ಕ್ರೀಡಾಂಗಣಗಳನ್ನು ಕ್ರಿಕೆಟ್ ಆಡಲು ನೀಡುವಂತೆ ಕೆಎಸ್‌ಸಿಎ ಮನವಿ ಸಲ್ಲಿಸಿದೆ. ಒಂದು ಕ್ರೀಡಾಂಗಣವನ್ನು ನಿತ್ಯ ಬಳಸಿದರೆ ಕ್ರೀಡಾಂಗಣಕ್ಕೆ ಗೌರವ ನೀಡಿದಂತೆ. ಈ ವಿಚಾರವಾಗಿ ಮುಂದಿನ ದಿನಗಳಲ್ಲಿ ಚರ್ಚಿಸಿ ಪೊಲೀಸ್ ಇಲಾಖೆಯ ಕ್ರೀಡಾಂಗಣಗಳನ್ನು ಬಳಸಿಕೊಳ್ಳಲು ನೀಡುತ್ತೇವೆ ಎಂದು ಭರವಸೆ ನೀಡಿದರು.



ನಾನು ಜೀವನದಲ್ಲಿ ಶಾಲೆ, ಕಾಲೇಜು ಹಾಗೂ ಪೊಲೀಸ್ ಟ್ರೈನಿಂಗ್ ಸಮಯದಲ್ಲಿ ಓದುವುದಕ್ಕಿಂತ ಹೆಚ್ಚು ಸಮಯವನ್ನು ಕ್ರಿಕೆಟ್‌ಗೆ ಮೀಸಲಿಟ್ಟಿದ್ದೆ ಎಂದ ಅವರು ಇತ್ತೀಚಿನ ದಿನಗಳಲ್ಲಿ ಕ್ರಿಕೆಟ್ ಕ್ಷೇತ್ರದಲ್ಲಿ ಅನೇಕ ಬದಲಾವಣೆ ಮತ್ತು ಅಪ್ಡೇಟ್ ಆಗಿದ್ದು, ಅದನ್ನು ಯುವ ಪ್ರತಿಭೆಗಳು ಸದುಪಯೋಗಪಡಿಸಿಕೊಳ್ಳುತ್ತಿದ್ದಾರೆ ಎಂದರು.

ಕ್ರಿಕೆಟ್ ಸೇರಿದಂತೆ ಯಾವುದೇ ಕ್ರೀಡೆಗಳಲ್ಲಿ ಮಕ್ಕಳು ಆಸಕ್ತಿ ತೋರಿದರೆ ಪೋಷಕರು ಅವರಿಗೆ ಪ್ರೋತ್ಸಾಹ ನೀಡಬೇಕು. ಏಕೆಂದರೆ ಗುರಿ ಸಾಧಿಸಲು, ಜೀವನದಲ್ಲಿ ಬರುವ ಕಷ್ಟಗಳನ್ನು ಸಹಿಸಿಕೊಳ್ಳುವುದನ್ನು ಮತ್ತು ಮತ್ತೊಬ್ಬರಿಗೆ ತೊಂದರೆಯಾಗದಂತೆ ಹೇಗೆ ಜೀವನ ಸಾಗಿಸಬಹುದು ಎಂಬುದನ್ನು ಕ್ರೀಡೆ ಕಲಿಸುತ್ತದೆ ಎಂದರು.

ಕೆಎಸ್‌ಸಿಎ ಉಪಾಧ್ಯಕ್ಷ ಜೆ.ಅಭಿರಾಂ ಮಾತನಾಡಿ, ರಾಜ್ಯದಲ್ಲಿ ಬೆಂಗಳೂರು ಬಳಿಕ ಅತಿಹೆಚ್ಚು ಕ್ರಿಕೆಟ್ ಚಟುವಟಿಕೆ ನಡೆಯುವುದು ಮೈಸೂರಿನಲ್ಲಿ. ಮೈಸೂರು ವಲಯವು ಹಲವು ಪ್ರತಿಭಾನ್ವಿತ ಕ್ರಿಕೆಟಿಗರನ್ನು ರಾಜ್ಯ ಹಾಗೂ ದೇಶಕ್ಕೆ ನೀಡಿದೆ. ಎಲ್ಲ ವಯೋವರ್ಗಗಳಲ್ಲೂ ಉತ್ತಮ ಆಟಗಾರರು ಇಲ್ಲಿದ್ದು, ಹಲವರು ಈಗಾಗಲೇ ರಾಜ್ಯ ತಂಡವನ್ನು ಪ್ರತಿನಿಧಿಸಿದ್ದಾರೆ' ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಆಟದ ಜೊತೆಗೆ ಶಿಕ್ಷಣದೆಡೆಗೂ ಗಮನ ಕೊಡಬೇಕು. ಏಕೆಂದರೆ ಇಲ್ಲಿರುವ ಎಲ್ಲ ಹುಡುಗರಿಗೂ ಮುಂದೆ ಸಚಿನ್ ತೆಂಡೂಲ್ಕರ್ ಅಥವಾ ವಿರಾಟ್ ಕೊಹ್ಲಿ ಆಗಲು ಸಾಧ್ಯವಿಲ್ಲ. ಕ್ರೀಡೆ ಮತ್ತು ಶಿಕ್ಷಣದ ನಡುವೆ ಸಮತೋಲನ ಕಾಪಾಡಿಕೊಂಡು ಯಶಸ್ಸಿನ ಹಾದಿಯಲ್ಲಿ ಮುನ್ನಡೆಯಿರಿ' ಎಂದು ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ಆರ್.ಕೆ. ಹರಿಕೃಷ್ಣ ಕುಮಾರ್, ಎಸ್. ಸುಧಾಕರ್, ಇರ್ಫಾನ್ ಸೇಠ್ ಸೇರಿದಂತೆ ಮೈಸೂರು ವಲಯದ ಪದಾಧಿಕಾರಿಗಳು ಭಾಗವಹಿಸಿದರು.

ಇದಕ್ಕೂ ಮೊದಲು ಕೊರೊನಾ ಯೋಧರು ಮತ್ತು ರಾಜ್ಯದ ಹಿರಿಯ ಅಂಪೈರ್‌ಗಳಾದ ಹರಿನಾರಾಯಣ್, ಅನಂತ್, ವಿಜಯ್ ಪ್ರಕಾಶ್ ಅವರನ್ನು ವಲಯದ ವತಿಯಿಂದ ಗೌರವಿಸಲಾಯಿತು.

ನಂತರ 2021–22ನೇ ಸಾಲಿನಲ್ಲಿ ರಾಜ್ಯವನ್ನು ಪ್ರತಿನಿಧಿಸಿದ ಎಂ.ವೆಂಕಟೇಶ್, ಎಂ.ಬಿ. ದರ್ಶನ್, ಎಸ್.ಜೆ. ನಿಕಿನ್ ಜೋಸ್, ಕೃಷ್ಣ ಬೇಂದ್ರೆ, ಕೃತಿಕ ಕೃಷ್ಣ, ಎಲ್.ಆರ್. ಚೇತನ್, ಎಲ್.ಆರ್. ಕುಮಾರ್, ರಕ್ಷಿತ ಕೃಷ್ಣಪ್ಪ, ಶುಭ ಸತೀಶ್, ಪಿ.ಸಲೋನಿ ಮತ್ತು ಉತ್ತಮ ವಾದ ಪ್ರದರ್ಶನ ನೀಡಿದ ಎಂ.ಡಿ. ಆಯುಷ್, ರಾಜಶೇಖರ್ ಸ್ವಾಮಿ, ಮನೋಜ್ ಕುಮಾರ್, ಬಿ.ಧೀಮಂತ್, ಜಿ. ಶಾಂತರಾಜು, ಅಬಿದ್ ಅಲಿ ಅಹಮ್ಮದಾಲಿ ಮುಲ್ಲ, ವಿಭೋದ್ ರಮೇಶ್, ರಂಜಿತ್ ಸತೀಶ್, ಪಿ.ಎ. ಚಂದ್ರು, ಹೇಮಂತ್ ರಾಜ್‌ಕುಮಾರ್, ಸಬಾಸ್ಟಿನ್ ಅಲಿ, ವಿಷ್ಣು ಪ್ರಿಯ, ಆರ್. ಮಾಧವನ್ ಹಾಗೂ ಪಂದ್ಯಾವಳಿಗಳಲ್ಲಿ ಪ್ರಥಮ ಮತ್ತು ದ್ವಿತೀಯ ಸ್ಥಾನ ಪಡೆದ ತಂಡಗಳಾದ ಫ್ರೆಂಡ್ಸ್ ಯೂನಿಯನ್ ಕ್ರಿಕೆಟ್ ಕ್ಲಬ್, ನಾಷನಲ್ ಕ್ರಿಕೆಟ್ ಕ್ಲಬ್, ಸರಸ್ವತಿಪುರಂ ಸ್ಪೋರ್ಟ್ಸ್ ಕ್ಲಬ್, ರಾವ್ ಬಹದ್ದೂರ್ ನರಸಪ್ಪ ಕ್ರಿಕೆಟ್ ಕ್ಲಬ್, ಜೋ ಜೋ ಕ್ರಿಕೆಟ್ ಕ್ಲಬ್, ನೋಟ್ ಮುದ್ರಣ ಕ್ರಿಕೆಟ್ ಕ್ಲಬ್, ಫ್ರೆಂಡ್ಸ್ ಅಸೋಸಿಯೇಷನ್ ಕ್ರಿಕೆಟ್ ಕ್ಲಬ್, ಗಾರ್‌ನಿರ್ ಕ್ರಿಕೆಟ್ ಕ್ಲಬ್, ಕುವೆಂಪುನಗರ ಕ್ರಿಕೆಟ್ ಕ್ಲಬ್, ಮೋಹನ್ಸ್ ಇಲೆವೆನ್, ಕರಾವಳಿ ಕ್ರಿಕೆಟರ್ಸ್ ಹಾಗೂ ಯುವರಾಜ ಕಾಲೇಜಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು.

ನಕ್ಕರೆ ಅದೇ ಸ್ವರ್ಗ

ಆತ : "ನಾನು ಲಕ್ಷಾಧೀಶ್ವರ ಆಗಿದ್ದು ನನ್ನ ಹೆಂಡತಿಯಿಂದ"
ಈತ : "ಇದಕ್ಕೆ ಮುಂಚೆ ಏನಾಗಿದ್ರಿ?"
ಆತ : "ಕೋಟ್ಯಾಧೀಶ್ವರ ಆಗಿದ್ದೆ!"

ಮೈಸೂರು ಮಿತ್ರ

ಸೋಮವಾರ, 16 ಮೇ 2022

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ. ಗೋವಿಂದೇಗೌಡ *M.A.*

ಅಮೃತವಾಹಿನಿ

ಮನುಷ್ಯ ಎಷ್ಟರ ಮಟ್ಟಿಗೆ ಇತರರ ಒಳ್ಳೆಯದಕ್ಕೆ ದುಡಿಯುತ್ತಾನೋ ಅಷ್ಟರಮಟ್ಟಿಗೆ ಆತ ದೊಡ್ಡವನಾಗುತ್ತಾನೆ. –ಮಹಾತ್ಮ ಗಾಂಧೀಜಿ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು

ಬಡವರ ಮನೆ ಊಟ ಚೆನ್ನ, ಶ್ರೀಮಂತರ ಮನೆ ನೋಟ ಚೆನ್ನ.

ನಿಮ್ಮ ಪತ್ರಗಳು

ಮೈಸೂರು ಅರಮನೆ ಸುತ್ತ ವ್ಯಾಪಾರದಲ್ಲಿ ಮೋಸ

ಮಾನ್ಯರೇ

ಮೈಸೂರು ಅರಮನೆ ಪ್ರವಾಸಿಗರನ್ನು ಆಕರ್ಷಿಸಿ ವಿಶ್ವ ಪ್ರಸಿದ್ಧಿಯಾಗಿರುವುದು ಸರಿಯಷ್ಟೆ., ಅರಮನೆ ಮಹಾದ್ವಾರ ಮತ್ತು ಸುತ್ತಮುತ್ತಲಿನ ವ್ಯಾಪಾರದಲ್ಲಿ ಮಹಾ ಮೋಸ ನಡೆಯುತ್ತಿದೆ. ಅಲ್ಲಿರುವ ಯಾವುದೇ ಅಂಗಡಿಗಳಲ್ಲಿ ವಸ್ತುಗಳನ್ನು ಖರೀದಿಸಿದರೆ ಮಾಮೂಲಿ ದರಕ್ಕಿಂತ 10 ಪಟ್ಟು ಬೆಲೆ ಹೆಚ್ಚಾಗಿರುತ್ತದೆ. ಇದರ ಬಗ್ಗೆ ವ್ಯಾಪಾರಸ್ಥರನ್ನು ವಿಚಾರಿಸಿದರೆ ಇಲ್ಲಿನ ಭದ್ರತಾ ಪಡೆಯ ಅಧಿಕಾರಿಗಳ ಕಡೆ ಕೈ ತೋರಿಸುತ್ತಾರೆ.



ಮೈಸೂರು ಅರಮನೆಯ ಭದ್ರತಾ ಪಡೆಗೆ ಮಂತ್ಲಿ (ಪ್ರತಿ ತಿಂಗಳು ಲಂಚ)ನೀಡಬೇಕು ಜೊತೆಗೆ ಕಚೇರಿಯ ಖರ್ಚು ವೆಚ್ಚವನ್ನು ನಾವೇ ನೋಡಿಕೊಳ್ಳಬೇಕು, ಅದಕ್ಕಾಗಿ ಈ ಹೆಚ್ಚುವರಿ ಬೆಲೆಗೆ ಪದಾರ್ಥಗಳನ್ನು ಮಾರಬೇಕಾಗಿದೆ ಎನ್ನುತ್ತಾರೆ. ಇದು ಎಷ್ಟು ಸುಳ್ಳೋ, ನಿಜವೋ ಗೊತ್ತಿಲ್ಲ. ಮೈಸೂರು ಅರಮನೆ ವಿಶ್ವದಲ್ಲೇ ಮೊದಲನೇ ಸ್ಥಾನ ಅಲಂಕರಿಸಿರುವುದು ಸಂತಸದ ವಿಷಯ. ಆದರೆ ಅರಮನೆಯ ಮುಂದಿನ ವ್ಯಾಪಾರಿಗಳಿಂದ ಮೈಸೂರು ಅರಮನೆಗೆ ಕಳಂಕ ಬರುತ್ತಿದೆ. ಸಂಬಂಧಪಟ್ಟವರು ಕೂಡಲೇ ಹೆಚ್ಚಿನ ಬೆಲೆಗೆ ವಸ್ತುಗಳನ್ನು ಮಾರಾಟ ಮಾಡಿ ಜನರಿಗೆ ಮೋಸ ಮಾಡುತ್ತಿರುವವರ ಬಗ್ಗೆ ಕ್ರಮ ಕೈಗೊಳ್ಳುವುದು ಅಗತ್ಯವಾಗಿದೆ.

– ಬಸವರಾಜು, ಮೈಸೂರು

ಕರ್ನಾಟಕದಲ್ಲಿ ಕನ್ನಡವೇ ಸಾರ್ವಭೌಮ

ಮಾನ್ಯರೇ

ಆಯಾ ರಾಜ್ಯದ ಜನರು ಯಾವ ಭಾಷೆಯನ್ನು ಮಾತನಾಡುತ್ತಾರೋ ಅದರ ಆಧಾರದ ಮೇಲೆ ಭಾಷಾವಾರು ಪ್ರಾಂತ್ಯಗಳನ್ನು ಅಸ್ತಿತ್ವಕ್ಕೆ ತರಲಾಗಿದೆ. ಮೊದಲು ಕನ್ನಡ ಮಾತನಾಡುವ ಮೈಸೂರು ರಾಜ್ಯ ಉದಯವಾಯಿತು. ಆನಂತರ ಇದನ್ನು ಕರ್ನಾಟಕ ರಾಜ್ಯ ಎಂದು ಬದಲಾಯಿಸಲಾಯಿತು.

ರಾಜ್ಯದ ಪ್ರಮುಖ ಭಾಷೆಯಾಗಿ ಕನ್ನಡ, ನಂತರ ಇಂಗ್ಲಿಷ್, ಹಿಂದಿ ಭಾಷೆಯನ್ನು ಬಳಸಲಾಗುತ್ತಿದೆ. ಸಾಹಿತಿ ಡಾ. ಹಾ.ಮಾ.ನಾ ಅವರು ಹೇಳಿರುವಂತೆ 'ಒಂದೊಂದು ಭಾಷೆಯೂ ಒಂದೊಂದು ವರ, ಆದರೆ ಕನ್ನಡ ನಾಡಿನಲ್ಲಿ ಕನ್ನಡವೇ ಪ್ರಥಮ, ದ್ವಿತೀಯ ಎಲ್ಲವೂ. ಆ ನಂತರದ ಸ್ಥಾನ ಇತರೆ ಭಾಷೆಗಳಿಗೆ ಸಲ್ಲಬೇಕು. ಎಲ್ಲಿಯವರೆಗೆ ಕನ್ನಡಿಗರು ಆತ್ಮಹತ್ಯಾಕಾರಿಯಾದ ಔದಾರ್ಯ ಧೋರಣೆಯನ್ನು ಬಿಡುವುದಿಲ್ಲವೋ ಅಲ್ಲಿಯವರೆಗೂ ಕನ್ನಡ ನಶಿಸುತ್ತಾ ಸಾಗುತ್ತದೆ' ಎಂದು.

ಹೌದಲ್ಲವೇ?! ಈ ಮಾತು ಇಂದಿಗೂ ಅಕ್ಷರಶಃ ಸತ್ಯ. ಕನ್ನಡ ಮಾತನಾಡುವವರು ಇತರೆ ಭಾಷೆಯನ್ನು ಕಲಿಯುವುದು, ಮಾತನಾಡುವುದು ಅವರವರ ವಿವೇಚನೆಗೆ ಬಿಟ್ಟಿದ್ದು, ಇದರಲ್ಲಿ ಯಾವ ಬಗೆಯ ಒತ್ತಡವಾಗಲೀ ಹೇರಿಕೆಯಾಗಲೀ ಇರಕೂಡದು. ಹಾಗಾಗಿ ನಾವು ಎಲ್ಲಾ ಭಾಷೆಗಳನ್ನೂ ಗೌರವಿಸೋಣ. ನಮ್ಮ ನೆಲ ಕರ್ನಾಟಕದಲ್ಲಿ ಮೊದಲ ಪ್ರಾಶಸ್ತ್ಯ ಕನ್ನಡಕ್ಕೇ ಇರಲಿ. ನಾವು ನವೆಂಬರ್ ಕನ್ನಡಿಗರಾಗದೇ ನಿತ್ಯ ಕನ್ನಡಿಗರಾಗೋಣ.

– ಎನ್.ಎಸ್.ಗೋವಿಂದೇಗೌಡ,
ಅರೇನಹಳ್ಳಿ, ಪಿರಿಯಾಪಟ್ಟಣ ತಾಲೂಕು

ಕುಕ್ಕರಹಳ್ಳಿ ಕೆರೆಯಲ್ಲಿ ದೋಣಿ ವಿಹಾರ ಆರಂಭವಾಗಲಿ

ಮಾನ್ಯರೇ,

ಮೈಸೂರಿನ ಕುಕ್ಕರಹಳ್ಳಿ ಕೆರೆಯಲ್ಲಿ ದೋಣಿ ವಿಹಾರ ಆರಂಭಿಸುವುದು ಒಳಿತು. ಏಕೆಂದರೆ ಸಾರ್ವಜನಿಕರ ವಿಹಾರಕ್ಕೆ ಮೀಸಲಾಗಿದ್ದ ದೋಣಿಗಳು ಸದ್ಬಳಕೆಯಾಗದೇ ಹಾಗೇ ಉಳಿದಿದ್ದು, ಇದರಿಂದ ವಾಯು ವಿಹಾರ ಮಾಡಲು ಬರುವ ಸಾರ್ವಜನಿಕರಿಗೆ ದೋಣಿ ವಿಹಾರ ಸೌಲಭ್ಯವಿಲ್ಲದೇ ನಿರಾಸೆಯಾಗಿದೆ.



ಸಂಬಂಧಪಟ್ಟವರು ಕೂಡಲೇ ಕುಕ್ಕರಹಳ್ಳಿ ಕೆರೆಯಲ್ಲಿ ದೋಣಿ ವಿಹಾರ ಸೌಲಭ್ಯ ಕಲ್ಪಿಸುವ ಮೂಲಕ ವಾಯು ವಿಹಾರ ಮಾಡಲು ಬರುವವರಿಗೆ ದೋಣಿ ವಿಹಾರ ಸೌಲಭ್ಯವನ್ನು ಕಲ್ಪಿಸಿದರೆ ಒಂದಷ್ಟು ಆದಾಯವೂ ಬರುತ್ತದೆ ಹಾಗೂ ದೋಣಿಗಳೂ ಸದ್ಬಳಕೆಯಾಗುತ್ತವೆ.

– ಸಂದೇಶ್, ಮೈಸೂರು

ವಾಹನಗಳ ವಾರಸುದಾರರ ಗಮನಕ್ಕೆ

ಮೈಸೂರು, ಮೇ 15– ನರಸಿಂಹರಾಜ ಪೊಲೀಸ್ ಠಾಣೆ ಸರಹದ್ದಿನಲ್ಲಿ ವಾರಸುದಾರರಿಲ್ಲದೇ ನಿಂತಿದ್ದ 3 ಚಕ್ರಗಳನ್ನು ಅಮಾನತ್ತುಪಡಿಸಿಕೊಂಡು ಠಾಣೆಯಲ್ಲಿ ಇಡಲಾಗಿದ್ದು, ವಾಹನಗಳ ವಾರಸುದಾರರು ನರಸಿಂಹರಾಜ ಪೊಲೀಸ್ ಠಾಣೆಯ ಸಂಪರ್ಕಿಸಬಹುದಾಗಿದೆ.

ಪೊಲೀಸ್ ಠಾಣೆ ಆವರಣದಲ್ಲಿ ನಿಂತಿರುವ 3 ದ್ವಿಚಕ್ರವಾಹನಗಳಾದ Bajaj Pulsar KA-18-K-4183, Hero Honda CD100 KA09-H-6265, Honda Activa ನೊಂದಾಣಿ ಸಂಖ್ಯೆ ಲಭ್ಯವಿಲ್ಲ, ಈ ವಾಹನಗಳ ವಾರಸುದಾರರು ಠಾಣೆಗೆ ಖುದ್ದಾಗಿ ಹಾಜರಾಗಬಹುದು ಅಥವಾ ದೂ.ಸಂ: 0821–2418312, ಮೊ.ಸಂ: 9480802236ಗೆ ಸಂಪರ್ಕಿಸಬಹುದು ಎಂದು ಪೊಲೀಸ್ ಇನ್ಸ್‌ಪೆಕ್ಟರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬೆಕ್ಕಿಂದ ಪಾರಾಗಲು ಮನೆ ಹೊಕ್ಕಿದ ನಾಗರಾಜ!

ಮೈಸೂರು, ಮೇ 15(ಎಸ್‌ಬಿಡಿ)– ಬೆಕ್ಕಿನ ದಾಳಿಯಿಂದ ಪಾರಾಗಲು ನಾಗರ ಹಾವೊಂದು ಮನೆಯ ಆವರಣಕ್ಕೆ ಹೊಕ್ಕಿದ ಘಟನೆ ಮೈಸೂರಿನ ರಾಮಕೃಷ್ಣ ನಗರದಲ್ಲಿ ನಡೆದಿದೆ. ರಾಮಕೃಷ್ಣನಗರ ಜಿ–ಬ್ಲಾಕ್, 6ನೇ ಕ್ರಾಸ್‌ನಲ್ಲಿ ಬೃಹತ್ ಗಾತ್ರದ ನಾಗರ ಹಾವು ಕಾಣಿಸಿಕೊಂಡಿದೆ. ಈ ವೇಳೆ ಅಲ್ಲಿದ್ದ ಬೆಕ್ಕು ಏಕಾಏಕಿ ಹಾವಿನ ಕಡೆಗೆ ಓಡಿದೆ. ದಾಳಿಯ ಸಾಧ್ಯತೆ ಅರಿತ ನಾಗರ ಹಾವು ತನ್ನ ವೇಗ ಹೆಚ್ಚಿಸಿ, ಸಮೀಪದ ಮನೆಯೊಂದರ ಆವರಣವನ್ನು ಹೊಕ್ಕಿದೆ. ಟೆರೇಸ್‌ನ ಮೆಟ್ಟಿಲುಗಳ ಅಡಿಯಲ್ಲಿ ಸುತ್ತಿಕೊಂಡು ಮಲಗಿಬಿಟ್ಟಿದೆ. ಇದನ್ನು ಗಮನಿಸಿದ ಜನ, ಕೂಡಲೇ ಉರಗ ರಕ್ಷಕ ಸ್ನೇಕ್ ರಮೇಶ್‌ಗೆ ಮಾಹಿತಿ ನೀಡಿದ್ದಾರೆ. ತಕ್ಷಣ ಸ್ಥಳಕ್ಕೆ ಧಾವಿಸಿದ ರಮೇಶ್ ಅವರು, ಮೆಟ್ಟಿಲು ಕೆಳಗೆ ಮಲಗಿದ್ದ ನಾಗರ ಹಾವನ್ನು ರಕ್ಷಿಸಿ, ಸುರಕ್ಷಿತ ಸ್ಥಳದಲ್ಲಿ ಬಿಡಲು ತೆಗೆದುಕೊಂಡು ಹೋದರು. ಬಳಿಕ ಮನೆಯವರು ಹಾಗೂ ಸುತ್ತಮುತ್ತಲ ಜನರಲ್ಲಿದ್ದ ಆತಂಕ ನಿವಾರಣೆಯಾಯಿತು.

ಕಸ್ತೂರಿರಂಗನ್...

- ಅಂದು ಮೈಸೂರಿಗರಿಗಿದ್ದ ನಾಮಬಲ



✍ ಎಸ್.ಬಿ. ದೇವರಾಜು

ಕಸ್ತೂರಿರಂಗನ್...! ಎರಡೂವರೆ ದಶಕಗಳ ಹಿಂದೆ ಈ ನಾಮಬಲದಿಂದಲೇ ಮೈಸೂರಿಗರು ಸುರಕ್ಷೆ ಖಾತರಿ ಹೊಂದಿದ್ದರು. ಸರಿ ರಾತ್ರಿಯಾದರೂ ಒಂದೇ ರಿಂಗ್‌ಗೆ ಕರೆ ಸ್ವೀಕರಿಸಿ, 'ಕಸ್ತೂರಿರಂಗನ್...' ಎಂದರೆ ಇತ್ತ ಕರೆ ಮಾಡಿದವರು ನಿಟ್ಟುಸಿರು ಬಿಡುತ್ತಿದ್ದರು. ನಮ್ಮ ಸಮಸ್ಯೆಗೆ ಪರಿಹಾರ ಖಾತರಿ ಸಿಕ್ಕಿತು ಎಂಬ ಸಮಾಧಾನ ಅವರದ್ದಾಗಿರುತ್ತಿತ್ತು. ಕಸ್ತೂರಿರಂಗನ್ ಅವರು, ಮೈಸೂರು ನಗರ ಪೊಲೀಸ್ ಆಯುಕ್ತರಾಗಿ 2 ವರ್ಷ 5 ತಿಂಗಳ ಕಾಲ ಅತ್ಯುತ್ತಮ ಸೇವೆ ಸಲ್ಲಿಸಿ, ಮಾದರಿಯಾಗಿದ್ದರಲ್ಲದೆ ಜನ ಸಾಮಾನ್ಯರ ಮನ ಗೆದ್ದಿದ್ದರು.

1992ರ ಡಿಸೆಂಬರ್ 28ರಿಂದ 1995ರ ಮೇ 6ರವರೆಗೆ ಹೆಚ್.ಆರ್.ಕಸ್ತೂರಿರಂಗನ್ ಅವರು, ಮೈಸೂರು ನಗರ ಪೊಲೀಸ್ ಆಯುಕ್ತರಾಗಿ ಸೇವೆ ಸಲ್ಲಿಸಿದ್ದಾರೆ. ಅವರ ಅಧಿಕಾರಾವಧಿಯಲ್ಲಿ ಮೈಸೂರು ನಗರದಲ್ಲಿದ್ದ ಕಾನೂನು–ಸುವ್ಯವಸ್ಥೆ ಹಾಗೂ ಸುರಕ್ಷತೆ ಬಗ್ಗೆ ಈಗಲೂ ಜನ ಸ್ಮರಿಸಿಕೊಳ್ಳುತ್ತಾರೆ. ಇದೇ ವೇಳೆ ಕಸ್ತೂರಿರಂಗನ್ ಅವರ ಬಗ್ಗೆ ಅಭಿಮಾನದಿಂದ ಮಾತನಾಡುತ್ತಾರೆ.

ಕೆ.ಆರ್.ಸರ್ಕಲ್‌ಗೆ ಸಿಗ್ನಲ್ ಲೈಟ್: ಮೈಸೂರಿನ ಕೆ.ಆರ್.ಸರ್ಕಲ್‌ನಲ್ಲಿ ಸುಗಮ ವಾಹನ ಸಂಚಾರ ಹಾಗೂ ಪಾದಚಾರಿಗಳ ಸುರಕ್ಷತೆ ದೃಷ್ಟಿಯಿಂದ ವರ್ತಕ ಸಮುದಾಯದ ವಿರೋಧದ ನಡುವೆಯೂ ಸಿಗ್ನಲ್ ಲೈಟ್‌ಗಳನ್ನು ಅಳವಡಿಸುವ ಸಾಹಸಕ್ಕೆ ಕೈಹಾಕಿ ಯಶಸ್ವಿಯಾದವರು ಕಸ್ತೂರಿರಂಗನ್. ಈ ಸರ್ಕಲ್‌ನಲ್ಲಿ ಸಿಗ್ನಲ್ ಲೈಟ್ ಅಳವಡಿಸಲು ವರ್ತಕ ಸಮುದಾಯದಿಂದ ತೀವ್ರ ವಿರೋಧ ವ್ಯಕ್ತಪಡಿಸಿತ್ತು. ಅಲ್ಲದೆ ಆಗಿನ ಮುಖ್ಯಮಂತ್ರಿ ವೀರಪ್ಪಮೊಯ್ಲಿ ಅವರಿಗೆ ದೂರು ಸಹ ಸಲ್ಲಿಸಿದ್ದರು. ಸಿಗ್ನಲ್ ಲೈಟ್ ಅಳವಡಿಕೆ ಹಾಗೂ ಕೆ.ಆರ್.ಸರ್ಕಲ್‌ನಲ್ಲಿ ವಾಹನ ಪಾರ್ಕಿಂಗ್‌ಗೆ ಅವಕಾಶ ನೀಡದಿದ್ದರೆ ನಮ್ಮ ವ್ಯಾಪಾರ ವಹಿವಾಟಿಗೆ ಕಲ್ಲು ಬೀಳುತ್ತದೆ ಎಂದು ಅವಲತ್ತುಕೊಂಡಿದ್ದರು. ಆಗ ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದ ಅಡಗೂರು ಹೆಚ್.ವಿಶ್ವನಾಥ್ ಅವರಲ್ಲೂ ಮನವಿ ಮಾಡಿದ್ದರು. ಒಮ್ಮೆ ವೀರಪ್ಪಮೊಯ್ಲಿ ಅವರು ಕಸ್ತೂರಿರಂಗನ್ ಅವರನ್ನು ಕರೆಸಿಕೊಂಡು ವರ್ತಕ ಸಮುದಾಯದ ದೂರಿನ ವಿಚಾರ ಪ್ರಸ್ತಾಪಿಸಿ, ಕೆ.ಆರ್.ಸರ್ಕಲ್‌ನಲ್ಲಿ ಸಿಗ್ನಲ್ ಲೈಟ್ ಅಳವಡಿಸುವ ಅನಿವಾರ್ಯತೆ ಬಗ್ಗೆ ಪ್ರಶ್ನಿಸಿದ್ದರು. ಆ ವೇಳೆ ಕಸ್ತೂರಿರಂಗನ್, ವಾಹನ ದಟ್ಟಣೆ ಹಾಗೂ ಪಾದಚಾರಿಗಳ ಸುರಕ್ಷತೆ ದೃಷ್ಟಿಯಿಂದ ತಾವು ಕೈಗೊಂಡಿರುವ ನಿರ್ಧಾರವನ್ನು ಸಮರ್ಥಿಸಿಕೊಂಡು, ಆ ಬಗ್ಗೆ ಮುಖ್ಯಮಂತ್ರಿಗಳಿಗೆ ಮನವರಿಕೆ ಮಾಡಿಕೊಟ್ಟಿದ್ದರು.

ಮುಖ್ಯಮಂತ್ರಿಗಳಿಗೆ ದೂರು ನೀಡಿದರೂ ತಮ್ಮ ಬೇಡಿಕೆ ಈಡೇರದೆ ಇದ್ದಾಗ ವರ್ತಕ ಸಮುದಾಯ ಹೈಕೋರ್ಟ್ ಮೆಟ್ಟಿಲೇರಿತು. ಆಗ ಐತಿಹಾಸಿಕ ಕೆ.ಆರ್.ಸರ್ಕಲ್‌ನಲ್ಲಿ ವಾಹನ ನಿಲುಗಡೆ ನಿಷೇಧ ಹಾಗೂ ಸಿಗ್ನಲ್ ಲೈಟ್ ಅಳವಡಿಕೆ ಅನಿವಾರ್ಯತೆಯನ್ನು ಹೈಕೋರ್ಟ್‌ಗೆ ಮನವರಿಕೆ ಮಾಡಿಕೊಡುವ ನಿಟ್ಟಿನಲ್ಲಿ ಸಮಂಜಸ ವರದಿ ಸಿದ್ಧಪಡಿಸುವಂತೆ ಅಧೀನ ಅಧಿಕಾರಿಗಳಿಗೆ ಕಸ್ತೂರಿ ರಂಗನ್ ತಾಕೀತು ಮಾಡಿದರು. ಹೀಗೆ ಅಧಿಕಾರಿಗಳು ಸಿದ್ಧಪಡಿಸಿದ ವರದಿಯನ್ನು ಮುಂದಿಟ್ಟುಕೊಂಡು ಅಂದಿನ ಅಡ್ವೋಕೇಟ್ ಜನರಲ್ ಸಂತೋಷ್ ಹೆಗ್ಡೆ (ನಿವೃತ್ತ ನ್ಯಾಯಮೂರ್ತಿ ಹಾಗೂ ವಿಶ್ರಾಂತ ಲೋಕಾಯುಕ್ತ) ಅವರು ಸಮರ್ಥ ವಾದ ಮಂಡಿಸಿದ ಪರಿಣಾಮ ಕೆ.ಆರ್.ಸರ್ಕಲ್‌ನಲ್ಲಿ ಸಿಗ್ನಲ್ ಲೈಟ್ ಅಳವಡಿಸುವ ಕಸ್ತೂರಿ ರಂಗನ್ ನಿರ್ಧಾರಕ್ಕೆ ಹೈಕೋರ್ಟ್ ಅಸ್ತು ಎಂದಿತು.

ಪ್ರತಿಭಟನೆ ನಿಷಿದ್ಧ: ಕೆ.ಆರ್.ವೃತ್ತದಲ್ಲಿ ಯಾವುದೇ ಪ್ರತಿಭಟನೆ, ರ‍್ಯಾಲಿಗಳಿಗೆ ನಿರ್ಬಂಧ ವಿಧಿಸಿ, ಕಸ್ತೂರಿರಂಗನ್ ಆದೇಶ ಹೊರಡಿಸಿದ್ದರು. ಆದರೆ ಈ ಆದೇಶವನ್ನು ಉಲ್ಲಂಘಿಸಿದ ಅಧೀನ ಅಧಿಕಾರಿಗಳಿಗೆ ನೋಟೀಸ್ ನೀಡಿದ್ದರು. ಕಸ್ತೂರಿರಂಗನ್ ಅವರ ವರ್ಗಾವಣೆ ನಂತರದಲ್ಲಿ ಮತ್ತೆ ಕೆ.ಆರ್.ವೃತ್ತದಲ್ಲಿ ಪ್ರತಿಭಟನೆ ಆರಂಭವಾದವು.

ರೌಡಿಗಳ ಅಟ್ಟಹಾಸ ಅಂತ್ಯ: 90ರ ದಶಕದಲ್ಲಿ ಬೆಂಗಳೂರಿನಲ್ಲಿ ಅಟ್ಟಹಾಸ ಮೆರೆಯುತ್ತಿದ್ದ ರೌಡಿಗಳ ಅಡ್ಡಗಾಳಿ ಮೈಸೂರಿನಲ್ಲೂ ಬೀಸಲಾರಂಭಿಸಿತ್ತು. ಅದನ್ನು ಪ್ರಾರಂಭದಲ್ಲೇ ಹತ್ತಿಕ್ಕಿ ಮೈಸೂರಿಗರಿಗೆ ನೆಮ್ಮದಿ ಜೀವನಕ್ಕೆ ಸುರಕ್ಷಿತ ನೆಲೆ ಕಲ್ಪಿಸಬೇಕೆಂದು ಕಸ್ತೂರಿರಂಗನ್ ನಿರ್ಧರಿಸಿದರು. ಆ ವೇಳೆ ನಡೆದಂತಹ ಒಂದು ಘಟನೆ ರೌಡಿ ಪ್ರತಿಬಂಧಕ ದಳ ರಚನೆಗೆ ನಾಂದಿ ಹಾಡಿತು. ಅಂದು ನಾರದ ನೂರಡಿ ರಸ್ತೆಯ ಚಿತ್ರಮಂದಿರವೊಂದರ ಬಳಿ ಕರ್ತವ್ಯ ನಿರತ ಇಬ್ಬರು ಪೊಲೀಸ್ ಪೇದೆಗಳ ಮೇಲೆ ಪುಂಡರು ಹಲ್ಲೆ ನಡೆಸಿ, ಗಾಯಗೊಳಿಸಿದ್ದರು. ಇದನ್ನು ಗಂಭೀರವಾಗಿ ಪರಿಗಣಿಸಿದ ಕಸ್ತೂರಿರಂಗನ್ ಅವರು, ಪುಂಡರು ಹಾಗೂ ಪುಡಿ ರೌಡಿಗಳ ಹುಟ್ಟಡಗಿಸಲು ನಿರ್ಧರಿಸಿ **'ರೌಡಿ ಪ್ರತಿಬಂಧಕ ದಳ'** ರಚಿಸಿದರು. ಕೆ.ಎಸ್. ತಮ್ಮಯ್ಯ ನೇತೃತ್ವದಲ್ಲಿ ಪುಟ್ಟಸ್ವಾಮಿಗೌಡ, ಟಿ.ಕೆ. ಧರ್ಮೇಶ್ ಇನ್ನಿತರೆ ದಕ್ಷ ಸಿಬ್ಬಂದಿಯನ್ನು ದಳದಲ್ಲಿ ನಿಯೋಜಿಸಿದರು. ಈ ತಂಡ ಕೈಗೊಂಡಂತಹ ಕಾರ್ಯಾಚರಣೆ ಕಸ್ತೂರಿರಂಗನ್ ಮೈಸೂರಿನಿಂದ ನಿರ್ಗಮಿಸುವ ವೇಳೆಗೆ ರೌಡಿಗಳ ಅಟ್ಟಹಾಸವನ್ನು ಬಹುತೇಕ ಹತ್ತಿಕ್ಕುವಲ್ಲಿ ಯಶಸ್ವಿಯಾಯಿತು.

ಇಂದು ಗೌರವ ಸಮರ್ಪಣೆ

1993–94ನೇ ಸಾಲಿನಲ್ಲಿ ಕಾನ್‌ಸ್ಟೇಬಲ್‌ಗಳಾಗಿ ಆಯ್ಕೆಯಾಗಿ ಕಸ್ತೂರಿರಂಗನ್ ಅವರ ಮಾರ್ಗದರ್ಶನದಲ್ಲಿ ಕೆಲಸ ಮಾಡಿದ ಪೊಲೀಸ್ ಸಿಬ್ಬಂದಿ ಇಂದು (ಮೇ 16) ಬೆಳಗ್ಗೆ 11 ಗಂಟೆಗೆ ಪೊಲೀಸ್ ಭವನದಲ್ಲಿ ಕಸ್ತೂರಿರಂಗನ್ ಅವರಿಗೆ ಗೌರವ ಸಮರ್ಪಣೆ ಕಾರ್ಯಕ್ರಮ ಹಮ್ಮಿಕೊಂಡಿದ್ದಾರೆ. ಕಸ್ತೂರಿರಂಗನ್ ಅವರು ನಗರ ಪೊಲೀಸ್ ಆಯುಕ್ತರಾಗಿದ್ದ ವೇಳೆ ಡಿಸಿಪಿಗಳಾಗಿದ್ದ ಉಲ್ಫತ್ ಹುಸೇನ್ ಮತ್ತು ಕೇಶವಯ್ಯ ಅವರಿಗೂ ಗೌರವ ಸಲ್ಲಿಸಲಾಗುತ್ತಿದೆ. ಕೇಶವಯ್ಯ ಅವರು ದಿವಂಗತರಾಗಿರುವ ಕಾರಣ ಅವರ ಪರವಾಗಿ ಪುತ್ರ ಡಾ. ಸತೀಶ್ ಅವರನ್ನು ಗೌರವಿಸಲಾಗುತ್ತಿದೆ.

ಕ್ರೈಂ ಮೀಟಿಂಗ್: ಮೈಸೂರು ನಗರದಲ್ಲಿ ಅಪರಾಧಗಳನ್ನು ಹತ್ತಿಕ್ಕಲು ವಾರಕ್ಕೊಮ್ಮೆ ಎಲ್ಲಾ ಠಾಣೆಗಳ ಇನ್‌ಸ್ಪೆಕ್ಟರ್‌ಗಳನ್ನು ಒಳಗೊಂಡು ಕ್ರೈಂ ಮೀಟಿಂಗ್ ಆರಂಭಿಸಿದ್ದೇ ಕಸ್ತೂರಿರಂಗನ್. ಸಾಮಾನ್ಯವಾಗಿ ಪ್ರತಿ ಮಂಗಳವಾರ ಕ್ರೈಂ ಮೀಟಿಂಗ್ ನಡೆಸಲಾಗುತ್ತಿತ್ತು. ಈ ವೇಳೆ ಯಾರೇ ತಮ್ಮನ್ನು ಭೇಟಿಯಾಗಲು ಬಂದರೂ ಅದಕ್ಕೆ ಅವಕಾಶ ನೀಡುತ್ತಿರಲಿಲ್ಲ. ವಾರದ ಅಪರಾಧ ಪ್ರಕರಣಗಳ ಪರಾಮರ್ಶೆಯೊಂದಿಗೆ ಆರೋಪಿಗಳ ಪತ್ತೆಗೆ ಗಡುವು ನೀಡುತ್ತಿದ್ದರು.

ದಕ್ಷತೆ ಮತ್ತು ಪ್ರಾಮಾಣಿಕತೆ ಎಂದಾಗ ಈಗಲೂ ಕಸ್ತೂರಿರಂಗನ್ ಹೆಸರು ಥಟ್ಟನೆ ಕೇಳಿಬರುತ್ತದೆ. ಹಾಗೆಂದ ಮಾತ್ರಕ್ಕೆ ಬೇರೆ ಅಧಿಕಾರಿಗಳ ಪ್ರಾಮಾಣಿಕತೆಯನ್ನು ಪ್ರಶ್ನಿಸುವುದು ಅಥವಾ ಅಲ್ಲಗಳೆಯಲಾಗದು. ಕಸ್ತೂರಿರಂಗನ್ ಅವರು ತಮ್ಮ ಅಧೀನ ಅಧಿಕಾರಿಗಳ ಮೇಲೆ ಸಂಪೂರ್ಣ ನಿಯಂತ್ರಣ ಸಾಧಿಸಿದ್ದರು. ಅಧಿಕಾರಿಗಳು ಹಾಗೂ ಸಿಬ್ಬಂದಿ ಸುಳ್ಳು ಹೇಳುವುದನ್ನು ಸಹಿಸುತ್ತಿರಲಿಲ್ಲ. ಒಮ್ಮೆ ಪೊಲೀಸ್ ಠಾಣೆಯೊಂದರ ಅಧಿಕಾರಿಯೊಬ್ಬರನ್ನು ವೈರ್‌ಲೆಸ್ ಮೂಲಕ ಸಂಪರ್ಕಿಸಿ ಅವರ ಲೊಕೇಷನ್ ಕೇಳಿದ್ದಾರೆ. ಆಗ ಆ ಅಧಿಕಾರಿ ಠಾಣೆಯಲ್ಲೇ ಇರುವುದಾಗಿ ತಿಳಿಸಿದ್ದಾರೆ. ಸ್ವಲ್ಪ ಸಮಯದ ನಂತರ ಮತ್ತೆ ಅದೇ ಅಧಿಕಾರಿಗೆ ಕರೆ ಮಾಡಿ ಲೊಕೇಷನ್ ಕೇಳಿದ್ದಾರೆ. ಆಗಲೂ ಆ ಅಧಿಕಾರಿ ಹಿಂದೆ ತಾನು ನೀಡಿದ್ದ ಉತ್ತರವನ್ನೇ ನೀಡಿದ್ದಾರೆ. ಅನುಮಾನಗೊಂಡು ಕಸ್ತೂರಿರಂಗನ್ ಅವರು ತಮ್ಮ ಕಚೇರಿಯಿಂದ ನೇರವಾಗಿ ಆ ಠಾಣೆಗೆ ದಾವಿಸಿ, ಅಲ್ಲಿಂದಲೇ ಅಧಿಕಾರಿಯನ್ನು ಮತ್ತೆ ವೈರ್‌ಲೆಸ್ ಮೂಲಕ ಸಂಪರ್ಕಿಸಿ ಲೊಕೇಷನ್ ಕೇಳಿದ್ದಾರೆ. ಆಗಲೂ ಆ ಅಧಿಕಾರಿ ಠಾಣೆಯಲ್ಲೇ ಇರುವುದಾಗಿ ಹೇಳಿದ್ದಾರೆ. 'ನಾನು ಈಗ ನಿಮ್ಮ ಠಾಣೆಯಲ್ಲೇ ಇದ್ದೇನೆ' ಎಂದು ಕಸ್ತೂರಿ ರಂಗನ್ ಹೇಳುತ್ತಿದ್ದಂತೆ ಬೆಚ್ಚಿಬಿದ್ದ ಆ ಅಧಿಕಾರಿ ಕೂಡಲೇ ಠಾಣೆಗೆ ದೌಡಾಯಿಸಿ, ಸೆಲ್ಯೂಟ್ ಮಾಡಿ ತಲೆತಗ್ಗಿಸಿ ನಿಂತರು. ಆ ಅಧಿಕಾರಿಯನ್ನು ಉದ್ದೇಶಿಸಿ ತಮಗೆ ಸುಳ್ಳು ಹೇಳಬೇಕಾದ ಅನಿವಾರ್ಯತೆಯಾದರೂ ಏನಿತ್ತು? ಎಂದು ಪ್ರಶ್ನಿಸಿ, ಮತ್ತೊಮ್ಮೆ ಹೀಗೆ ನಡೆದುಕೊಂಡಲ್ಲಿ ಸಹಿಸುವುದಿಲ್ಲ ಎಂಬ ಎಚ್ಚರಿಕೆ ಸಂದೇಶ ರವಾನಿಸಿದ್ದರು ಎಂಬುದನ್ನು ನಿವೃತ್ತ ಪೊಲೀಸ್ ಅಧಿಕಾರಿಯೊಬ್ಬರು 'ಮೈಸೂರು ಮಿತ್ರ'ನಲ್ಲಿ ಹಂಚಿಕೊಂಡಿದ್ದಾರೆ.

> ಪ್ರಾಮಾಣಿಕತೆ, ದಕ್ಷತೆಗೆ ಕಸ್ತೂರಿ ರಂಗನ್ ಅವರಿಗೆ ಕಸ್ತೂರಿರಂಗನ್ ಅವರೇ ಸಾಟಿ. ಈ ಹಿಂದೆ ಮೈಸೂರು ನಗರದಲ್ಲಿ ಪೊಲೀಸ್ ಆಯುಕ್ತರಾಗಿ ಯಾರ‍್ಯಾರು ಸೇವೆ ಸಲ್ಲಿಸಿದ್ದಾರೆ ಎಂಬ ಪ್ರಶ್ನೆ ಬಂದಾಗ ಥಟ್ಟನೆ ಜ್ಞಾಪಕಕ್ಕೆ ಬರುವುದು ಕಸ್ತೂರಿರಂಗನ್ ಅವರ ಹೆಸರು.
> –ಶಂಕರೇಗೌಡ, ನಿವೃತ್ತ ಪೊಲೀಸ್ ವರಿಷ್ಠಾಧಿಕಾರಿ

> ಕಸ್ತೂರಿರಂಗನ್ ಅವರು ಸಮಾಜ ವಿರೋಧಿ ಶಕ್ತಿಗಳನ್ನು ಯಶಸ್ವಿಯಾಗಿ ಹತ್ತಿಕ್ಕಿ, ಸಮಾಜದಲ್ಲಿ ಶಾಂತಿ ಮತ್ತು ಸುವ್ಯವಸ್ಥೆ ನೆಲೆಗೊಳಿಸುವಂತಹ ಸಮರ್ಥ ಅಧಿಕಾರಿಯಾಗಿದ್ದರು. ಈ ನೆಲದ ಕಾನೂನನ್ನು ಎತ್ತಿ ಹಿಡಿಯಲು ಅವರಂತಹ ಅಧಿಕಾರಿಗಳು ನಮಗೆ ಸದಾ ಅವಶ್ಯವಿದ್ದಾರೆ.
> –ಅಡಗೂರು ಹೆಚ್.ವಿಶ್ವನಾಥ್, ವಿಧಾನಪರಿಷತ್ ಸದಸ್ಯರು

ಫಿಯೆಟ್ ಕಾರ್‌ನಲ್ಲಿ ವೈರ್‌ಲೆಸ್ ಅಳವಡಿಕೆ: ಕಸ್ತೂರಿ ರಂಗನ್ ಅವರ ಕರ್ತವ್ಯ ನಿಷ್ಠೆ, ಬದ್ಧತೆಗೆ ಮತ್ತೊಂದು ನಿದರ್ಶನ ಇಲ್ಲಿ ಉಲ್ಲೇಖಾರ್ಹ. ಅವರು, ಕರ್ತವ್ಯದ ಮೇಲಿದ್ದಾಗ ಮಾತ್ರವಲ್ಲ ರಜೆಯಲ್ಲಿದ್ದಾಗಲೂ ಕರ್ತವ್ಯ ಪ್ರಜ್ಞೆ ಮೆರೆಯುತ್ತಿದ್ದರು. ಪರಸ್ಥಳಕ್ಕೆ ಹೋಗಬೇಕಾಗಿ ಬಂದಾಗಲೂ ತಮ್ಮ ಬಳಿ ಇದ್ದ ಫಿಯೆಟ್ ಕಾರಿಗೆ ವೈರ್‌ಲೆಸ್ ವ್ಯವಸ್ಥೆ ಮಾಡಿಕೊಂಡಿದ್ದರಿಂದ ತಾವು ಎಲ್ಲೇ ಇರಲಿ ಕಾನೂನು ಸುವ್ಯವಸ್ಥೆ ಬಗ್ಗೆ ಮಾಹಿತಿ ಪಡೆದು, ಅಗತ್ಯ ಮಾರ್ಗ ದರ್ಶನ, ಸಲಹೆ–ಸೂಚನೆ ನೀಡುತ್ತಿದ್ದರು. ಹಾಗಾಗಿಯೇ ಅವರ ಅಧಿಕಾರಾವಧಿಯಲ್ಲಿ ಮೈಸೂರಲ್ಲಿ ಕಾನೂನು–ಸುವ್ಯವಸ್ಥೆ ಪಾಲನೆ ಅಚ್ಚುಕಟ್ಟಾಗಿತ್ತು ಎಂಬುದನ್ನು ಪೊಲೀಸ್ ಅಧಿಕಾರಿಗಳೇ ಒಪ್ಪಿಕೊಳ್ಳುತ್ತಾರೆ.

ವರ್ಷದಲ್ಲಿ 30 ಲಕ್ಷ ದಂಡ ಸಂಗ್ರಹ: ಮೈಸೂರು ನಗರ ಪೊಲೀಸ್ ಆಯುಕ್ತ ಹುದ್ದೆಯಿಂದ ಅವರನ್ನು ಕೆಇಬಿ ವಿಜಿಲೆನ್ಸ್‌ಗೆ ವರ್ಗಾವಣೆ ಮಾಡಲಾಯಿತು. ಅಲ್ಲಿಯೂ ದಕ್ಷತೆ ಮೆರೆದಿದ್ದಾರೆ. ಆಗ ವ್ಯಾಪಕವಾಗಿದ್ದ ವಿದ್ಯುತ್ ಕಳವಿಗೆ ಕಡಿವಾಣ ಹಾಕಿದ್ದರು. ವಿದ್ಯುತ್ ಮೀಟರ್‌ಗಳನ್ನು ಹಾಕಲು ಅವಕಾಶವನ್ನೇ ನೀಡುತ್ತಿರಲಿಲ್ಲ. ಅಂತಹವರ ಬೆನ್ನಿಗೆ ಕೆಲ ಪ್ರಬಲ ಸಂಘಟನೆಗಳು ನಿಂತಿದ್ದವು. ಮೀಟರ್ ಅಳವಡಿಸಲು ಹೋದ ಅಧಿಕಾರಿಗಳನ್ನು ಅಟ್ಟಾಡಿಸುವ ಪರಿಸ್ಥಿತಿ ಇತ್ತು. ಅಂತಹ ಸಂದರ್ಭದಲ್ಲೂ ಕಸ್ತೂರಿರಂಗನ್ ಸ್ಥಳೀಯ ಪೊಲೀಸ್ ಅಧಿಕಾರಿಗಳ ಸಹಕಾರ ಪಡೆದು ವಿದ್ಯುತ್ ಮೀಟರ್‌ಗಳನ್ನು ಕಡ್ಡಾಯವಾಗಿ ಅಳವಡಿಸುವ ಕಾರ್ಯವನ್ನು ಮಾಡಿದರು. ಆ ಮೂಲಕ ಒಂದೇ ವರ್ಷದಲ್ಲಿ 30 ಲಕ್ಷ ರೂ. ದಂಡ ಸಂಗ್ರಹಿಸಲಾಗಿತ್ತು.

ಕಸ್ತೂರಿರಂಗನ್, ಬೆಂಗಳೂರಿನ ಚಿಕ್ಕಪೇಟೆ ಎಸಿಪಿಯಾಗಿ ತಮ್ಮ ಪೊಲೀಸ್ ಸೇವೆ ಆರಂಭಿಸಿದರು. ಅಲ್ಲಿ ವ್ಯಾಪಕವಾಗಿದ್ದ ವೇಶ್ಯಾವಾಟಿಕೆಗೆ ಕಡಿವಾಣ ಹಾಕಿದ್ದರು. ನಂತರ ಬಾಲ್ಕಿ ಡಿವೈಎಸ್ಪಿಯಾಗಿ, ಮಂಗಳೂರು ಎಸ್ಪಿಯಾಗಿಯೂ ಸಮರ್ಥವಾಗಿ ಕಾರ್ಯ ನಿರ್ವಹಿಸಿದ್ದರು.

ಹಾಸನ ಜಿಲ್ಲೆಯ ಅರಕಲಗೂಡು ತಾಲೂಕು ಹುಲಿಕಲ್, ಕಸ್ತೂರಿರಂಗನ್ ಅವರ ಸ್ವಗ್ರಾಮ. ಇಲ್ಲಿ ಬಹಳ ಹಳೆಯದಾದ ಲಕ್ಷ್ಮಿನರಸಿಂಹಸ್ವಾಮಿ ದೇವಸ್ಥಾನವಿದೆ. ಅದರ ಜೀರ್ಣೋದ್ಧಾರ ಮಾಡಿ, ನಿರ್ವಹಣೆ ಹೊಣೆಯನ್ನು ಅವರೇ ಹೊತ್ತಿದ್ದಾರೆ. ನಿವೃತ್ತಿಯ ನಂತರವೂ ಸಮಾಜ ಸೇವೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವ ಕಸ್ತೂರಿರಂಗನ್, ರೈತರ ಅನುಕೂಲಕ್ಕಾಗಿ ಸ್ವಗ್ರಾಮದಲ್ಲಿ ತೋಟಗಾರಿಕಾ ಉತ್ಪನ್ನಗಳ ಸಂಸ್ಕರಣಾ ಸಹಕಾರ ಸಂಘವನ್ನು ಸ್ಥಾಪಿಸಿದ್ದಾರೆ. ಅದರ ಅಧ್ಯಕ್ಷರಾಗಿಯೂ ಮಾದರಿ ಕಾರ್ಯನಿರ್ವಹಿಸುತ್ತಿದ್ದಾರೆ. ಅಲ್ಲದೆ ಗ್ರಾಮದಲ್ಲಿ ಮತ್ತೊಂದು ಕೃಷಿಪತ್ತಿನ ಸಹಕಾರ ಸಂಘ ಹಾಗೂ ಶಿವಮೊಗ್ಗದಲ್ಲಿ ಅಡಿಕೆ ಮಾರಾಟಕ್ಕಾಗಿ ಸಹಕಾರ ಸಂಘವನ್ನು ಸ್ಥಾಪಿಸಿ, ರೈತರಿಗೆ ಶ್ರೇಯೋಭಿವೃದ್ಧಿಗಾಗಿ ಶ್ರಮಿಸುತ್ತಿದ್ದಾರೆ.

1983ರಲ್ಲಿ ಇವರ ಅತ್ಯುತ್ತಮ ಸೇವಾ ಸಾಧನೆಗಾಗಿ ಮುಖ್ಯಮಂತ್ರಿಗಳ ಚಿನ್ನದ ಪದಕ, 1988ರಲ್ಲಿ ರಾಷ್ಟ್ರಪತಿಗಳ ಪೊಲೀಸ್ ಪದಕ ಹಾಗೂ 1999ರಲ್ಲಿ ರಾಷ್ಟ್ರಪತಿಗಳ ಪೊಲೀಸ್ ಪದಕ ಪಡೆದಿದ್ದಾರೆ. ಇವರ ಸೇವಾ ನಿವೃತ್ತಿ ಬಳಿಕದ ಸಮಾಜ ಸೇವೆಯನ್ನು ಪರಿಗಣಿಸಿ ಕರ್ನಾಟಕ ಸರ್ಕಾರವು 2020–21ನೇ ಸಾಲಿನ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ನೀಡಿ, ಗೌರವಿಸಿದೆ.

ಬಿಎಸ್‌ಎನ್‌ಎಲ್‌ನ ಟೆಲಿಕಾಂ ಉದ್ಯೋಗಿಗಳ ರಾಷ್ಟ್ರೀಯ ಒಕ್ಕೂಟದ ಕರ್ನಾಟಕ ವೃತ್ತದ ಸಮ್ಮೇಳನ

ಖಾಸಗಿ ಟೆಲಿಕಾಂ ಕಂಪನಿಗಳಂತೆ ಬಿಎಸ್‌ಎನ್‌ಎಲ್‌ಗೂ ಮುಕ್ತ ಅವಕಾಶ ಕಲ್ಪಿಸಿ

ಒಕ್ಕೂಟದ ಅಖಿಲ ಭಾರತ ಪ್ರಧಾನ ಕಾರ್ಯದರ್ಶಿ ಚಂದೇಶ್ವರ್ ಸಿಂಗ್



ಮೈಸೂರಿನ ಟಿಕೆ ಬಡಾವಣೆಯಲ್ಲಿರುವ ಪ್ರಾದೇಶಿಕ ಟೆಲಿಕಾಂ ತರಬೇತಿ ಕೇಂದ್ರದ ಸಭಾಂಗಣದಲ್ಲಿ ಭಾನುವಾರ ಬಿಎಸ್‌ಎನ್‌ಎಲ್‌ನ ಟೆಲಿಕಾಂ ಉದ್ಯೋಗಿಗಳ ರಾಷ್ಟ್ರೀಯ ಒಕ್ಕೂಟದ ಕರ್ನಾಟಕ ವೃತ್ತದ 4ನೇ ಸಮ್ಮೇಳನದಲ್ಲಿ ಪಾಲ್ಗೊಂಡಿದ್ದ ಗಣ್ಯರನ್ನು ಚಿತ್ರದಲ್ಲಿ ಕಾಣಬಹುದು.

ಮೈಸೂರು, ಮೇ 15(ಪಿಎಂ)– ಸರ್ಕಾರ ತನ್ನದೇ ಸ್ವಾಮ್ಯದ ಬಿಎಸ್‌ಎನ್‌ಎಲ್ ವಿಚಾರದಲ್ಲಿ ಅನುಸರಿಸುತ್ತಿರುವ ತಾರತಮ್ಯ ನೀತಿ ಕೈಬಿಡಬೇಕು. ಖಾಸಗಿ ಟೆಲಿಕಾಂ ಕಂಪನಿಗಳಿಗೆ ನೀಡುವ ಮುಕ್ತ ಅವಕಾಶಗಳನ್ನು ಬಿಎಸ್‌ಎನ್‌ಎಲ್‌ಗೂ ಕಲ್ಪಿಸಬೇಕು ಎಂದು ಬಿಎಸ್‌ಎನ್‌ಎಲ್‌ನ ಟೆಲಿಕಾಂ ಉದ್ಯೋಗಿಗಳ ರಾಷ್ಟ್ರೀಯ ಒಕ್ಕೂಟದ ಅಖಿಲ ಭಾರತ ಪ್ರಧಾನ ಕಾರ್ಯದರ್ಶಿ ಚಂದೇಶ್ವರ್ ಸಿಂಗ್ ಹೇಳಿದರು.

ಮೈಸೂರಿನ ಟಿಕೆ ಬಡಾವಣೆಯಲ್ಲಿರುವ ಪ್ರಾದೇಶಿಕ ಟೆಲಿಕಾಂ ತರಬೇತಿ ಕೇಂದ್ರದ ಸಭಾಂಗಣದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಒಕ್ಕೂಟದ ಕರ್ನಾಟಕ ವೃತ್ತದ 4ನೇ ಸಮ್ಮೇಳನದಲ್ಲಿ ಅವರು ಮಾತನಾಡಿದರು. ಖಾಸಗಿ ಟೆಲಿಕಾಂ ಕಂಪನಿಗಳಿಗೆ ದೊರೆಯುತ್ತಿರುವ ಸರ್ಕಾರದ ಪ್ರೋತ್ಸಾಹ ಬಿಎಸ್‌ಎನ್‌ಎಲ್‌ಗೆ ಮಾತ್ರ ದೊರೆಯುತ್ತಿಲ್ಲ. ವಿಶೇಷವಾಗಿ 5ಜಿ ವಿಷಯಕ್ಕೆ ಸಂಬಂಧಿಸಿದಂತೆ ದೊಡ್ಡಮಟ್ಟದ ತಾರತಮ್ಯ ಇದೆ. ಖಾಸಗಿ ಕಂಪನಿಗಳಿಗೆ ನೀಡಿರುವ ವಿನಾಯಿತಿ ಹಾಗೂ ಹೆಚ್ಚಿನ ನೆರವನ್ನು ಬಿಎಸ್‌ಎನ್‌ಎಲ್‌ಗೆ ನೀಡಿದರೆ ಗ್ರಾಹಕರಿಗೆ ಉತ್ತಮ ಸೇವೆ ನೀಡಬಹುದು ಎಂದು ಪ್ರತಿಪಾದಿಸಿದರು.

'4ಜಿ' ಸಂಪರ್ಕದ ಸಂದರ್ಭದಲ್ಲಿ ಸ್ವದೇಶಿ ವಸ್ತುಗಳ ಹೊರತು ಅನ್ಯದೇಶಿ ವಸ್ತುಗಳನ್ನು ಬಳಸುವಂತಿಲ್ಲ ಎಂದು ಕರೆದಿದ್ದ ಟೆಂಡರ್‌ನ್ನೇ ಸರ್ಕಾರ ರದ್ದು ಮಾಡಿತು. ಖಾಸಗಿ ಕಂಪನಿಗಳು ಚೀನಾದ ಉಪಕರಣಗಳನ್ನು ಬಳಸಲು ಅವಕಾಶ ನೀಡಿ, ನಮಗೆ ನೀಡದೇ ಇದ್ದರೆ ಉತ್ತಮ ಸೇವೆ ಒದಗಿಸಲು ಸಾಧ್ಯವೇ? ಎಂದು ಪ್ರಶ್ನಿಸಿದರು.


ಬಿಎಸ್‌ಎನ್‌ಎಲ್‌ನ ಕರ್ನಾಟಕ ವೃತ್ತದ ಮಹಾಪ್ರಬಂಧಕ ಅಶೋಕ್‌ಕುಮಾರ್ ಅಗರ್‌ವಾಲ್ ಮಾತನಾಡಿ, ಡಿಸೆಂಬರ್ ವೇಳೆಗೆ ಬಿಎಸ್‌ಎನ್‌ಎಲ್‌ನಿಂದ '5ಜಿ' ಸೇವೆ ಪ್ರಾರಂಭವಾಗಲಿದೆ. ಅಧಿಕಾರಿಗಳು ಹಾಗೂ ನೌಕರರು ಒಟ್ಟಾಗಿ ಈ ಸೇವೆಯನ್ನು ಉತ್ತಮ ರೀತಿಯಲ್ಲಿ ನೀಡಲು ಬದ್ಧರಾಗಿದ್ದೇವೆ ಎಂದು ತಿಳಿಸಿದರು.

'5ಜಿ' ಸೇವೆ ಆರಂಭಿಸಲು ಈಗಾಗಲೇ ಸರ್ಕಾರ ಅಗತ್ಯ ಸಿದ್ಧತೆ ಆರಂಭಿಸಿದೆ. ಬಿಎಸ್‌ಎನ್‌ಎಲ್‌ನ ಹಣಕಾಸಿನ ಪರಿಸ್ಥಿತಿ ಇನ್ನೂ ಉತ್ತಮಗೊಳ್ಳಲು ಕೇಂದ್ರ ಸರ್ಕಾರ ಹಲವು ಯೋಜನೆಗಳನ್ನು ರೂಪಿಸಿದೆ. ಅಧಿಕಾರಿಗಳು ಮತ್ತು ನೌಕರರು ಒಟ್ಟಾಗಿ ಕೆಲಸ ಮಾಡುವ ಮೂಲಕ ಗ್ರಾಹಕರಿಗೆ ಅತ್ಯುತ್ತಮ ಸೇವೆ ನೀಡಬೇಕಿದೆ. ಅಲ್ಲದೆ, 'ಮೇಕ್ ಇನ್ ಇಂಡಿಯಾ' ಯೋಜನೆಯಡಿ ದೇಶಿಯ ಉಪಕರಣಗಳನ್ನು ಖರೀದಿಸಿ ಗ್ರಾಹಕರಿಗೆ ಪೈಪೋಟಿ ದರದಲ್ಲಿ ಉತ್ತಮ ಸೇವೆ ನೀಡುವಂತಹ ಕ್ರಾಂತಿಕಾರಕ ಹೆಜ್ಜೆ ಇಡಲಾಗುತ್ತಿದೆ ಎಂದು ಹೇಳಿದರು.

ಬಿಎಸ್‌ಎನ್‌ಎಲ್ ಕರ್ನಾಟಕ ವೃತ್ತದ ಹಣಕಾಸು ಪ್ರಧಾನ ವ್ಯವಸ್ಥಾಪಕಿ ಮರೀನಾ ಜಾರ್ಜ್, ಬಿಎಸ್‌ಎನ್‌ಎಲ್‌ನ ಟೆಲಿಕಾಂ ಉದ್ಯೋಗಿಗಳ ರಾಷ್ಟ್ರೀಯ ಒಕ್ಕೂಟದ ಅಖಿಲ ಭಾರತ ಅಧ್ಯಕ್ಷ ಇಸ್ಲಾಂ ಅಹಮ್ಮದ್, ಕರ್ನಾಟಕ ವೃತ್ತದ ಕಾರ್ಯದರ್ಶಿ ಕೆ.ಎಸ್.ಶೇಷಾದ್ರಿ, ಜಿಲ್ಲಾ ಕಾರ್ಯದರ್ಶಿ ನಾಗೇಂದ್ರ, ಅಖಿಲ ಭಾರತ ಬಿಎಸ್‌ಎನ್‌ಎಲ್ ಅಧಿಕಾರಿಗಳ ಸಂಘದ ರಾಜ್ಯ ಕಾರ್ಯದರ್ಶಿ ಆರ್.ಗಣೇಶ್ ಮತ್ತಿತರರು ಹಾಜರಿದ್ದರು.

ರಘು ಕೌಟಿಲ್ಯ ಅವರಿಗೆ ವಿಧಾನಪರಿಷತ್‌ನಲ್ಲಿ ಅವಕಾಶ ಕಲ್ಪಿಸಲು ಒತ್ತಾಯ

ಮೈಸೂರು, ಮೇ 15– ಎರಡು ಬಾರಿ ಗೆಲುವಿನ ಅವಕಾಶದಿಂದ ವಂಚಿತರಾದ ಹಿಂದುಳಿದ ವರ್ಗಗಳ ನಾಯಕರು, ಅತೀ ಹಿಂದುಳಿದ ಮಡಿವಾಳ ಸಮುದಾಯದ ರಘು ಕೌಟಿಲ್ಯ ಅವರಿಗೆ ಜೂನ್ 30ರಂದು ನಡೆಯಲಿರುವ ವಿಧಾನ ಪರಿಷತ್ ಚುನಾವಣೆಯಲ್ಲಿ ಅವಕಾಶ ಕಲ್ಪಿಸ ಬೇಕೆಂದು ಮಡಿವಾಳ ಸಮುದಾಯ ಹಾಗೂ ಕಾಯಕ ಸಮುದಾಯಗಳ ಮುಖಂಡರು ಆಗ್ರಹಿಸಿದ್ದಾರೆ.



ರಘು ಕೌಟಿಲ್ಯ

ರಾಜ್ಯದಲ್ಲಿ ಸುಮಾರು ಹತ್ತು ಲಕ್ಷ ಜನಸಂಖ್ಯೆ ಇರುವ ಮಡಿವಾಳ ಸಮಾಜವು ಸ್ವಾತಂತ್ರ್ಯ ನಂತರದಿಂದಲೂ ರಾಜಕೀಯ ಸ್ಥಾನಮಾನಗಳಿಂದ ವಂಚಿತವಾಗಿದೆ. ಕಳೆದ ಬಿಜೆಪಿ ಆಡಳಿತಾವಧಿಯಲ್ಲಿ ಅಂದಿನ ಮುಖ್ಯಮಂತ್ರಿ ಯಡಿಯೂರಪ್ಪ ಹಾಗೂ ಬಿಜೆಪಿ ವರಿಷ್ಠರ ಆಶೀರ್ವಾದದಿಂದ ಸಮಾಜದ ಎನ್.ಶಂಕರಪ್ಪ ಅವರಿಗೆ ಪರಿಷತ್ ಪ್ರವೇಶಿಸಲು ಅವಕಾಶ ನೀಡಲಾಗಿತ್ತು. ಆದರೆ ನಂತರ ಮುಖ್ಯಮಂತ್ರಿಯಾದ ಡಿ.ವಿ.ಸದಾನಂದಗೌಡರು ಸದನ ಪ್ರವೇಶಿಸಲು ಅವಕಾಶ ಕಲ್ಪಿಸುವ ಸಲುವಾಗಿ ಶಂಕರಪ್ಪ ಅವರಿಂದ ರಾಜೀನಾಮೆ ಪಡೆಯಲಾಯಿತು ಎಂದಿರುವ ಮುಖಂಡರು, ಸಾಮಾಜಿಕ ನ್ಯಾಯದಿಂದ ನಿರಂತರ ವಂಚನೆಗೊಳಗಾಗುತ್ತಿರುವ ಸಮಾಜಕ್ಕೆ ಗಟ್ಟಿಯಾದ ನಾಯಕತ್ವವನ್ನು ನೀಡಬಲ್ಲ ದಕ್ಷತೆಯಿರುವ ರಘು ಕೌಟಿಲ್ಯ ಅವರಿಗೆ ಮೇಲ್ಮನೆ ಪ್ರವೇಶಕ್ಕೆ ಅವಕಾಶ ಕಲ್ಪಿಸಬೇಕೆಂದು ಒತ್ತಾಯಿಸಿದ್ದಾರೆ.



ಮೈಸೂರು ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ ಅವರ ಹುಟ್ಟುಹಬ್ಬ ಆಚರಣೆ ವೇಳೆ ಸಂಘದ ಪದಾಧಿಕಾರಿಗಳು, ಹಿತೈಷಿಗಳು, ಸ್ನೇಹಿತರು ಶುಭಾಶಯ ಕೋರಿದರು. ಈ ವೇಳೆ 56 ಕೆಜಿ ಕೇಕ್ ಕತ್ತರಿಸಿ ಸಂಭ್ರಮಿಸಲಾಯಿತು. ಕಲ್ಯಾಣ ಮಂಟಪ ಮಾಲೀಕರ ಸಂಘದ ಅಧ್ಯಕ್ಷ ಕೆ.ಆರ್.ಸತ್ಯನಾರಾಯಣ, ಟ್ರಾವೆಲ್ಸ್ ಅಸೋಸಿಯೇಷನ್ ಅಧ್ಯಕ್ಷ ಸಿ.ಎ.ಜಯಕುಮಾರ್, ಚೇಂಬರ್ ಆಫ್ ಕಾಮರ್ಸ್ ಅಧ್ಯಕ್ಷ ಕೆ.ಬಿ.ಲಿಂಗರಾಜು, ಖಜಾಂಚಿ ಅಶೋಕ್, ಮಹಾಲಕ್ಷ್ಮಿ ಸ್ವೀಟ್ಸ್ ಮಾಲೀಕ ಶಿವಕುಮಾರ್, ಸ್ವೀಟ್ ಮಹೇಶ್, ಕೋರಮ್ ಗ್ರೂಪ್ಸ್‌ನ ಗೋಪಿನಾಥ್ ಗುಪ್ತಾ, ವಿಜಯನಗರದ ನರಸೇಗೌಡ ಮತ್ತಿತರರಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ

ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ಬೇಕಾಗಿದ್ದಾರೆ
ಕೋಳಿ ಫಾರಂನಲ್ಲಿ ಫಾರಂ / ಹ್ಯಾಚರಿ ಕೆಲಸ. ಉಚಿತ ವಸತಿ / ESI / PF ಸೌಲಭ್ಯವಿದೆ. ಪಿಯುಸಿ ವಿದ್ಯಾರ್ಹತೆ ಹೊಂದಿರುವ ವಯಸ್ಕರಿಗೆ ಮಾತ್ರ ಅವಕಾಶ.
ಸ್ಥಳ: ರೈಸನ್ ನ್ಯೂಟ್ರೀಷಿಯನ್ ಬೆಣಗಾಲು, ಪಿರಿಯಾಪಟ್ಟಣ ತಾಲೂಕು.
9480055298

ಬೇಕಾಗಿದ್ದಾರೆ
ಸೆಕ್ಯುರಿಟಿ ಸೂಪರ್‌ವೈಸರ್ ಸೆಕ್ಯುರಿಟಿ ಗಾರ್ಡ್, ಹೌಸ್‌ಕೀಪಿಂಗ್, ಸೂಪರ್‌ವೈಸರ್, ಮಹಿಳೆಯರು ಮತ್ತು ಪುರುಷರು ,ಮೇಟಗಳ್ಳಿ , ಹಿನಕಲ್, ನಜರ್‌ಬಾದ್, ಕುವೆಂಪುನಗರ ಸುತ್ತಮುತ್ತ ಆಸ್ಪತ್ರೆ ಕೆಲಸಕ್ಕೆ ಬೇಕಾಗಿದ್ದಾರೆ (esi+pf ಉತ್ತಮ ಸಂಬಳ) ಯಾವುದೇ ಶುಲ್ಕ ಇಲ್ಲ ಸಂಪರ್ಕಿಸಿ
8884339446
8884286321/8884286123

HOME APPLIANCES SERVICE
ಫ್ರಿಡ್ಜ್, ವಾಷಿಂಗ್ ಮೆಷೀನ್, ಮೈಕ್ರೋ ವೋವೆನ್, LED, LCD, AC Sales & Service
Contact: Srinivas
9379699229

ಶ್ರೀ ಗೌರಿಶಂಕರ ಟ್ರಾವೆಲ್
12.8.22 (7ದಿನ) ಕಾಶಿ, ಪ್ರಾಯಾಗ್‌ರಾಜ್, ಸೀತಾಮಡಿ, ಅಯೋಧ್ಯ, ಗಯಾ, ಬುದ್ದಗಯಾ
12.9.22 (13 ದಿನ) ಗಂಗೋತ್ರಿ, ಯಮುನೋತ್ರಿ, ಕೇದಾರ್‌ನಾಥ್, ಬದರಿನಾಥ್, ಉತ್ತರಕಾಶಿ ಇತ್ಯಾದಿ.
10.10.22 (14 ದಿನ) ಕಾಶಿ, ಅಯೋಧ್ಯ, ನೇಪಾಳ, ಮುಕ್ತಿನಾಥ ಇತ್ಯಾದಿ.
10.7.22 (8 ದಿನ) ಪಳನಿ, ಮಧುರೈ, ಕನ್ಯಾಕುಮಾರಿ, 9 ನವಗ್ರಹ (ವಿಮಾನ, ಎ.ಸಿ. ಬಸ್ಸು) (ಊಟ, ವಸತಿ ಸೇರಿರುತ್ತದೆ)
9620002114

TV ಕೆಟ್ಟಿದೆಯೇ? LCD, LED TV
ಫ್ರಿಡ್ಜ್, ವಾಷಿಂಗ್ ಮೆಷಿನ್, Micro Oven Doorstep ಸರ್ವಿಸ್ ಮಾಡಿಕೊಡಲಾಗುತ್ತದೆ
ನುರಿತ ಸರ್ವಿಸ್ ಇಂಜಿನಿಯರ್‌ಗಳಿಂದ ಅತ್ಯಾಧುನಿಕ ಯಂತ್ರ ಬಳಸಿ LCD, LED ಪ್ಯಾನಲ್ ಬಾಂಡಿಂಗ್ ಕಡಿಮೆ ದರದಲ್ಲಿ ಮಾಡಿಕೊಡಲಾಗುತ್ತದೆ
ತೇಜು ಎಲೆಕ್ಟ್ರಾನಿಕ್ಸ್ ತ್ಯಾಗರಾಜ ರಸ್ತೆ, ಅಗ್ರಹಾರ
9342114069

ಶ್ರೀ ವಿನಾಯಕ ಮಲ್ಟಿ ಸರ್ವಿಸ್
ನಿಮಗೆ ಕೈಗೆಟಕುವ ದರದಲ್ಲಿ ಕನ್ಸ್ಟ್ರಕ್ಷನ್ ವರ್ಕ್ ಡೆಮಲಿಸನ್ ವರ್ಕ್, ಪೇಂಟ್ & ಪಾಲಿಸ್ ವರ್ಕ್, ಸೋಲಾರ್ ಸರ್ವಿಸ್ & ಎಕ್ಸ್‌ಚೇಂಜ್, ಅಲುಮಿನಿಯಂ ಪಾರ್ಟಿಸನ್ ವರ್ಕ್ ಗಾಗಿ ಸಂಪರ್ಕಿಸಿ.
8217368859

ಅನುಗ್ರಹ ಯಾತ್ರ
27/05 ಮುಂಗಾರು 2 ದಿನ ಪ್ರವಾಸ ಶಿರಸಿ, ಯಾಣ, ಜೋಗ್ ಪಾಲ್ಸ್, ಹೊನ್ನಾವರ, ಧನ್ವಂತರಿ, ಮುಗ್ವಾ, ಸುಬ್ರಮಣ್ಯ ಸ್ವಾಮಿ, ಇಕೋ ಬೀಚ್
9880079351

HOUSE FOR SALE
MUDA Allotted
40 x 55, N/F, 4 BHK Duplex Furnished ,32 squares, 15 years Old House at TK Layout 4th Stage. Prime location, Rs 1.95 cr. Owner will give 6 months Time for registration. Brokers Excuse
8660105902

ಉಚಿತ ತರಬೇತಿ
ಮನೆಯಿಂದಲೇ ಬತ್ತಿಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800ರೂ ವರೆಗೆ ಗಳಿಸಿ
ತರಬೇತಿಗಾಗಿ ಸಂಪರ್ಕಿಸಿ:
7406375196
9880548596

ತಕ್ಷಣ ಬೇಕಾಗಿದ್ದಾರೆ
ನಂಜನಗೂಡಿನ ಕಡಕೊಳ ಏರಿಯಾದ TVS ಫ್ಯಾಕ್ಟರಿ ಸುತ್ತಮುತ್ತ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ವಿದ್ಯಾರ್ಹತೆ: SSLC ಮೇಲ್ಪಟ್ಟು, ವಯೋಮಿತಿ: 45 ವರ್ಷದೊಳಗೆ, ಸಂಬಳ: 14,500/– (8 Hours, 26days), ಊಟ, ತಿಂಡಿ, ವಸತಿ ಸೌಲಭ್ಯವಿರುತ್ತದೆ. ಸಂಪರ್ಕಿಸಬೇಕಾದ ಸಂಖ್ಯೆಗಳು:
9620777819 / 9538567819

ಪ್ರೊಫೆಷನಲ್ ಮ್ಯಾರೇಜ್ ಬ್ಯೂರೋ
ಎಲ್ಲಾ ಜಾತಿಯ ಯುವತಿಯರಿಗೆ, ವಿಚ್ಛೇದಿತ ಮಹಿಳೆಯರಿಗೆ ಮತ್ತು ವಿಧವೆಯರಿಗೆ ನೋಂದಣಿ ಶುಲ್ಕವಿಲ್ಲದೆ ಕೇವಲ ಅರ್ಜಿ ಶುಲ್ಕದಲ್ಲಿ ವರಾನ್ವೇಷಣೆ ಮಾಡಿಕೊಡಲಾಗುವುದು. ಈ ಕೊಡುಗೆ ಕೇವಲ ನಾಲ್ಕು ದಿನಗಳು ಮಾತ್ರ ಆಸಕ್ತಿಯುಳ್ಳವರು ನೇರವಾಗಿ ಸಂಪರ್ಕಿಸಿ:
Mob: 89040-17912
#1270, 8ನೇ ಕ್ರಾಸ್, ದಟ್ಟಗಳ್ಳಿ 3ನೇ ಹಂತ, ಕನಕದಾಸನಗರ, ಮೈಸೂರು–570 023

ತಕ್ಷಣ ಬೇಕಾಗಿದ್ದಾರೆ
ಮೇಟಗಳ್ಳಿ, ಹೆಬ್ಬಾಳು ಮತ್ತು ಹೂಟಗಳ್ಳಿ ಏರಿಯಾದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ವಿದ್ಯಾರ್ಹತೆ: SSLC ಮತ್ತು ಮೇಲ್ಪಟ್ಟು, ಸಂಬಳ: 15,500/ W/o (8 Hours,) ಊಟ, ತಿಂಡಿ ಸೌಲಭ್ಯವಿರುತ್ತದೆ. ಸಂಪರ್ಕಿಸಬೇಕಾದ ಸಂಖ್ಯೆಗಳು:
9620667819 / 9880727819

WANTED
1) Supervisor (2yrs Exp)
Job Role:
* Quality Inspection.
* Production Follow up.
* Office Work
2) VMC Operators (1+ yrs Exp)
3) Helpers
9880104160
8792926944

ವಿಚ್ಚು ಕಲ್ಯಾಣ ಭಾಗ್ಯ
ಎಲ್ಲಾ ಜಾತಿಯ ವಧು, ವರರಿಗಾಗಿ ಸಂಪರ್ಕಿಸಿ 1) ಮೊದಲನೆ ಮದುವೆ, (2) ಎರಡನೇ ಮದುವೆ, (3) ಲೇಟ್ ಮ್ಯಾರೇಜ್ 4) ವಿಧವೆ, ವಿಧುರರು
ಸಂಪರ್ಕಿಸಿ: ನಂ. 445, 1ನೇ ಕ್ರಾಸ್, ಚಿಕ್ಕಮ್ಮ ಸ್ಕೂಲ್ ರಸ್ತೆ, ಹುಂಡಿ ಬೀದಿ, ಹಿನಕಲ್, ಮೈಸೂರು–570 017
8722935334, 8296856534

ತಕ್ಷಣ ಬೇಕಾಗಿದ್ದಾರೆ
ಆಫೀಸ್ ಕೆಲಸಕ್ಕೆ 28 ಯುವತಿಯರು ತಕ್ಷಣ ಬೇಕಾಗಿದ್ದಾರೆ ವಯಸ್ಸಿನಮಿತಿ 18-19 (ಸೂರ್ಯ ಬೇಕರಿ, ಹೆಬ್ಬಾಳ್, ಗೋಕುಲಂ, ಇಂದಿರಾ ನರ್ಸಿಂಗ್ ಹೋಂ, ಬಸವನ ಗುಡಿ, ಕುಂಬಾರಕೊಪ್ಪಲಿನವರಿಗೆ)
ಪ್ರಿಯಾ 7619219839
9986480054

SITES FOR SALE
30 x 40 - 26.40 lakhs
Bank Loan upto 75%,E/W facing available,near Gurur Bus Stop, Ramabainagar, Mysore.Ready for Registration, DTCPapproved (Corporation limits)
1.5 Kms from JP Nagar Ring Road
8660105902

ಸೈಟುಗಳು ಮತ್ತು ಮನೆ ಮಾರಾಟಕ್ಕಿವೆ
ಶ್ರೀರಾಂಪುರ ರಿಂಗ್ ರಸ್ತೆ, ಮೈಸೂರು
8050345574

HOME LOAN
11B, 9/11A ಕಾರ್ಪೋರೇಷನ್ & ಮುಡಾ ಖಾತಾಗಳಿಗೆ ಸಾಲ ಸೌಲಭ್ಯ ಕೊಡಿಸಲಾಗುವುದು. ಮನೆ ಖರೀದಿ, ಸೈಟ್ ಖರೀದಿ, ಮನೆ ಕನ್ಸ್ಟ್ರಕ್ಷನ್, ಮಾರ್ಟ್‌ಗೇಜ್, ಫ್ಲಾಟ್ ಖರೀದಿ
HOUSING LOAN FOR PENSIONERS
ಶ್ರೀ ಸಾಯಿ ಎಂಟರ್‌ಪ್ರೈಸಸ್ ಮೈಸೂರು
8884176836

ಸುವರ್ಣ ಯಾತ್ರ
7 ದಿನಗಳ ಕಾಶಿ ಪ್ರವಾಸ 01/06/22 ಕಾಶಿ, ಗಯಾ, ಬಾಬಾ ಬೈದ್ಯನಾಥ, ಅಯೋಧ್ಯೆ,
9 ದಿನಗಳ ಶ್ರೀ ಅಮರನಾಥ ಹಾಗೂ ವೈಷ್ಣೋದೇವಿ ಪ್ರವಾಸ, ಶ್ರೀನಗರ, ಜಮ್ಮು, ದಾಲ್ ಲೇಕ್, ಗುಲ್ಮಾರ್ಗ 9/7/22
13 ದಿನಗಳ ಚಾರ್‌ಧಾಮ್ ಪ್ರವಾಸ, ಬದ್ರಿನಾಥ್, ಕೇದಾರನಾಥ್, ಯಮುನೋತ್ರಿ, ಗಂಗೋತ್ರಿ ಹಾಗೂ ಇತರೆ 11/06/22
8970949434 / 9008381022

FOR RENT
New Godown (Ware House) 9,000 Sq.Ft. B.M.Road, Induvalu, Mandya
9900359955
9902631426

Gem Selections
(A Part of Khanna Gems Group)
100% Natural Govt. Lab Certified Gemstones
ಶೇಕಡಾ 100 ರಷ್ಟು ನೈಸರ್ಗಿಕ ಸರ್ಕಾರಿ ಪ್ರಯೋಗಾಲಯದಿಂದ ಪ್ರಮಾಣಿಕೃತ ರತ್ನದ ಹರಳುಗಳು ದೊರೆಯುತ್ತವೆ.
HIG-3, Near Akshaya Bhandar, New Kantharaju Urs Rd. Kuvempu Nagar, Mysuru, Karnataka-570023
8152066999

For Rent
Newly constructed 2BHK, East facing Ground Floor, Vidhyashankar Layout-Mysore
chandan 9945877878

ಉಚಿತ ವೃದ್ಧಾಶ್ರಮ ಸೇವೆ
ನಮ್ಮಲ್ಲಿ ವೃದ್ಧರು, ರೋಗಿಗಳು, ಹಾಸಿಗೆ ಹಿಡಿದವರಿಗೆ, ಅಂಗವಿಕಲರಿಗೆ ಉಚಿತವಾಗಿ ಪ್ರವೇಶವಕಾಶವಿದೆ. T & C apply. ಹೋಮ್ ನರ್ಸಿಂಗ್ ಸೇವೆ ಸಹ ಲಭ್ಯ
9513253747

ಹೊಸ ಚೀಟಿಗಳ ಪ್ರಾರಂಭ
ಸೀಬಿ ನರಸಿಂಹಸ್ವಾಮಿ ಚಿಟ್ಸ್ (ಕ) ಪ್ರೈ.ಲಿ, ಮೈಸೂರು / ಹಾಸನ

ಚೀಟಿ ಮೊತ್ತ	ತಿಂಗಳು	ತಿಂಗಳ ಕಂತು	3ನೇ ತಿಂಗಳಿಂದ
1 ಲಕ್ಷ	25	4000/–	3000/–
2 ಲಕ್ಷ	25	8000/–	6000/–
5 ಲಕ್ಷ	25	20,000/–	15,000/–
10 ಲಕ್ಷ	50	20,000/–	15,000/–
10 ಲಕ್ಷ	100	10,000/–	7,500/–
25 ಲಕ್ಷ	100	25,000/–	18,750/–

7892303484 / 8749077453

Solarizer

DEPENDABLE DURABLE DISTINCTIVE
HYGIENIC HOT WATER EVERY DAY!
Solar Water Heater SALES & SERVICE
Bajaj Finserv Available
SUNZONE SOLAR SYSTEM
VM Double Road, Kuvempunagar, Mysuru
9845175443

HOME LOANS
CORPORATION, MUDA, KHB GRAMATHANA PROPERTY
Site Purchase,
Site Construction
House Purchase
Site Mortgage
House Mortgage
ROI 6.65%
Contact: 9108416410

TECHERS REQUIRED
Vidyavahini School (R)
#282/8, Near Cauvery Circle, hebbal, 2nd Stage, Mysuru-570017.
N.S.T, D.ED, B.A/M.A- English
B.Sc., B.Ed - Mathematics
D.P.Ed/ B.P.Ed
Computer Teacher
Email: vidyavahini06@gmail.com
9844032278 / 7795115811

ತಕ್ಷಣ ಬೇಕಾಗಿದ್ದಾರೆ
PART TIME /FULL TIME / HOME-BASED
E-CODE GAS SAFE

EDUCATION	WORK TIME	SALARY
SSLC,PUC ,Dip,Degree	4 HOURS	8000/-
	8 HOURS	16000/-

ಗ್ಯಾಸ್ ಸೇಫ್ ಬಗ್ಗೆ ಮನೆಯಲ್ಲೆ ಕುಳಿತು ಗ್ರಾಹಕರಿಗೆ ಮಾಹಿತಿ ನೀಡುವ ಕೆಲಸ
Android ಸ್ಮಾರ್ಟ್ ಫೋನ್ ಹೊಂದಿರಬೇಕು
9986621226

ಬೇಕಾಗಿದ್ದಾರೆ
ವೃದ್ಧರು ರೋಗಿಗಳನ್ನು ಆರೈಕೆ ಮಾಡಲು ನಮ್ಮ ಸಂಸ್ಥೆಯಲ್ಲೇ ಉಳಿದುಕೊಳ್ಳುವಂತಹ ಯುವಕ, ಯುವತಿಯರು, ಮಹಿಳೆಯರು, ವಿಧವೆ / ವಿಚ್ಛೇದಿತೆಯರು ಹೋಂ ನರ್ಸಿಂಗ್ ಕೆಲಸಕ್ಕಾಗಿ ತಕ್ಷಣ ಬೇಕಾಗಿದ್ದಾರೆ. (ಸರ್ಕಾರಿ ನೋಂದಾಯಿತಾ ಸಂಸ್ಥೆ) ಸಂಬಳ 14000 ದಿಂದ 16000 (ESI, PF ಸೌಲಭ್ಯ ಇರುತ್ತದೆ)
8050699742

ವಿದ್ಯಾರ್ಥಿಗಳಿಗೆ ಸುವರ್ಣಾವಕಾಶ
(Consultancy ಅಲ್ಲ) ಮೈಸೂರು ಜಿಲ್ಲೆಯ ಪರೀಕ್ಷೆ ಬರೆದ ವಿದ್ಯಾರ್ಥಿಗಳಿಗೆ AWG ಕಂಪನಿಯಲ್ಲಿ Direct Interview ನೊಂದಿಗೆ ವಿವಿಧ ಹುದ್ದೆಗಳಿಗೆ ಆಯ್ಕೆ ಮಾಡಿಕೊಳ್ಳಲಾಗುತ್ತದೆ. SSLC (Pass), PUC, ITI, Any Degree ಉಚಿತ ವ್ಯಕ್ತಿತ್ವ ವಿಕಾಸನ ತರಬೇತಿ + ವಸತಿ + ತಿಂಗಳಿಗೆ 22,500–32,000. ರಕ್ಷಿತ:
9844219943 / 9743199416

IMKTA - PRE-SCHOOL TEACHER TRAINING
Diploma Courses for SSLC, PU or any Degree Candidates.
Regular / Saturday / Correspondence Courses with practical training. www: imkta.in
ALPHA INTERNATIONAL SCHOOL
@ Srirampura & Gokulam
Call: 7829937469, 9901803394
ONLINE TRAINING AVAILABLE

MOBILE ರಿಪೇರಿ ಟ್ರೈನಿಂಗ್
18 ವರ್ಷದಿಂದ Mobile, Electrical, Electronics ಮತ್ತು Computer Hardware ರಿಪೇರಿ ಹೇಳಿಕೊಡುತ್ತಿರುವ ಏಕೈಕ ಸಂಸ್ಥೆಯಲ್ಲಿ ಶೀಘ್ರದಲ್ಲಿ ಹೊಸ ಬ್ಯಾಚ್ ಪ್ರಾರಂಭ. ಯಾವುದೇ ವಿದ್ಯಾರ್ಹತೆ ಹಾಗೂ ವಯೋಮಿತಿಯ ಅಗತ್ಯವಿಲ್ಲ. ಕೂಡಲೇ ಸಂಪರ್ಕಿಸಿ:
SMM Institute,
ಶ್ರೀ ವೀರಭದ್ರೇಶ್ವರಸ್ವಾಮಿ ದೇವಸ್ಥಾನದ ಎದುರು, ದಳವಾಯಿ ಶಾಲೆಯ ರಸ್ತೆ, ಕೆ.ಆರ್.ಮೊಹಲ್ಲಾ ಮೈಸೂರು.
Mob.: 9986926101

ಬೋಳು ತಲೆಯ ಸಮಸ್ಯೆಯೇ?

ಕಿಮೊತೆರಪಿ ಚಿಕಿತ್ಸೆಗೆ ಒಳಪಡುತ್ತಿರುವ ರೋಗಿಗಳಿಗೆ ಸ್ಪರ್ಧಾತ್ಮಕ ಬೆಲೆಯಲ್ಲಿ ಹೇರ್ ವಿಗ್‌ಗಳು ದೊರೆಯುತ್ತವೆ.
SMART HAIR FIXING
574, 9th Cross, Anikethana Road, kuvempunagar, Mysuru
MYSURU 9611028523 MANGALORE 9343142258

ಹೆಲ್ತ್ ಕೇರ್ ತರಬೇತಿ
SSLC / PUC ಆದವರಿಗೆ ಡಿಪ್ಲಮೋ ಇನ್ ಹೆಲ್ತ್ ಕೇರ್ ತರಬೇತಿ ಕೊಡಲಾಗುತ್ತದೆ. ತರಬೇತಿ ಪಡೆದವರು ಉತ್ತಮ ಆಸ್ಪತ್ರೆಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ANM / GNM ಕೆಲಸವಿದೆ.
ಸೆಂಟ್ ಮೇರೀಸ್ ಆಸ್ಪತ್ರೆ, ಸಿಲ್ಕ್ ಫ್ಯಾಕ್ಟರಿ ಸರ್ಕಲ್, ಎನ್‌ಐಇ ಕಾಲೇಜ್ ಪಕ್ಕ, ಮೈಸೂರು
9916908454

ಷೇರ್ ಮಾರ್ಕೆಟ್ ಟ್ರೇಡಿಂಗ್
ಮನೆಯಲ್ಲೇ ಕುಳಿತು ಟ್ರೇಡಿಂಗ್ ಮಾಡುವ ಮೂಲಕ ದಿನಕ್ಕೆ 1500–2000 ಸಂಪಾದಿಸಿ self ಟ್ರೇಡಿಂಗ್ ಮಾಡುವುದನ್ನು ಹೇಳಿಕೊಡುತ್ತೇವೆ.
(Trading Tips Available)
Do Not Depend on one source of income
9945667806

ಕೆಲಸಕ್ಕೆ ಬೇಕಾಗಿದ್ದಾರೆ
ಮೈಸೂರಿನ ಪ್ರಖ್ಯಾತ MNC ಕಂಪನಿಗಳಿಗೆ ITI ಅಥವಾ Diploma ಪಾಸ್ ಆಗಿ ಮತ್ತು CNC Milling & Turningನಲ್ಲಿ ಎಕ್ಸ್‌ಪೀರಿಯನ್ಸ್ ಇರುವ ಅಭ್ಯರ್ಥಿಗಳು ಹಾಗೂ 8, 9, 10 ಪಾಸ್ / ಫೇಲ್ ಆದ ಅಭ್ಯರ್ಥಿಗಳು ಹೆಲ್ಪರ್ / ಲೋಡಿಂಗ್ / ಅನ್‌ಲೋಡಿಂಗ್ ಕೆಲಸಕ್ಕೆ ತಕ್ಷಣ ಬೇಕಾಗಿದ್ದಾರೆ. ಆಸಕ್ತಿ ಉಳ್ಳವರು ಕೂಡಲೇ ಸಂಪರ್ಕಿಸಿ.
9980619207 / 9148833780
6360740198

WANTED
1.Office Assistant cum Computer Operator
2. Accountant with Tally ERP 9 and GST
(Minimum 2 Years' Experience Both)
(Attractive Salary, ESI and EPF)
Contract: SWSS Pvt Ltd., #17/2, 5th Main, 8th Cross, Saraswathipuram, Mysore, (Timing 10:00 AM to 6:30 PM)
9164608888 / 9844299888

SDJ JEWELERS
ಪುರುಷರು ಮತ್ತು ಮಹಿಳೆಯರು Tele Callers ಮತ್ತು Sales Executive ಬೇಕಾಗಿದ್ದಾರೆ.
Qualification: SSLC/ PUC/ Degree/ Post Graduation
ಉಳಿದುಕೊಳ್ಳಲು PG ವ್ಯವಸ್ಥೆ ಇರುತ್ತದೆ
Salary : 20,000
8884304444

WANTED
Office Assistant / Accountant with computer knowledge in Tally.
Salary: Rs. 15,000 per month. *Contact:*
Mob: 9342118153
Work place in Bannimantap

WANTED
Drivers for TATA 1109 and Eicher 11.10, Mysore to Chennai and Hyderabad open Vehicle
9902076396
9538811425

ಗಿರವಿ ಚಿನ್ನಾಭರಣ ಖರೀದಿ
1 ಗ್ರಾಂ ಚಿನ್ನಕ್ಕೆ 5100
ಪ್ಯೂರಿಟಿಯ ಗುಣಮಟ್ಟಕ್ಕೆ ಅನುಗುಣವಾಗಿ ಕೊಡಲಾಗುತ್ತದೆ. ನೀವು ಯಾವುದೇ ಬ್ಯಾಂಕ್ ಮತ್ತು ಫೈನಾನ್ಸ್‌ನಲ್ಲಿ ಗಿರವಿಯಿಟ್ಟು ಬಿಡಿಸಿಕೊಳ್ಳಲಾಗದ ಚಿನ್ನದ ಆಭರಣಗಳನ್ನು ಬಿಡಿಸಿ ಮಾರುಕಟ್ಟೆಗಿಂತ ಅಧಿಕ ಬೆಲೆಗೆ ತಗೆದುಕೊಂಡು ಉಳಿದ ಹಣವನ್ನು ತಕ್ಷಣಕೊಡುತ್ತೇವೆ. ನಿಮಗೆ ಮತ್ತೆ ಚಿನ್ನಾಭರಣ ಬೇಕಾದಲ್ಲಿ ಕೂಲಿ ವೇಸ್ಟೇಜ್ ಇಲ್ಲದೆ ಮಾಡಿಕೊಡಲಾಗುತ್ತದೆ. ಕೂಡಲೇ (T&C) ಸಂಪರ್ಕಿಸಿ–S.M ಗೋಲ್ಡ್ ಫೈನಾನ್ಸ್
8050518881

ನಿರುದ್ಯೋಗಿಗಳಿಗೊಂದು ಸುವರ್ಣಾವಕಾಶ
ಮನೆಯಲ್ಲೇ ಕುಳಿತು ಟಾರ್ಗೆಟ್ ಇಲ್ಲದೆ ಬರವಣಿಗೆ ಮೂಲಕ 9 ರಿಂದ 30 ಸಾವಿರದವರೆಗೆ ಹಣಗಳಿಸುವ ಸುವರ್ಣಾವಕಾಶ. ಆಸಕ್ತರು ಸಂಪರ್ಕಿಸಿ:
7676844160
6361056646

ಗುರುನಾಥರ ಜೀವನ ಚರಿತ್ರೆ
"ಶ್ರೀ ಸದ್ಗುರು ಮಹಿಮೆ" ಚರಣದಾಸ ಪುಸ್ತಕ ಬೇಕಾದವರು ಸಂಪರ್ಕಿಸಿ. ಬೆಲೆ 350/– (ಪೋಸ್ಟರ್ ಸೌಲಭ್ಯವಿದೆ)
CH4 Organic for all
No.15/1, New Court Road, Jayanagara, Mysore
9060744127 / 9738322428

WANTED IMMEDIATELY
Stores Incharge (Any Degree)
Accounts Executives (Any Degree)
Drivers (Heavy License) (All are Male's Only) Age Below 35 Yrs
Experience: Min 2 Yrs.
Address: The Akshayapatra Foundation Mysore.
No.31, 18th Cross, Jayanagara, Mysore

HOUSE FOR SALE
No. 237, Near Pooja Bakery, Kuvempunagar.
Site for sale (15x34)
6th Main, Subashnagar, Bangalore-Mysore Main Road, Mysore-7. Contact:
Mob: 94485-70069

WANTED
Service Technician
ITI holder / 2nd PUC
For Home Appliances Authorised Service Centre.
Contact:
9900237315, 9845963421

ತಕ್ಷಣ ಬೇಕಾಗಿದ್ದಾರೆ
Ceramic Field ಮಾರ್ಕೆಟಿಂಗ್ (Field Work) ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ. ಯಾದವಗಿರಿ, ಮೈಸೂರು.
Mob: 9606932080

2 SITES FOR SALE
(30x50) @ Gomatagiri, near Manuganahalli (Mysore-Yelwala Road).
DTCP APPROVED
Rs. 8 Lakhs
Mob: 95388-39926

SITES FOR SALE
Instalments available.
Near MIT College.
Contact:
Mob: 93537-27889

ಬೇಕಾಗಿದ್ದಾರೆ
SNS ಚಿಟ್ಸ್ (ಕ) ಪ್ರೈ.ಲಿ. ಮೈಸೂರು. D.o/ ಏಜೆಂಟ್, ಪ್ರತಿನಿಧಿ, ಅಡ್ವೈಸರ್, ಮಾರ್ಕೆಟಿಂಗ್ ಮ್ಯಾನೇಜರ್ V.R.S ಉದ್ಯೋಗಿಗಳು, ಗೃಹಿಣಿಯರು, ನಿವೃತ್ತಿಯಾದವರು ಹಾಗೂ ಚೀಟಿ ಕಂಪನಿಯಲ್ಲಿ, ಕೆಲಸ ಮಾಡಿದವರು ಸಂಪರ್ಕಿಸಬಹುದು
7892303484 / 8749077453

ಬೇಕಾಗಿದ್ದಾರೆ (VACANCY)
ಕೂರ್ಗಳ್ಳಿ ಇಂಡಸ್ಟ್ರಿಯಲ್ ಏರಿಯಾದಲ್ಲಿರುವ ಫ್ಲೇವುಡ್ ಕಂಪನಿಗೆ 18 ರಿಂದ 50 ವರ್ಷದ ಪುರುಷರು ಕೆಲಸಕ್ಕೆ ಬೇಕಾಗಿದ್ದಾರೆ. ಸಂಬಳ– 8 ಗಂಟೆ ಕೆಲಸಕ್ಕೆ 12744/–
ಸಂಪರ್ಕಿಸಿ: ಕೋಮಲ್ ಎಂಟರ್‌ಪ್ರೈಸಸ್
ರತ್ನಮ್ಮ: 9900889325
ಜೋರೇಗೌಡ: 8050905152
ಇಂಟರೀವ್ ಎಕ್ಸೆಲ್ ಪಬ್ಲಿಕ್ ಸ್ಕೂಲ್ ಹತ್ತಿರ ಸಮಯ: ಬೆಳಿಗ್ಗೆ 9.30 ರಿಂದ 12.30 ರವರೆಗೆ

RENT or LEASE
EWS sheet house, 1st Floor with 24 hours water at 9th Cross, Gangothri Layout.
Contact:
8088584803, 8431985205

SITES FOR SALE
Vijayanagar 4th Stage & Srirampura.
MUDA APPROVED
Contact:
Mob: 93537-27889

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

ಬರವಣಿಗೆ ಕೆಲಸ
ಮನೆಯಿಂದಲೇ ಫಾರಂ ಭರ್ತಿಮಾಡುವ ಉದ್ಯೋಗ ಮಾಡಿ ಪ್ರತಿ 1 ಫಾರಂಗೆ 30 ರೂ.ಗಳನ್ನು ಪಡೆಯಿರಿ
9731891409

ಮನೆಯಿಂದಲೇ ಸಂಪಾದಿಸಿ
ಮನೆಯಿಂದಲೇ ಮೊಬೈಲ್, ಕಂಪ್ಯೂಟರ್ ಅಥವಾ ಕೈ ಬರವಣಿಗೆ ಮೂಲಕ ಉದ್ಯೋಗ ಮಾಡಿ 10,000 ರಿಂದ 30,000 ಸಂಪಾದಿಸಿ
7795560970

JOBS @ MYSORE
Age (18-22) ಹೊಸಬರಿಗೆ ಮಾತ್ರ 10th, PUC ಆದ Earn (8500/- ರಿಂದ 16,500/-) pm ಶುಲ್ಕ ರಹಿತ ಭೇಟಿಗಾಗಿ (11am to 5pm). ಕಾವ್ಯ:
9342827788
9353475598

WALK IN INTERVIEW
HP Printer Service Center
* Marketing Executive (Experience)
* Customer Support Desk (Experience)
* Tally Billing (Experience Only)
* Office Boys (with 2 Wheeler)
Irwin Main Road, Mysore.
7349060511
7899466123

FOR SALE
1) 30x40 attach Brahmins Layout 12 lks
2) 30x40 Karle Habitat, Opp University Layout
3) 20 x30 G+1 Floor, Aravindanagar.
4) 40x60 Commercial, Dattagalli, (5) 20x30 Sathagalli 2nd Stage. 6) 30x40 G+floor New House Bogadi Near Hari Vidyalaya .
PRAKRUTHI PROPERTIES
90359 90359, 95386 90359

WANTED TEACHERS
Brilliance Nursery & Primary School, (Rec. By Govt. fo Karnataka)
B.M.Shree Nagar, Mysore -16.
PUC D.Ed/ B.A, B.Ed/ B.Sc, B.Ed - 4 Posts to Teach English Medium primary classes Lady candidates are prefered English Fluency is must Interested candidates can apply along with their documents with in ten days Contact No.
9916195956

WANTED
ST.PAUL'S ENGLISH SCHOOL BANNIMANTAP
Walk in interview on 17th. 2022 between 1PM to 3 PM, Required efficient , Qualified and Experienced .
1. Head Mistress BA, B.Ed .
2. Nursery Teacher
Reg. For Admission Open for Pre- school to 10th Standard
9243526260 / 9483477437

LOAN FOR BUSINESS
ಎಲ್ಲಾ ರೀತಿಯ Business ಗೆ 20% ರಿಂದ 30% ವರೆಗೆ Subsidy Loan ಗಳನ್ನು ಹಾಗೂ ಹಳೆಯ Business ಗೆ ಕಡಿಮೆ ಬಡ್ಡಿ ದರದಲ್ಲಿ Top Loan ಗಳನ್ನು ಮಾಡಿಕೊಡಲಾಗುವುದು. (SC, ST ಹಾಗೂ ಮಹಿಳೆಯರಿಗೆ ವಿಶೇಷ ಆದ್ಯತೆ) ಎಲ್ಲಾ ರೀತಿಯ Document ಗಳನ್ನು ಹಾಗೂ Project Report ಗಳನ್ನು ಮಾಡಿಕೊಡಲಾಗುವುದು.
9686773884 / 9611573569

ಬೇಕಾಗಿದ್ದಾರೆ
ಹೌಸ್ ಕೀಪಿಂಗ್ ಬೇಬಿ ಕೇರಿಂಗ್ ಅಡುಗೆ ಹಾಗೂ ಮನೆ ಕೆಲಸಕ್ಕೆ ಹಾಗೂ ಸೆಕ್ಯೂರಿಟಿ, ಹೋಂ ನರ್ಸಿಂಗ್ ಕೆಲಸಕ್ಕೆ ಬೇಕಾಗಿದ್ದಾರೆ.
9481352166 / 9538317428

WANTED
Focus Scans and Diagnostics, Nanjumallige Circle, Madavachar Road, K.R.Mohalla, Mysore - 04
Lab Technician (Male)
Receptionist & Security Guard
Salary will be according to Experience (Security Guard with Boarding)
8088413472 / 9066390883

DOCUMENT LOST
I, Vinay.M Lost my original Katha of property's bearing house No. 8679, 2nd Phase, Vijayanagar 4th Stage, Mysore City. Registered document in MUDA and Registered in the office of Sub-registrar office, Mysore. Complaint has been lodged in police station on 06/05/2022, Vijayanagar Police Station, Mysore-17. Founder Please call:
9986330523

ತಕ್ಷಣ ಬೇಕಾಗಿದ್ದಾರೆ
ಮೈಸೂರಿನ ಪ್ರತಿಷ್ಠಿತ ಕಂಪನಿ, ಆಫೀಸ್ ಮತ್ತು ಶೋರೂಂಗಳಿಗೆ 7th, SSLC, PUC, ITI, Any Degree Pass/ Fail ಆದವರಿಗೆ Helper, Packing, Lablling ಮತ್ತು Cashier, Billing, Data Entry, Receptionist, Front office ಮುಂತಾದ ಕೆಲಸಗಳಿಗೆ ಬೇಕಾಗಿದ್ದಾರೆ. ಸಂಬಳ 14,000 - 39000 (ESI+PF+OT) ಸೇರಿ
7892878915 / 9663704915

URGENT REQUIRMENT
SLN facility Management Pvt. Ltd Hebbal, Mysore

Position	Qualification
Lady GYM instructor	CPed
Admin Assistant	Any Graduate
Telephone Operator	Good Communication
Electrician & AC Tech	ITI / Diploma
House Keeping Supervisor	3 yrs Experience in same field.

9900509554 / 8105669977

ಬೇಕಾಗಿದ್ದಾರೆ
ಬೂಟಿಕ್ ಅಲ್ಲಿ ಕೆಲಸ ಮಾಡಲು ನುರಿತ ಟೈಲರ್ ಮತ್ತು ಹೆಲ್ಪರ್ ಬೇಕಾಗಿದ್ದಾರೆ. ಆಸಕ್ತಿ ಇರುವವರು ಸಂಪರ್ಕಿಸಿ
9844813224

ಮನೆ ಬಾಡಿಗೆಗೆ ಇದೆ
20x30 1st Floor 2BHK
10ನೇ ಕ್ರಾಸ್ ರೈಲ್ವೆ ಬಡಾವಣೆ, ರಮಾಬಾಯಿನಗರ ಹತ್ತಿರ, ಮೈಸೂರು
9743660797

ಬೇಕಾಗಿದ್ದಾರೆ
ಮೇಟಗಳ್ಳಿ ಕೈಗಾರಿಕಾ ಪ್ರದೇಶದಲ್ಲಿರುವ ಪ್ರತಿಷ್ಠಿತ ಕಾರ್ಖಾನೆಗಳಿಗೆ ಯುವಕರು ಬೇಕಾಗಿದ್ದಾರೆ. ವಯಸ್ಸು : 18 ರಿಂದ 30 ವರ್ಷ, ವಿದ್ಯಾರ್ಹತೆ: 7 ರಿಂದ PUC ಮತ್ತು ITI ಉಚಿತ ಊಟ ಮತ್ತು ರಿಯಾಯಿತಿ ದರದಲ್ಲಿ ವಸತಿ ನೀಡಲಾಗುವುದು. ESI ಮತ್ತು PF ಸೌಲಭ್ಯವಿರುತ್ತದೆ. (ಯಾವುದೇ ಶುಲ್ಕವಿರುವುದಿಲ್ಲ)
8277047300

ಮನೆ ಮಾರಾಟಕ್ಕಿದೆ
11x30 EWS 124 ಪೂರ್ವ ದಿಕ್ಕು, ವಾಸಕ್ಕೆ ಯೋಗ್ಯವಾಗಿರುವ ಮನೆ 17 ಲಕ್ಷ ಬ್ಯಾಂಕ್ ಲೋನ್ 5 ಲಕ್ಷ ಇದೆ. ವಿಶ್ವಗುರು ರಸ್ತೆ, 2ನೇ ಕ್ರಾಸ್, ಕುವೆಂಪುನಗರ, ಪೊಲೀಸ್ ಠಾಣೆ ಮುಂಭಾಗ, ಮೈಸೂರು
9980031819

ಕಳೆದಿದೆ
ಕೆ.ಸದಾನಂದ ಮಂಜ ಇವರ ಸೈಟ್ ನಂ,875, ಪ್ರಗತಿನಗರ ಬಡಾವಣೆ, ಬೆಳವಾಡಿ ಗ್ರಾಮ, ಮೈಸೂರು ಇದರ ಶುದ್ಧ ಕ್ರಯಪತ್ರದ ದಾಖಲೆ ಕಳೆದಿರುತ್ತದೆ. ಸಿಕ್ಕಿದವರು ಹತ್ತು (10) ದಿನದ ಒಳಗಡೆ ಸಂಪರ್ಕಿಸಿ:
8951144240 / 7892846068

ಕೊಳ್ಳೇಗಾಲದ ಜ್ಯೋತಿಷ್ಯರು
ಮೋಡಿ ಮಾಂತ್ರಿಕರು ಪಂ.ಎಸ್.ಕುಮಾರಸ್ವಾಮಿ
ಮೊ.: 9880583804
ಸ್ತ್ರೀ ಪುರುಷ ಪ್ರೇಮ, ಸಂತಾನ, ದಾಂಪತ್ಯ ಸಮಸ್ಯೆ (Divorce) ಡಿವೋರ್ಸ್ ಪ್ರಾಬ್ಲಮ್, ಸಾಲಬಾಧೆ, ಶತ್ರುಬಾಧೆ, ದುಷ್ಟಶಕ್ತಿ, ಅಷ್ಟಪಟ್ಟವರು ನಿಮ್ಮಂತಾಗಲು, ಕೊಳ್ಳೇಗಾಲ ಮೋಡಿ ಮಾಂತ್ರಿಕ ಶಕ್ತಿಯಿಂದ ನಿಮ್ಮ ಯಾವುದೇ ಸಮಸ್ಯೆಗಳಿಗೆ ಎರಡೇ ದಿನದಲ್ಲಿ ಶಾಶ್ವತ ಪರಿಹಾರ ಶತಸಿದ್ಧ ನಂಬಿ ಬನ್ನಿ. ಬಾಯಂ ವಿಳಾಸ: (Reliance Smart) ಹತ್ತಿರ, ATM ಪಕ್ಕ, ಟಿಕೆಟ್ ಬುಕ್ಕಿಂಗ್ ಕೌಂಟರ್ ಹತ್ತಿರ, (KSRTC) ಸುಬರ್ಬ್ ಬಸ್ ಸ್ಟ್ಯಾಂಡ್, ಮೈಸೂರು

ಕೇರಳ ಶ್ರೀ ಭಗವತಿ ಜ್ಯೋತಿಷ್ಯರು
ಪಂ|| ಎಸ್.ಮಣಿಕಂಠನ್
ಮೊ: 9480743991
ಮಹಾಮಾಂತ್ರಿಕ ಅಘೋರಿ ದೈವ ದೇವರ ಬಲಿಷ್ಠ ಪೂಜಾ ಶಕ್ತಿಗಳಿಂದ ನಿಮ್ಮ ಎಲ್ಲಾ ಸಮಸ್ಯೆಗಳಿಗೆ 3 ದಿನಗಳಲ್ಲಿ ಶಾಶ್ವತ ಪರಿಹಾರ ವಿದ್ಯೆ, ಉದ್ಯೋಗ, ಸಂತಾನ, ಪ್ರೀತಿ, ಪ್ರೇಮ, ಮದುವೆ, ಕೋರ್ಟ್, ಕೇಸು, ದಾಂಪತ್ಯ, ಗಂಡ ಹೆಂಡತಿ ಕಿರಿಕಿರಿ ಇಲ್ಲಿ ಹೇಳುವಂತ ವಿಚಾರಗಳನ್ನು ಗುಪ್ತವಾಗಿ ಇಡಲಾಗುವುದು. ಖಾಯಂ ವಿಳಾಸ: ಅಶೋಕ ರೋಡ್, ಈಸ್ಟ್ ಕ್ರಾಸ್ 36, ಶುಭಂ ಜ್ಯುವಲರಿ ಎದುರು ಕನ್ನಿಕ ಪರಮೇಶ್ವರಿ ದೇವಸ್ಥಾನದ ಹತ್ತಿರ, ಮೈಸೂರು.

ಕೇರಳ ಶ್ರೀ ಪ್ರಸಿದ್ಧ ಮಹಾ ಮಾಂತ್ರಿಕ ಜ್ಯೋತಿಷ್ಯರು, ನಂ.1 ಮೋಡಿ ತಜ್ಞರು
ಪಂಡಿತ್ ಕೆ.ಎಸ್.ಕೃಷ್ಣಮೂರ್ತಿ
ಮೊ.: 9741806990
ತಾಯಿ ಚಾಮುಂಡೇಶ್ವರಿ ಕಾಡತೋರಿ ನಾಲ್ದ ದೈವ ಚೌಡಿ ಕರೆ ಭಗವತಿ ಮಹಾ ಮಾಂತ್ರಿಕ ಶಕ್ತಿಯಿಂದ ಲೈಂಗಿಕ, ದಾಂಪತ್ಯ, ಸ್ತ್ರೀ ಪುರುಷ ಪ್ರೇಮ ವಿಚಾರ, ಕೋರ್ಟ್ ಕಚೇರಿ, ಹಣಕಾಸಿನ ತೊಂದರೆ, ವಿವಾದ, ಮನೆಯಲ್ಲಿ ಅಶಾಂತಿ, ಮಾಟಮಂತ್ರ ಚಿಂತೆ, ಇನ್ನೂ ಮುಂತಾದ ಸಮಸ್ಯೆಗಳಿಗೆ 3 ದಿನದಲ್ಲಿ ಪರಿಹಾರ ಶತಃಸಿದ್ಧ. ಖಾಯಂ ವಿಳಾಸ: ಸುಬರ್ಬ್ ಬಸ್‌ಸ್ಟ್ಯಾಂಡ್ ಪಕ್ಕ, ಇರ್ವಿನ್ ರೋಡ್, ಅಂದ್ರ ಶೈಲಿ ನಂದಿನಿ ಹೋಟೆಲ್ ಹಿಂಭಾಗ, ಮಾರುತಿ ಸುಜುಕಿ ಆಟೋ ವರ್ಕ್‌ಶಾಪ್ ಪಕ್ಕ ಮನೆಯಲ್ಲಿ ನೆಲೆಸಿದ್ದಾರೆ. ಪಳಕೇರಿ, ಮೈಸೂರು ಇಲ್ಲಿ ಹೇಳುವ ವಿಚಾರಗಳನ್ನು ಗುಪ್ತವಾಗಿ ಇಡಲಾಗುತ್ತದೆ.

ಮೈಸೂರು ಮಿತ್ರ ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಮತ್ತಷ್ಟು ವರ್ಗೀಕೃತ ಜಾಹೀರಾತು ಪುಟ 6 ರಲ್ಲಿ

ಮೈಷುಗರ್ ಕಾರ್ಖಾನೆ ಮುಂದೆ ಹೈಡ್ರಾಮಾ

ನಲಪಾಡ್ ಸೇರಿದಂತೆ ಹಲವರ ಬಂಧನ, ಬಿಡುಗಡೆ



ಮಂಡ್ಯ,ಮೇ 15(ಮೋಹನ್‌ರಾಜ್)– ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಹುಟ್ಟು ಹಬ್ಬದ ಹಿನ್ನೆಲೆಯಲ್ಲಿ ನಗರದ ಮೈಷುಗರ್ ಕಾರ್ಖಾನೆಯ ಆವರಣದಲ್ಲಿ ಯುವ ಕಾಂಗ್ರೆಸ್ ಕಾರ್ಯಕರ್ತರು ಹಮ್ಮಿಕೊಂಡಿದ್ದ ಸ್ವಚ್ಛತಾ ಕಾರ್ಯಕ್ರಮಕ್ಕೆ ಅನುಮತಿ ಪಡೆದಿಲ್ಲ ಎಂಬ ಹಿನ್ನೆಲೆಯಲ್ಲಿ ಪೊಲೀಸರು ಅಡ್ಡಿಪಡಿಸಿದ್ದರಿಂದ ಮೈಷುಗರ್ ಆವರಣದ ಮುಂದೆ ಕಾರ್ಯಕರ್ತರು ಪ್ರತಿಭಟನೆಗೆ ಮುಂದಾದ ಹಿನ್ನೆಲೆಯಲ್ಲಿ ಪೊಲೀಸರು ಯುವ ಕಾಂಗ್ರೆಸ್ ರಾಜ್ಯಾಧ್ಯಕ್ಷ ಮಹಮ್ಮದ್ ನಲಪಾಡ್ ಸೇರಿದಂತೆ ಜಿಲ್ಲೆಯ ಕಾಂಗ್ರೆಸ್ ಮುಖಂಡರು ಹಾಗೂ ಕಾರ್ಯಕರ್ತರನ್ನು ಬಂಧಿಸಿ ನಂತರ ಬಿಡುಗಡೆ ಮಾಡಿದರು.

ಮೈಷುಗರ್ ಕಾರ್ಖಾನೆ ಆರಂಭವಾಗುತ್ತಿರುವ ಹಿನ್ನೆಲೆಯಲ್ಲಿ ಕಾರ್ಖಾನೆಯ ಆವರಣದಲ್ಲಿ ಡಿ.ಕೆ.ಶಿವಕುಮಾರ್ ಹುಟ್ಟುಹಬ್ಬದ ಅಂಗವಾಗಿ ಸ್ವಚ್ಛತಾ ಅಭಿಯಾನ ಹಮ್ಮಿಕೊಂಡಿದ್ದರು. ಅದರಂತೆ ಭಾನುವಾರ ಬೆಳಗ್ಗೆ ಎಲ್ಲ ಕಾರ್ಯಕರ್ತರು ಮೈಷುಗರ್ ಆವರಣಕ್ಕೆ ಆಗಮಿಸುತ್ತಿದ್ದಂತೆ ಪೊಲೀಸರು ಮೈಷುಗರ್ ಕಾರ್ಖಾನೆ ಆವರಣದೊಳಗೆ ಪ್ರವೇಶಿಸದಂತೆ ತಡೆಯೊಡ್ಡಿದರು.

ಇದರಿಂದ ಆಕ್ರೋಶಗೊಂಡ ಕಾರ್ಯಕರ್ತರು ಸ್ಥಳದಲ್ಲಿಯೇ ಧರಣಿ ಆರಂಭಿಸಿದರು. ರಾಜ್ಯ ಬಿಜೆಪಿ ಸರ್ಕಾರದ ವಿರುದ್ಧ ಘೋಷಣೆ ಕೂಗಿದರು. ಕೆಲಕಾಲ ಪ್ರತಿಭಟನೆ ನಡೆಸಿದ ಕಾರ್ಯಕರ್ತರನ್ನು ಪ್ರತಿಭಟನೆ ಕೈಬಿಡುವಂತೆ ಪೊಲೀಸರು ಮನವಿ ಮಾಡಿದರು. ಇದಕ್ಕೆ ಸೊಪ್ಪು ಹಾಕದ ಕಾರ್ಯಕರ್ತರು ಮೈಷುಗರ್ ಆವರಣಕ್ಕೆ ಪ್ರವೇಶ ನೀಡಬೇಕು ಎಂದು ಪಟ್ಟು ಹಿಡಿದರು. ಈ ಸಂದರ್ಭದಲ್ಲಿ ಪೊಲೀಸರು ಹಾಗೂ ಕಾರ್ಯಕರ್ತರ ನಡುವೆ ಮಾತಿನ ಚಕಮಕಿ ನಡೆಯಿತು.

ಮಾತಿನ ಚಕಮಕಿ ನಡೆಯುತ್ತಿದ್ದಂತೆ ಕಾಂಗ್ರೆಸ್ ಕಾರ್ಯಕರ್ತರು ಬ್ಯಾರಿಕೇಡ್‌ಗಳನ್ನು ಭೇದಿಸಿ ಆವರಣದೊಳಗೆ ನುಗ್ಗಲು ಯತ್ನಿಸಿದರು. ಈ ಸಂದರ್ಭದಲ್ಲಿ ಪೊಲೀಸರು ಹಾಗೂ ಕಾರ್ಯಕರ್ತರ ನಡುವೆ ತಳ್ಳಾಟ ನೂಕಾಟಗಳು ನಡೆದವು. ಅಲ್ಲದೆ, ಧರಣಿ ಕುಳಿತ ಮಹಿಳಾ ಕಾರ್ಯಕರ್ತರನ್ನು ಪೊಲೀಸರು ಎಳೆದು ಹೊರಗೆ ಹಾಕಿದರು.

ತಳ್ಳಾಟ–ನೂಕಾಟ ಹೆಚ್ಚಾಗುತ್ತಿದ್ದಂತೆ ಎಚ್ಚೆತ್ತ ಪೊಲೀಸರು ಯುವ ಕಾಂಗ್ರೆಸ್ ರಾಜ್ಯಾಧ್ಯಕ್ಷ ಮಹಮ್ಮದ್ ನಲಪಾಡ್, ರಾಜ್ಯ ಪ್ರಧಾನ ಕಾರ್ಯದರ್ಶಿ ಐಶ್ವರ್ಯ, ಮುಖಂಡರಾದ ಗಣಿಗ ರವಿಕುಮಾರ್, ಜಿಲ್ಲಾಧ್ಯಕ್ಷ ವಿಜಯಕುಮಾರ್, ಸಿ.ಡಿ.ಗಂಗಾಧರ್, ಎಂ.ಎಸ್.ಚಿದಂಬರ್ ಸೇರಿದಂತೆ ಹಲವರನ್ನು ಬಂಧಿಸಿದರು.

ಶೇ.40 ಕಮೀಷನ್‌ಗಾಗಿ ಬಿಜೆಪಿ ರಾಜಕೀಯ–ನಲಪಾಡ್ ಆಕ್ರೋಶ: ಮೈಷುಗರ್ ಕಾರ್ಖಾನೆಯ ಆವರಣ ಸಾಕಷ್ಟು ಅಧ್ವಾನಗೊಂಡಿದೆ. ರೈತರ ಹಿತದೃಷ್ಟಿಯಿಂದ ಸ್ವಚ್ಛತೆ ಮಾಡಲು ಮುಂದಾದರೆ ಸರ್ಕಾರ ಪೊಲೀಸರ ಮೂಲಕ ರಾಜಕೀಯ ಮಾಡಲು ಮುಂದಾಗಿದೆ ಎಂದು ಯುವ ಕಾಂಗ್ರೆಸ್ ರಾಜ್ಯಾಧ್ಯಕ್ಷ ಮಹಮ್ಮದ್ ನಲಪಾಡ್ ಆಕ್ರೋಶ ವ್ಯಕ್ತಪಡಿಸಿದರು.

ಕಳೆದ ಮೂರು ದಿನಗಳ ಹಿಂದೆಯೇ ಪೊಲೀಸರಿಂದ ಅನುಮತಿ ಪಡೆಯಲು ಅರ್ಜಿ ಸಲ್ಲಿಸಲಾಗಿತ್ತು. ಅಲ್ಲದೆ, ನಾನೂ ಸಹ ಅರ್ಜಿ ಸಲ್ಲಿಸಿದ್ದೆ. ಆದರೆ ಪೊಲೀಸರು ಅನುಮತಿ ನೀಡಿಲ್ಲ. ಅನುಮತಿ ನೀಡದಂತೆ ಸರ್ಕಾರ ಪೊಲೀಸರ ಮೂಲಕ ರಾಜಕೀಯ ಮಾಡುತ್ತಿದೆ ಎಂದು ಕಿಡಿಕಾರಿದರು.

ಮೈಷುಗರ್ ಕಾರ್ಖಾನೆಯ ಸ್ವಚ್ಛತೆಗಾಗಿ 10 ಲಕ್ಷ ರೂ.ಗೆ ಗುತ್ತಿಗೆ ನೀಡಲಾಗಿದೆ. ಇದರಲ್ಲಿ ಶೇ.40ರಷ್ಟು ಕಮಿಷನ್ ಪಡೆಯುವ ಹಿನ್ನೆಲೆಯಲ್ಲಿ ರಾಜಕೀಯ ಮಾಡುತ್ತಿದೆ. ಕಾರ್ಖಾನೆ ಆರಂಭವಾಗುತ್ತಿರುವ ಹಿನ್ನೆಲೆಯಲ್ಲಿ ರೈತರ ಹಿತದೃಷ್ಟಿಯಿಂದ ನಮ್ಮ ನಾಯಕರಾದ ಡಿ.ಕೆ.ಶಿವಕುಮಾರ್ ಹುಟ್ಟುಹಬ್ಬದ ಹಿನ್ನೆಲೆಯಲ್ಲಿ ಜೆಸಿಬಿ, ಟ್ರ್ಯಾಕ್ಟರ್ ತಂದು ಸ್ವಚ್ಛಗೊಳಿಸಲು ಮುಂದಾಗಿದ್ದೆವು. ಆದರೆ ಪೊಲೀಸರು ಇದಕ್ಕೆ ತಡೆಯೊಡ್ಡುತ್ತಿದ್ದಾರೆ ಎಂದು ನಲಪಾಡ್ ಹೇಳಿದರು. ಒಂದು ಗಂಟೆಯ ನಂತರ ಬಂಧಿತರನ್ನು ಬಿಡುಗಡೆ ಮಾಡಲಾಯಿತು.

ಜಾಮಿಯಾ ಮಸೀದಿ ವಿರುದ್ಧ ಕಾನೂನು ಹೋರಾಟ: ಕಾಳಿ ಸ್ವಾಮಿ



ಶ್ರೀರಂಗಪಟ್ಟಣ, ಮೇ 15(ವಿನಯ್ ಕಾರೇಕುರ)– ಹಿಂದೂ ದೇವಾಲಯವಾಗಿದ್ದ ಪಟ್ಟಣದ ಜಾಮಿಯಾ ಮಸೀದಿ ವಿರುದ್ಧ ಕಾನೂನು ಹೋರಾಟ ನಡೆಸುವುದು ಶತಸಿದ್ಧ ಎಂದು ಋಷಿಕುಮಾರ ಸ್ವಾಮಿ (ಕಾಳಿ ಸ್ವಾಮಿ) ಹೇಳಿದ್ದಾರೆ.

ಮೈಸೂರಿಗೆ ತೆರಳುತ್ತಿದ್ದ ಮಾರ್ಗಮಧ್ಯೆ ಶ್ರೀರಂಗಪಟ್ಟಣದ ಪಶ್ಚಿಮವಾಹಿನಿ ಬಳಿ ನಡೆಯುತ್ತಿದ್ದ ಶ್ರೀ ಮದಕರಿನಾಯಕರ ಪುಣ್ಯಸ್ಮರಣೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಈ ಬಾರಿ ಹನುಮ ಜಯಂತಿಯನ್ನು ಶ್ರೀರಂಗಪಟ್ಟಣದಲ್ಲೇ ಅದ್ದೂರಿಯಾಗಿ ಆಚರಿಸುತ್ತೇವೆ. ರಾಜ್ಯದ ಮೂಲೆ ಮೂಲೆಗಳಿಂದ ಸುಮಾರು 6 ಲಕ್ಷ ಕ್ಕೂ ಹೆಚ್ಚು ಮಂದಿ ಹನುಮ ಮಾಲಾಧಾರಿಗಳು ಬರುತ್ತಾರೆ. ಈ ಹಿಂದೆ ಸುಪ್ರಸಿದ್ಧ ಹನುಮ ದೇವಾಲಯವಾಗಿದ್ದ ಪಟ್ಟಣದ ಮಸೀದಿ ಪ್ರವೇಶ ಮಾಡುವುದಾಗಿ ಹೇಳಿದರಲ್ಲದೆ, ಕಾನೂನು ಮಾಹಿತಿ ಪಡೆದು ಹೋರಾಟ ಮಾಡಿ ಮಸೀದಿಯ ಕಲ್ಯಾಣಿಯಲ್ಲಿ ತೀರ್ಥ ಸೇವನೆ ಮಾಡಿ ಧ್ಯಾನ ಮಾಡೊದು ಶತಸಿದ್ಧ ಎಂದರು.

ಬಾಬ್ರಿ ಮಸೀದಿ ಆಯ್ತು ಈಗ ವಾರಣಾಸಿಯ ಜ್ಞಾನವ್ಯಾಪಿ ಮಸೀದಿಯೂ ಆಯ್ತು. ಅದೇ ರೀತಿ ಶ್ರೀರಂಗಪಟ್ಟಣದ ಜಾಮಿಯಾ ಮಸೀದಿಯನ್ನೂ ಪಡೆಯುತ್ತೇವೆ. ಮೂಡಲ ಕೋಟೆ ಆಂಜನೇಯ ಸ್ವಾಮಿ ದೇವಾಲಯವನ್ನು ನಾವು ಪಡೆಯುವುದೇ ನಮ್ಮ ಮುಂದಿನ ಹೆಜ್ಜೆ ಎಂದು ಸ್ವಾಮೀಜಿ ಹೇಳಿದರು.

ಶ್ರೀರಂಗಪಟ್ಟಣ ಜಾಮಿಯಾ ಮಸೀದಿಯಲ್ಲಿ ಹಿಂದೂ ದೇವರಿಗೆ ಪೂಜೆ ಸಲ್ಲಿಸಲು ಅನುಮತಿ ಕೋರಿ ಡಿಸಿಗೆ ಮನವಿ



ಮಂಡ್ಯ, ಮೇ 15(ಮೋಹನ್ ರಾಜ್)– ಶ್ರೀರಂಗಪಟ್ಟಣದಲ್ಲಿ ಜಾಮಿಯಾ ಮಸೀದಿಯಲ್ಲಿ ಹಿಂದೂ ದೇವರ ಮೂರ್ತಿಗಳು ಹಾಗೂ ಕೆತ್ತನೆಗಳು ಇದ್ದು, ಇಲ್ಲಿನ ಆಂಜನೇಯಸ್ವಾಮಿ ದೇವರಿಗೆ ಹಿಂದೂಗಳು ಪೂಜೆ ಮಾಡಲು ಅವಕಾಶ ಮಾಡಿಕೊಡಬೇಕು ಎಂದು ಒತ್ತಾಯಿಸಿ ನರೇಂದ್ರಮೋದಿ ವಿಚಾರ ಮಂಚ್‌ನ ಕಾರ್ಯಕರ್ತರು ಜಿಲ್ಲಾಧಿಕಾರಿಗೆ ಎಸ್. ಅಶ್ವತಿ ಅವರಿಗೆ ಮನವಿ ಸಲ್ಲಿಸಿದರು.ಟಿಪ್ಪುವಿನ ಆಡಳಿತಾವಧಿಯಲ್ಲಿ ಜಿಲ್ಲೆಯ ಶ್ರೀರಂಗಪಟ್ಟಣದಲ್ಲಿರುವ ದೇವಸ್ಥಾನವನ್ನು ಧ್ವಂಸ ಮಾಡಿ, ಸದರಿ ಕಟ್ಟಡವನ್ನು ಮಸೀದಿಯಾಗಿ ಪರಿವರ್ತನೆ ಮಾಡಿರುವ ಬಗ್ಗೆ ಅನೇಕ ಇತಿಹಾಸಕಾರರು ತಮ್ಮ ಹೇಳಿಕೆಗಳನ್ನು ಹಾಗೂ ದಾಖಲೆಗಳನ್ನು ಪ್ರಚುರಪಡಿಸಿದ್ದಾರೆ. ಲೂಯಿಸ್ ರೈಸ್‌ರವರ ಮೈಸೂರು ಗೆಜೆಟಿಯರ್, ಅರಮನೆ ನಡಾವಳಿಗಳು, ಶ್ರೀ ಮನ್ಮಮಹಾರಾಜ ಚರಿತ್ರೆ, ತಾರಿಕ್ ಎ–ಟಿಪ್ಪು ಹೈದರ್ ಇ ನಿಶಾನಿ ಹಾಗೂ ಸ್ವತಃ ಟಿಪ್ಪು ಪರ್ಶಿಯಾದ ಖಲೀಫ್‌ಗೆ ಬರೆದ ಪತ್ರಗಳು ಇದಕ್ಕೆ ಪುಷ್ಟಿ ನೀಡುತ್ತವೆ ಎಂದು ತಿಳಿಸಿದ್ದಾರೆ.

ಈ ಬಗ್ಗೆ ಪುರಾತತ್ವ ಇಲಾಖೆ ವತಿಯಿಂದ ದಾಖಲೆಗಳನ್ನು ಪರಿಶೀಲಿಸಿ, ಜಿಲ್ಲಾಡಳಿತದ ವತಿಯಿಂದ ಹಿಂದೂಗಳ ಆರಾಧ್ಯ ದೈವ ಶ್ರೀರಂಗಪಟ್ಟಣದ ಮೂಡಲಬಾಗಿಲು ಆಂಜನೇಯಸ್ವಾಮಿ ದೇವಾಲಯದಲ್ಲಿ (ಈಗಿನ ಮಸೀದಿ) ಪೂಜೆ ಮಾಡಲು ಕಾನೂನುಬದ್ಧವಾಗಿ ಅವಕಾಶ ಮಾಡಿಕೊಡಬೇಕು ಎಂದು ಅವರು ಆಗ್ರಹಿಸಿದರು. ಈ ಮೇಳೆ ನರೇಂದ್ರಮೋದಿ ವಿಚಾರ ಮಂಚ್‌ನ ಕಾರ್ಯಕರ್ತರಾದ ಸಿ.ಟಿ. ಮಂಜುನಾಥ್, ಹೊಸಹಳ್ಳಿ ಶಿವು, ಹನಿಯಂಬಾಡಿ ನಾಗರಾಜು, ಧಾರ್ಮಿಕ ಪರಿಷತ್ ಸದಸ್ಯ ನವೀನ್ ಹಾಗೂ ಮಂಜು ಇತರರಿದ್ದರು.

ಕೆ.ಆರ್.ಪೇಟೆ ತಾಲೂಕು ವಕೀಲರ ಸಂಘದ ನೂತನ ಅಧ್ಯಕ್ಷರಾಗಿ ರವಿಶಂಕರ್ ಆಯ್ಕೆ



ಕೆ.ಆರ್.ಪೇಟೆ,ಮೇ 15– ತಾಲೂಕು ವಕೀಲರ ಸಂಘದ ನೂತನ ಅಧ್ಯಕ್ಷರಾಗಿ ಹಿರಿಯ ನೋಟರಿ ವಕೀಲ ಎನ್.ಆರ್. ರವಿಶಂಕರ್ ಆಯ್ಕೆಯಾಗಿದ್ದಾರೆ.

ಉಪಾಧ್ಯಕ್ಷರಾಗಿ ಬಿ.ಸಿ.ದಿನೇಶ್, ಪ್ರಧಾನ ಕಾರ್ಯದರ್ಶಿಯಾಗಿ ಆರ್.ಕೆ.ರಾಜೇಗೌಡ, ಜಂಟಿ ಕಾರ್ಯದರ್ಶಿಯಾಗಿ ಸಿ.ನಿರಂಜನ್, ಖಜಾಂಚಿಯಾಗಿ ಜಗದೀಶ್ ಜಯ ಸಾಧಿಸಿದ್ದಾರೆ. ನಿರ್ದೇಶಕರಾಗಿ ಎಂ.ರಾಣಿ, ಯೋಗೇಂದ್ರ, ಪ್ರಭಾಕರ್, ಸುಂದ್ರೇಶ್, ವಿಜಯಕುಮಾರ್, ಎಂ.ಸಿ.ಸುಜಾತ ಗೆಲುವು ಸಾಧಿಸಿದ್ದಾರೆ. ಚುನಾವಣಾಧಿಕಾರಿಯಾಗಿ ಹಿರಿಯ ನೋಟರಿ ವಕೀಲ ಎಂ.ಎನ್.ರಾಮಸ್ವಾಮಿ, ಸಹ ಚುನಾವಣಾಧಿಕಾರಿಯಾಗಿ ವಕೀಲ ಕುಮಾರಸ್ವಾಮಿ ಮತ್ತು ಮಂಜುನಾಥ್, ಕಾರ್ಯ ನಿರ್ವಹಿಸಿದರು.

ನೂತನ ಅಧ್ಯಕ್ಷರು ಮತ್ತು ಪದಾಧಿಕಾರಿಗಳ ಆಯ್ಕೆ ಘೋಷಣೆಯಾಗುತ್ತಿದ್ದಂತೆ ಅಭಿಮಾನಿಗಳು ಹಾಗೂ ವಕೀಲರು ಪಟಾಕಿ ಸಿಡಿಸಿ ವಿಜಯೋತ್ಸವ ಆಚರಿಸಿದರು.

ನೂತನ ಅಧ್ಯಕ್ಷರು ಮತ್ತು ಪದಾಧಿಕಾರಿಗಳನ್ನು ಹಿರಿಯ ವಕೀಲರಾದ ಬಿ.ಎಲ್. ದೇವರಾಜು, ಎಸ್.ಸಿ.ವಿಜಯಕುಮಾರ್, ಹೆಚ್.ಆರ್.ಕೃಷ್ಣಕುಮಾರ್, ಮಾಜಿ ಅಧ್ಯಕ್ಷರಾದ ಬಿ.ಗಣೇಶ್, ಕೆ.ಎನ್.ನಾಗರಾಜು, ಎಂ.ಎಲ್.ಸುರೇಶ್, ಕೆರೆಮೇಗಳಕೊಪ್ಪಲು ಶಂಕರೇಗೌಡ, ಎಸ್.ಸ್ವಾಮಿ, ಮಂಜುನಾಥ್, ಜಗದೀಶ್, ಪಾಂಡು, ಎಂ.ಆರ್.ನಾಗೇಗೌಡ, ಕುಚೇಲೇಗೌಡ, ಸತೀಶ್, ಬಿ.ಕೆ.ಯೋಗೇಶ್, ಸಿ.ಎಸ್.ವೆಂಕಟರಾಮು(ಜಿಲ್ಲಾ ಜೆಡಿಎಸ್ ಕಾನೂನು ಘಟಕದ ಪ್ರಧಾನ ಕಾರ್ಯದರ್ಶಿ), ಜಿ.ಜೆ.ಲೋಕೇಶ್, ಬಿ.ಸಿ.ಹರ್ಷ, ಅಪ್ಪನಹಳ್ಳಿ ಅರುಣ್‌ಕುಮಾರ್, ಡಿ.ಕೆ.ಗೋವಿಂದೇಗೌಡ, ರಾಯಸಮುದ್ರ ಆರ್.ಎಂ. ದೇವಾ ನಂದ್, ವಿ.ಕೆ.ಸ್ವರೂಪ, ದೀಪಿಕಾ, ಎಂ.ಪೂರ್ಣಿಮಾ, ಹೆಚ್.ವಿ.ಆಶಾ, ದೇವೇಂದ್ರ, ಬಿ.ಎನ್.ಸತೀಶ್, ಜನಾರ್ಧನ್, ಜೆಡಿಎಸ್ ಮುಖಂಡರಾದ ಎ.ಆರ್.ರಘು, ಎಸ್.ಆರ್. ನವೀನ್‌ಕುಮಾರ್, ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಪೂರ್ಣಚಂದ್ರ ತೇಜಸ್ವಿ, ಸರ್ಕಾರಿ ನೌಕರರ ಸಂಘದ ಕಾರ್ಯಾಧ್ಯಕ್ಷ ಪದ್ಮೇಶ್ ಮತ್ತಿತರರು ಅಭಿನಂದಿಸಿದರು.

ಕಾರು ಡಿಕ್ಕಿ ಹೊಡೆದು ಆಟೋ ಚಾಲಕ ಸಾವು

ನಾಗಮಂಗಲ, ಮೇ 15– ಯೂಟರ್ನ್ ತೆಗೆದುಕೊಳ್ಳುತ್ತಿದ್ದ ವೇಳೆ ಆಟೋಗೆ ಕಾರೊಂದು ಡಿಕ್ಕಿ ಹೊಡೆದ ರಭಸಕ್ಕೆ ಆಟೋ ಚಾಲಕ ಮೃತಪಟ್ಟ ಘಟನೆ ಪಟ್ಟಣದ ಸಾರ್ವಜನಿಕ ಆಸ್ಪತ್ರೆಯ ಬಳಿ ನಡೆದಿದ್ದು, ಚಾಲಕ ಕಾರು ನಿಲ್ಲಿಸದೆ ಪರಾರಿಯಾಗಿದ್ದಾನೆ.

ಶನಿವಾರ ಮಧ್ಯಾಹ್ನ 12 ಘಂಟೆ ಸಮಯದಲ್ಲಿ ಮಾಯಣ್ಣಗೌಡನಕೊಪ್ಪಲಿನ ವೆಂಕಟರಮಣೇಗೌಡರ ಮಗ ಗಿರೀಗೌಡ ತನ್ನ ಆಟೋವನ್ನು ಟಿ.ಬಿ. ಬಡಾವಣೆಯ ಸಾರ್ವಜನಿಕ ಆಸ್ಪತ್ರೆಯ ಬಳಿ ಯೂಟರ್ನ್ ತೆಗೆದುಕೊಳ್ಳುತ್ತಿದ್ದ. ಈ ಸಮಯದಲ್ಲಿ ಎದುರಿನಿಂದ ಬಂದ ಕಾರೊಂದು ಡಿಕ್ಕಿ ಹೊಡೆದಿದ್ದು, ಆಟೋ ಚಾಲಕ ಗಿರೀಗೌಡ ತೀವ್ರವಾಗಿ ಗಾಯಗೊಂಡ ತಕ್ಷಣ ಆತನನ್ನು ಬೆಳ್ಳೂರು ಕ್ರಾಸ್ ನ ಬಿಜಿಎಸ್ ಆಸ್ಪತ್ರೆಗೆ ದಾಖಲಿಸಿತಾದರೂ ಚಿಕಿತ್ಸೆ ಫಲಿಸದೆ ಮೃತಪಟ್ಟಿದ್ದಾನೆ. ಡಿಕ್ಕಿ ಹೊಡೆದ ಕಾರು ಪರಾರಿಯಾಗಿದ್ದು, ಕಾರು ಮತ್ತು ಚಾಲಕನಿಗಾಗಿ ಪೊಲೀಸರು ಬಲೆ ಬೀಸಿದ್ದು, ಪ್ರಕರಣ ಪಟ್ಟಣ ಠಾಣೆಯಲ್ಲಿ ದಾಖಲಾಗಿದೆ.

ಶುದ್ಧಕುಡಿಯುವ ನೀರಿನ ಘಟಕ ಆರಂಭಕ್ಕೆ ಆಗ್ರಹಿಸಿ ಪ್ರತಿಭಟನೆ



ಭಾರತೀನಗರ, ಮೇ 15(ಅಣ್ಣೂರು ಸತೀಶ್)– ಇಲ್ಲಿಗೆ ಸಮೀಪದ ಅಂಬರಹಳ್ಳಿ ಗ್ರಾಮದಲ್ಲಿ ಶುದ್ಧಕುಡಿಯುವ ನೀರಿನ ಘಟಕ ಸ್ಥಗಿತಗೊಂಡ ಹಿನ್ನೆಲೆಯಲ್ಲಿ ಗ್ರಾಮಸ್ಥರು ಪ್ರತಿಭಟನೆ ನಡೆಸಿದರು.

ಸುಮಾರು 15 ರಿಂದ 20 ದಿನಗಳಿಂದಲೂ ನೀರು ಬಾರದೆ ಕೆಟ್ಟು ನಿಂತಿದ್ದರೂ ಸಂಬಂಧಿಸಿದ ಗುತ್ತಿಗೆದಾರರು ಸರಿಪಡಿಸಿಲ್ಲವೆಂದು ಗ್ರಾಮಸ್ಥರು ಆಕ್ರೋಶ ವ್ಯಕ್ತಪಡಿಸಿದರು.

ಕೂಡಲೇ ಶುದ್ಧಕುಡಿಯುವ ನೀರಿನ ಘಟಕವನ್ನು ಸರಿಪಡಿಸಿ ಗ್ರಾಮಸ್ಥರಿಗೆ ಕುಡಿಯುವ ನೀರಿಗೆ ಅನುವು ಮಾಡಿ ಕೊಡಬೇಕು. ಸರ್ಕಾರ ಹಲವಾರು ಯೋಜನೆಯನ್ನು ರೂಪಿಸಿ ಗ್ರಾಮದ ಅಭಿವೃದ್ಧಿಗೆ ಶ್ರಮಿಸುತ್ತಿವೆ. ಶುದ್ಧಕುಡಿಯುವ ನೀರಿನ ಘಟಕಕ್ಕೂ ಸರ್ಕಾರ ಹೆಚ್ಚಿನ ಮಹತ್ವ ನೀಡಿದೆ. ಆದರೆ ಇಲ್ಲಿನ ಗುತ್ತಿಗೆದಾರರ ಬೇಜವಬ್ದಾರಿಯಿಂದ ನೀರಿನ ಘಟಕ ನಿಷ್ಪ್ರಯೋಜಕವಾಗಿದೆ ಎಂದು ಗ್ರಾ.ಪಂ ಸದಸ್ಯ ಎ.ಸಿ.ಮಹೇಶ್ ತಿಳಿಸಿದರು. ಇದೇ ವೇಳೆ ವಕೀಲ ಗೌರಿಶಂಕರ್, ಮುಖಂಡರಾದ ಮಧು, ಶಿವಕುಮಾರ್, ಗೀತಾಸತೀಶ್, ಪುಟ್ಟಸ್ವಾಮಿ, ನಾಗರಾಜು, ಮರಿಲಿಂಗೇಗೌಡ, ಶಂಭು, ಸವಿತ, ಕವಿತ ಸೇರಿದಂತೆ ಇತರರಿದ್ದರು.

ಗ್ಯಾಸ್ ಏಜೆನ್ಸಿಯಲ್ಲಿ ನಗದು, ಸಿಸಿ ಕ್ಯಾಮರಾ ಡಿವಿಆರ್, ಹಾರ್ಡ್ ಡಿಸ್ಕ್ ಕಳವು

ಹುಣಸೂರು, ಮೇ 15–ಗ್ಯಾಸ್ ಏಜೆನ್ಸಿಯೊಂದರ ಕಿಟಕಿ ಸರಳು ಮುರಿದು ಒಳನುಗ್ಗಿದ ಖದೀಮರು ನಗದು, ಸಿಸಿ ಕ್ಯಾಮರಾದ ಡಿವಿಆರ್ ಹಾಗೂ ಹಾರ್ಡ್ ಡಿಸ್ಕ್ ಅನ್ನು ಕಳವು ಮಾಡಿರುವ ಘಟನೆ ಹುಣಸೂರು ಪಟ್ಟಣದಲ್ಲಿ ನಡೆದಿದೆ.

ಪಟ್ಟಣದ ನಿವಾಸಿ ರಜಿನಿಮಲ್ ಎಂಬುವರ ಮಾಲೀಕತ್ವದ ಹುಣಸೂರು ಪಟ್ಟಣದ ಹಳೇ ಬಿ.ಎಂ.ರಸ್ತೆಯಲ್ಲಿರುವ ಚೌಡಾಂಬಿಕಾ ಇಂಡೇನ್ ಗ್ಯಾಸ್ ಏಜೆನ್ಸಿಗೆ ಮೇ 11ರಂದು ರಾತ್ರಿ ಕಿಟಕಿ ಸರಳು ಕತ್ತರಿಸಿ ಒಳ ನುಗ್ಗಿದ ಖದೀಮರು, ಕಚೇರಿಯ ಡ್ರಾಯರ್ ಬೀಗ ಮುರಿದು ಅದರಲ್ಲಿದ್ದ 15 ಸಾವಿರ ರೂ. ನಗದು ಕಳವು ಮಾಡಿದ್ದಲ್ಲದೇ ಸಿಸಿ ಕ್ಯಾಮರಾದ ಡಿವಿಆರ್ ಮತ್ತು ಹಾರ್ಡ್ ಡಿಸ್ಕ್ ಅನ್ನು ದೋಚಿದ್ದಾರೆ. ಅಲ್ಲದೇ ಕಚೇರಿಯಲ್ಲಿದ್ದ 2 ಸಿಸಿ ಕ್ಯಾಮರಾಗಳನ್ನು ಧ್ವಂಸ ಮಾಡಿದ್ದಾರೆ. ಈ ಸಂಬಂಧ ಹುಣಸೂರು ಪಟ್ಟಣ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ಬೈಕ್‌ಗೆ ಟ್ರಾಕ್ಟರ್ ಡಿಕ್ಕಿ: ವ್ಯಕ್ತಿ ಸಾವು

ಬೆಳ್ಳೂರು, ಮೇ 15–ಟ್ರಾಕ್ಟರ್ ಡಿಕ್ಕಿ ಹೊಡೆದ ಪರಿಣಾಮ ಬೈಕ್ ಸವಾರ ಸಾವನ್ನಪ್ಪಿದ ಘಟನೆ ನಾಗಮಂಗಲ ತಾಲೂಕು ಬೆಳ್ಳೂರು ಹೊನ್ನೇನಹಳ್ಳಿ ಮುಖ್ಯ ರಸ್ತೆಯಲ್ಲಿ ಮೇ 12ರಂದು ಸಂಜೆ ಸಂಭವಿಸಿದೆ. ನಾಗಮಂಗಲ ತಾಲೂಕು ಅಂಕನಹಳ್ಳಿ ಗ್ರಾಮದ ಕೃಷ್ಣೇಗೌಡ(60) ಅವರು ತನ್ನ ಪತ್ನಿ ಲಿಂಗಮ್ಮ ಅವರೊಂದಿಗೆ ಟಿವಿಎಸ್ ಬೈಕ್‌ನಲ್ಲಿ (ಕೆಎ 03 ಇಟಿ 5543) ತೆರಳುತ್ತಿದ್ದಾಗ ಇವರ ಬೈಕ್‌ಗೆ ಟ್ರಾಕ್ಟರ್ ಡಿಕ್ಕಿ ಹೊಡೆದಿದೆ. ಅಪಘಾತದಲ್ಲಿ ಕೃಷ್ಣೇಗೌಡರು ಮೃತಪಟ್ಟಿದ್ದು, ತೀವ್ರವಾಗಿ ಗಾಯಗೊಂಡಿರುವ ಅವರ ಪತ್ನಿ ಲಿಂಗಮ್ಮ ಅವರನ್ನು ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಈ ಸಂಬಂಧ ಬೆಳ್ಳೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮನೆ ಬೀಗ ಮುರಿದು ಕಳವು

ಹಾಸನ, ಮೇ 15–ಮನೆ ಬೀಗ ಮುರಿದು ಚಿನ್ನಾಭರಣ ಹಾಗೂ ನಗದು ಕಳವು ಮಾಡಿರುವ ಘಟನೆ ಹಾಸನ ಟೌನ್ ಕುವೆಂಪುನಗರ ಬಡಾವಣೆಯಲ್ಲಿ ನಡೆದಿದೆ. ಈ ಬಡಾವಣೆಯ ಹೆಚ್.ಎ.ಮಹಮ್ಮದ್ ಅಕ್ರಂ ಅವರು ಮೇ 5ರಂದು ಬೆಳಗ್ಗೆ ತಮ್ಮ ಮನೆಗೆ ಬೀಗ ಹಾಕಿಕೊಂಡು ಕುಟುಂಬ ಸಮೇತರಾಗಿ ಕಾರ್ಕಳಕ್ಕೆ ತೆರಳಿದ್ದಾಗ ಮರುದಿನ ಬೆಳಗ್ಗೆ ಅವರ ಸಹೋದರ ರಷೀದ್ ಅಹಮ್ಮದ್ ಕರೆ ಮಾಡಿ ಮನೆ ಬಾಗಿಲು ತೆರೆದಿರುವುದಾಗಿ ತಿಳಿಸಿದ್ದಾರೆ. ಮಹಮ್ಮದ್ ಅಕ್ರಂ ಅವರು ಕಾರ್ಕಳದಿಂದ ಹಿಂತಿರುಗಿ ಮನೆಯಲ್ಲಿ ನೋಡಿದಾಗ ಬೀರುವನ್ನು ಒಡೆದು ಅದರಲ್ಲಿದ್ದ 1.10 ಲಕ್ಷ ನಗದು ಹಾಗೂ 1.02 ಲಕ್ಷ ರೂ. ಮೌಲ್ಯದ ಚಿನ್ನಾಭರಣ ಕಳವು ಮಾಡಿರುವುದು ಗೊತ್ತಾಗಿದೆ. ಈ ಸಂಬಂಧ ಹಾಸನ ಎಕ್ಸ್‌ಟೆನ್ಷನ್ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ಶಾಲೆ ಬೀಗ ಮುರಿದು ಕಂಪ್ಯೂಟರ್ ಕಳವು

ಮೈಸೂರು, ಮೇ 15– ಸರ್ಕಾರಿ ಶಾಲೆ ಬೀಗ ಮುರಿದು ಕಂಪ್ಯೂಟರ್‌ಗಳನ್ನು ಕಳವು ಮಾಡಿರುವ ಪ್ರಕರಣ ಮೈಸೂರಿನ ಬನ್ನಿಮಂಟಪದಲ್ಲಿ ನಡೆದಿದೆ.

ಬನ್ನಿಮಂಟಪ ಹುಡ್ಕೋದಲ್ಲಿರುವ ಸರ್ಕಾರಿ ಪ್ರೌಢಶಾಲೆಯಲ್ಲಿ ಮೇ 12 ರಂದು ಮಧ್ಯಾಹ್ನ ಬೀಗ ಹಾಕಿಕೊಂಡು ಹೋಗಿದ್ದು, ಮೇ 14ರಂದು ಬೆಳಗ್ಗೆ ಶಿಕ್ಷಕರು ಬಂದಾಗ ಶಾಲೆಯಲ್ಲಿ ಕಳ್ಳತನವಾಗಿರುವುದು ಬೆಳಕಿಗೆ ಬಂದಿದೆ. ಶಾಲೆಯ ಒಂದು ಕೊಠಡಿಯ ಬೀಗ ಮುರಿದಿರುವ ಖದೀಮರು, ಡೆಲ್ ಕಂಪನಿಯ ಒಂದು ಮಾನಿಟರ್, ಸಿಪಿಯು ಮುಂತಾದವನ್ನು ಕಳವು ಮಾಡಿದ್ದು, ಮೂರನೇ ಮಹಡಿಯ ಕಂಪ್ಯೂಟರ್ ಕೊಠಡಿಯ ಬಾಗಿಲು ಮುರಿದು 9 ಮಾನಿಟರ್ ಮತ್ತು ಸಿಪಿಯುಗಳಲ್ಲಿ ಒಂದು ಮಾನಿಟರ್ ಅನ್ನು ಕಳವು ಮಾಡಿದ್ದಾರೆ ಎಂದು ಶಾಲೆಯ ಮುಖ್ಯ ಶಿಕ್ಷಕಿ ರುಕ್ಮಿಣಿ ನೀಡಿದ ದೂರನ್ನು ದಾಖಲಿಸಿಕೊಂಡಿರುವ ನರಸಿಂಹರಾಜ ಠಾಣೆ ಪೊಲೀಸರು ತನಿಖೆ ಮುಂದುವರೆಸಿದ್ದಾರೆ.

ಗೃಹಿಣಿ ಸರ ಅಪಹರಣ

ಮೈಸೂರು, ಮೇ 15– ದೇವಸ್ಥಾನದಿಂದ ಹಿಂತಿರುಗುತ್ತಿದ್ದ ಗೃಹಿಣಿಯ ಮಾಂಗಲ್ಯ ಸರ ಕಸಿದು ಪರಾರಿಯಾಗಿರುವ ಘಟನೆ ಮೈಸೂರಿನ ಸಿದ್ಧಾರ್ಥ ನಗರದ ಜ್ಞಾನ ಮಾರ್ಗದಲ್ಲಿ ಮೇ 12ರಂದು ನಡೆದಿದೆ. ಜ್ಞಾನ ಮಾರ್ಗದ ನಿವಾಸಿ ಲಕ್ಷ್ಮೀ ಅರಸ್ ಅವರು ವಿನಯ ಮಾರ್ಗದ ಗಣಪತಿ ದೇವಸ್ಥಾನಕ್ಕೆ ತೆರಳಿ ಅಂದು ರಾತ್ರಿ 8.45ರಲ್ಲಿ ಮನೆಗೆ ಹಿಂತಿರುಗುತ್ತಿದ್ದಾಗ ಬೈಕ್‌ನಲ್ಲಿ ಹೆಲ್ಮೆಟ್ ಧರಿಸಿ ಬಂದ ಇಬ್ಬರು ಖದೀಮರು ಅವರ ಕತ್ತಿನಲ್ಲಿದ್ದ 40 ಗ್ರಾಂ ತೂಕದ ಮಾಂಗಲ್ಯ ಸರವನ್ನು ಕಿತ್ತುಕೊಂಡು ಪರಾರಿಯಾಗಿದ್ದಾರೆ. ಈ ಸಂಬಂಧ ನಜರ್‌ಬಾದ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಪತಿ, ಆತ ಅಕ್ರಮ ಸಂಬಂಧ ಹೊಂದಿರುವ ಮಹಿಳೆ, ಆಕೆಯ ಪುತ್ರರ ವಿರುದ್ಧ ಪೊಲೀಸರಿಗೆ ಗೃಹಿಣಿ ದೂರು

ಕ್ರೈಂ ಬಾಕ್ಸ್

ಮೈಸೂರು, ಮೇ 15–ತನ್ನ ಪತಿ ಮತ್ತು ಆತ ಅಕ್ರಮ ಸಂಬಂಧ ಹೊಂದಿರುವ ಮಹಿಳೆ, ಜೊತೆಗೆ ಆಕೆಯ ಇಬ್ಬರು ಮಕ್ಕಳು ತನಗೆ ದೈಹಿಕ ಹಾಗೂ ಮಾನಸಿಕ ಕಿರುಕುಳ ನೀಡಿ, ಹೆಚ್ಚಿನ ವರದಕ್ಷಿಣೆ ತರುವಂತೆ ಪೀಡಿಸುತ್ತಿದ್ದಾರೆಂದು ಗೃಹಿಣಿಯೋರ್ವರು ಮೈಸೂರಿನ ಮಹಿಳಾ ಠಾಣೆಗೆ ದೂರು ಸಲ್ಲಿಸಿದ್ದಾರೆ.

ಮೈಸೂರಿನ ವಿವೇಕಾನಂದ ನಗರದಲ್ಲಿ ವಾಸವಿರುವ ಗೃಹಿಣಿ ಶಶಿಕಲಾ(35) ಅವರು ತನಗೆ ಟಿ.ಕೆ.ಲೇಔಟ್‌ನ ಹೆಚ್.ಸಿ.ಸೋಮಶೇಖರ್(42) ಅವರೊಂದಿಗೆ 2002ರ ಜೂನ್ 30ರಂದು ವಿವಾಹವಾಗಿದ್ದು, ಆ ವೇಳೆ ಸಾಕಷ್ಟು ವರದಕ್ಷಿಣೆ ನೀಡಲಾಗಿದೆ. ನಮಗೆ ಇಬ್ಬರು ಗಂಡು ಮಕ್ಕಳಿದ್ದು, ನಾವು ವಾಸವಿದ್ದ ರಾಮಕೃಷ್ಣನಗರದ ಮನೆಗೆ ಬಂದು 50 ವರ್ಷದ ಮಹಿಳೆ ಹಾಗೂ 30 ಮತ್ತು 34 ವರ್ಷದ ಆಕೆಯ ಇಬ್ಬರು ಪುತ್ರರು ನೆಲೆಸಿದರು. ಅದರ ಬಗ್ಗೆ ವಿಚಾರಿಸಿದಾಗ ಆಕೆಯನ್ನು ತಾನು ಮದುವೆಯಾಗಿರುವುದಾಗಿ ಪತಿ ತಿಳಿಸಿದ್ದರು ಎಂದು ದೂರಿನಲ್ಲಿ ಹೇಳಿದ್ದಾರೆ.

ಚಾಲಕನಾಗಿರುವ ಪತಿ ಸ್ವಂತ ಬಸ್ ಖರೀದಿಸಲು ತನ್ನ ಮಾಂಗಲ್ಯ ಸರ ಮತ್ತಿತರ ಒಡವೆಗಳನ್ನು ಗಿರವಿ ಇಟ್ಟಿದ್ದು, ತನ್ನ ಮನೆಯ ಖರ್ಚು–ವೆಚ್ಚಕ್ಕೆ ಯಾವುದೇ ರೀತಿಯ ಹಣ ನೀಡುತ್ತಿಲ್ಲ. ಅಲ್ಲದೇ ಬಸ್ ಮೇಲಿನ ಸಾಲದ ಕಂತನ್ನು ಕಟ್ಟಲು ತವರು ಮನೆಯಿಂದ ಹಣ ತಂದು ಕೊಡುವಂತೆ ಪೀಡಿಸುತ್ತಿದ್ದಾನೆ. ಆತನ ಜೊತೆ ಅಕ್ರಮ ಸಂಬಂಧ ಹೊಂದಿರುವ ಮಹಿಳೆ ಮತ್ತು ಚಾಲಕರಾಗಿರುವ ಆಕೆಯ ಇಬ್ಬರು ಮಕ್ಕಳೂ ಸೇರಿಕೊಂಡು ತವರು ಮನೆಯಿಂದ ವರದಕ್ಷಿಣೆ ಹಣ ತರದೇ ಹೋದರೆ, ತನ್ನನ್ನು ಹಾಗೂ ಮಕ್ಕಳನ್ನು ಕೊಲೆ ಮಾಡುವುದಾಗಿ ಬೆದರಿಕೆ ಹಾಕುತ್ತಿದ್ದಾರೆಂದು ದೂರು ನೀಡಿದ್ದು, ಗೃಹಿಣಿಯ ಪತಿ ಹಾಗೂ ಇನ್ನಿತರ ಮೂವರ ವಿರುದ್ಧ ಮಹಿಳಾ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ವೃದ್ಧೆ ಮರುಳು ಮಾಡಿ ನಕಲಿ ಚಿನ್ನಾಭರಣ ನೀಡಿ ಅಸಲಿ ಆಭರಣ ದೋಚಿದ ವಂಚಕಿ

ಹುಣಸೂರು, ಮೇ 15–ವಂಚಕಿಯೋರ್ವಳು ವೃದ್ಧೆಯನ್ನು ಮಾತಿನಲ್ಲೇ ಮರುಳು ಮಾಡಿ ನಕಲಿ ಚಿನ್ನದ ಕಾಸಿನ ಸರವನ್ನು ನೀಡಿ ಅಸಲಿ ಚಿನ್ನಾಭರಣಗಳನ್ನು ದೋಚಿರುವ ಘಟನೆ ಹುಣಸೂರು ಪಟ್ಟಣದ ಎಂ.ಎಸ್.ಫಂಕ್ಷನ್ ಹಾಲ್ ಎದುರಿನ ಮೈದಾನದಲ್ಲಿ ನಡೆದಿದೆ.

ಹುಣಸೂರು ತಾಲೂಕು ತಿಪ್ಪಲಾಪುರ ಗ್ರಾಮದ ಸುಶೀಲಮ್ಮ(65) ಚಿನ್ನಾಭರಣ ಕಳೆದುಕೊಂಡವರಾಗಿದ್ದು, ಮೇ 13ರಂದು ಗ್ರಾಮದಲ್ಲಿ ದೊಡ್ಡಮ್ಮನ ಹಬ್ಬ ಇದ್ದುದರಿಂದ ಅಂಗಡಿಯಲ್ಲಿ ಸಾಮಾನುಗಳನ್ನು ತೆಗೆದುಕೊಂಡು ಹೋಗಲು ಮೇ 12ರಂದು ಬೆಳಗ್ಗೆ ಹುಣಸೂರಿಗೆ ಬಂದಿದ್ದಾರೆ. ಅವರು ಬಜಾರ್ ರಸ್ತೆಯ ಮಸೀದಿ ಎದುರು ತೆರಳುತ್ತಿದ್ದಾಗ ಎದುರಿಗೆ ಸಿಕ್ಕಿದ ಮಹಿಳೆಯೋರ್ವಳು ವಿಕ್ರಂ ಆಸ್ಪತ್ರೆ ಎಲ್ಲಿದೆ ತೋರಿಸಿ ಎಂದು ವೃದ್ಧೆಯನ್ನು ಕೇಳಿದ್ದಾಳೆ. ಅವರು ಶಿವ ಮೆಡಿಕಲ್ ಶಾಪ್ ಸರ್ಕಲ್‌ವರೆಗೆ ಕರೆದುಕೊಂಡು ಹೋಗಿ ಇದೇ ರಸ್ತೆಯಲ್ಲೇ ಹೋದರೆ ಆಸ್ಪತ್ರೆ ಸಿಗುತ್ತದೆ ಎಂದು ಹೇಳಿದಾಗ ಆಸ್ಪತ್ರೆಯಲ್ಲಿ ರೋಗಿ ಇದ್ದಾರೆ. ಅವರನ್ನು ಕರೆದುಕೊಂಡು ಹೋಗಬೇಕು, ನೀವೂ ಬನ್ನಿ ಎಂದು ವೃದ್ಧೆಯನ್ನು ಕರೆದೊಯ್ದಿದ್ದಾಳೆ.

ಹಾಗೆ ಹೋಗುವಾಗ ಎಂ.ಎಸ್.ಫಂಕ್ಷನ್ ಹಾಲ್ ಮುಂಭಾಗವಿರುವ ಮೈದಾನದ ಮರದ ಕೆಳಗೆ ವೃದ್ಧೆಯನ್ನು ಕೂರಿಸಿ ತನ್ನ ಬಳಿ ಇದ್ದ ಕಾಸಿನ ಸರವನ್ನು ತೋರಿಸಿ, ಇದರ ಬೆಲೆ 2–3 ಲಕ್ಷ ರೂ. ಆಗುತ್ತದೆ. ನನ್ನ ತಂಗಿಯನ್ನು ಆಸ್ಪತ್ರೆಗೆ ತೋರಿಸಬೇಕು. ಅರ್ಜೆಂಟಾಗಿ ಹಣ ಬೇಕಾಗಿರುವುದರಿಂದ ಕಾಸಿನ ಸರ ಇಟ್ಟುಕೊಂಡು ಹಣ ಕೊಡಿ ಎಂದು ಕೇಳಿದ್ದಾಳೆ. ಅದೇ ವೇಳೆಗೆ ಅಲ್ಲಿಗೆ ವ್ಯಕ್ತಿಯೋರ್ವ ಕಾಸಿನ ಸರವನ್ನು ಟೆಸ್ಟ್ ಮಾಡುವಂತೆ ನಟಿಸಿ, ಇದು ಅಸಲಿ ಚಿನ್ನವಾಗಿದ್ದು, 10 ಸಾವಿರ ರೂ. ಕೊಡುವುದಾಗಿ ಹೇಳಿದಾಗ ಆತನಿಗೆ ಸರ ಕೊಡಲು ನಿರಾಕರಿಸಿದ ವಂಚಕಿ, ಆ ವ್ಯಕ್ತಿ ಅತ್ತ ಹೋದ ನಂತರ ವೃದ್ಧೆಗೆ ಕಾಸಿನ ಸರವನ್ನು ಕೊಟ್ಟು ಅವರ ಬಳಿ ಇದ್ದ 10 ಗ್ರಾಂ ತೂಕದ ಚಿನ್ನಾಭರಣ ಮತ್ತು 5 ಸಾವಿರ ರೂ.ಗಳನ್ನು ತೆಗೆದುಕೊಂಡು ಜಾಗ ಖಾಲಿ ಮಾಡಿದ್ದಾಳೆ. ನಂತರ ವೃದ್ಧೆಯು ಹುಣಸೂರಿನ ಚಿನ್ನದ ಅಂಗಡಿಯಲ್ಲಿ ತೋರಿಸಿದಾಗ ಕಾಸಿನ ಸರ ನಕಲಿ ಚಿನ್ನ ಎಂಬುದು ಗೊತ್ತಾಗಿದೆ. ಈ ಸಂಬಂಧ ಹುಣಸೂರು ಪಟ್ಟಣ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರೆಸಿದ್ದಾರೆ.

ಮನೆಯಲ್ಲಿದ್ದ ಚಿನ್ನಾಭರಣ ಕಳವು

ನಾಗಮಂಗಲ, ಮೇ 15– ಮನೆಗೆ ನುಗ್ಗಿ ಚಿನ್ನಾಭರಣ ಕಳವು ಮಾಡಿದ ಘಟನೆ ನಾಗಮಂಗಲ ತಾಲೂಕು ಚಿಣ್ಯ ಗ್ರಾಮದಲ್ಲಿ ನಡೆದಿದೆ. ಈ ಗ್ರಾಮದ ನಿವಾಸಿ ತಿಮ್ಮರಾಯಶೆಟ್ಟಿ ಅವರ ಪತ್ನಿ ಶ್ರೀಮತಿ ಸಾವಿತ್ರಿ ಅವರು ಸಹಜವಾಗಿ ಬೀರು ಕೀ ಅನ್ನು ಅಕ್ಕಿ ಡಬ್ಬದಲ್ಲಿ ಇಡುತ್ತಾರೆ. ಮೇ 11ರಂದು ಮಧ್ಯಾಹ್ನ 12.30ರ ಸುಮಾರಿನಲ್ಲಿ ಮನೆಗೆ ಬೀಗ ಹಾಕಿಕೊಂಡು ತನ್ನ ಅಣ್ಣನ ಮನೆಗೆ ಹೋಗಿ ಸಂಜೆ 6 ಗಂಟೆಗೆ ಬಂದು ಬಾಗಿಲು ತೆರೆದಾಗ ಹಾಲ್‌ನಲ್ಲಿದ್ದ ಬೀರುವಿನಲ್ಲಿ ಕೀ ಇದ್ದಿದ್ದನ್ನು ಕಂಡು ಬೀರು ತೆರೆದು ನೋಡಿದಾಗ ಅದರಲ್ಲಿದ್ದ 30 ಗ್ರಾಂ ತೂಕದ ಮಾಂಗಲ್ಯ ಸರ, 9 ಗ್ರಾಂ ಚಿನ್ನದ ಸರ, 5 ಗ್ರಾಂನ ಚಿನ್ನದ ಡಾಲರ್, 44 ಗ್ರಾಂನ ಲಕ್ಷ್ಮೀ ಓಲೆಗಳು ಕಳುವಾಗಿರುವುದು ಗೊತ್ತಾಯಿತು ಎಂದು ತಿಮ್ಮರಾಯಶೆಟ್ಟಿ ನೀಡಿದ ದೂರನ್ನು ದಾಖಲಿಸಿಕೊಂಡಿರುವ ನಾಗಮಂಗಲ ಠಾಣೆ ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

ನಂಜನಗೂಡಿನಿಂದ ಮಹಿಳೆ ನಾಪತ್ತೆ

ಮೈಸೂರು, ಮೇ 15– ನಂಜನಗೂಡು ತಾಲೂಕಿನ ಹುಲ್ಲಹಳ್ಳಿ ಗ್ರಾಮದ ನಾಯಕರ ಬೀದಿಯಲ್ಲಿ ವಾಸವಾಗಿದ್ದ ಅಂಜಲಿ (21) ಎಂಬುವರು ಮೇ 10ರಿಂದ ನಂಜನಗೂಡಿನಿಂದ ಕಾಣೆಯಾಗಿದ್ದಾರೆ ಎಂದು ನಂಜನಗೂಡು ಪಟ್ಟಣ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ಇವರ ಬಗ್ಗೆ ಮಾಹಿತಿ ತಿಳಿದಲ್ಲಿ ಎಸ್.ಪಿ. ಸಾಹೇಬರು ಮೈಸೂರು ದೂ.ಸಂ:0821–2520040, ಮೈಸೂರು ಜಿಲ್ಲಾ ನಿಸ್ತಂತು ಕೊಠಡಿ ದೂ.ಸಂ: 0821–2444800, ನಂಜನಗೂಡು ಪಟ್ಟಣ ಪೊಲೀಸ್ ಠಾಣೆ ದೂ.ಸಂ: 08221–228383 nanjangudtownmys@ksp.gov.in ವೆಬ್‌ಸೈಟ್ ಅನ್ನು ಸಂಪರ್ಕಿಸಬಹುದು ಎಂದು ನಂಜನಗೂಡು ಪಟ್ಟಣ ಪೊಲೀಸ್ ಠಾಣೆಯ ಆರಕ್ಷಕ ಉಪ ನಿರೀಕ್ಷಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಂಡ್ಯ ಬಳಿ ಕಾರು ಅಡ್ಡಗಟ್ಟಿ 20 ಲಕ್ಷ ರೂ. ದರೋಡೆ

ಮಂಡ್ಯ,ಮೇ 15(ಮೋಹನ್‌ರಾಜ್)– ಕಾರು ಅಡ್ಡಗಟ್ಟಿದ ದುಷ್ಕರ್ಮಿಗಳ ತಂಡ ಹಣ ಹಾಗೂ ಕಾರನ್ನು ದೋಚಿರುವ ಘಟನೆ ತಾಲೂಕಿನ ಹೊಸ ಬೂದನೂರು ಬಳಿ ನಡೆದಿದೆ. ಬೆಂಗಳೂರು–ಮೈಸೂರು ರಾಷ್ಟ್ರೀಯ ಹೆದ್ದಾರಿಯಲ್ಲಿ ಮಾರಕಾಸ್ತ್ರಗಳಿಂದ ಹಲ್ಲೆ ನಡೆಸಿ 20 ಲಕ್ಷ ಹಣ ಹಾಗೂ ಕಾರಿನ ಜೊತೆಯಲ್ಲೇ ಪರಾರಿಯಾಗಿದ್ದಾರೆ. ಹ್ಯೂಂಡಾಯ್ ಕ್ರೇಟಾ ಕಾರಿನಲ್ಲಿ ಬಂದು ಅಡ್ಡಗಟ್ಟಿ ಈ ಕೃತ್ಯ ಎಸಗಿದ್ದಾರೆ.

ನಿಲೇಶ್ ಹಾಗೂ ಅವರ ಸ್ನೇಹಿತ ಋಷಿಕೇಶ್ 20 ಲಕ್ಷ ರೂ.ಗಳನ್ನು ತೆಗೆದುಕೊಂಡು ಬೆಂಗಳೂರಿನಿಂದ ಬೆಂಗಳೂರಿನ ಚಿನ್ನದ ವ್ಯಾಪಾರಿಯೊಬ್ಬರಿಂದ 20 ಲಕ್ಷ ನಗದು ಪಡೆದುಕೊಂಡು ಕೇರಳಕ್ಕೆ ತೆರಳುತ್ತಿದ್ದರು.

ಈ ವೇಳೆ ಕಾರು ಹೊಸ ಬೂದನೂರು ಬಳಿ ಬರುತ್ತಿದ್ದಂತೆ 6 ಮಂದಿ ದುಷ್ಕರ್ಮಿಗಳು ಕಾರನ್ನು ಅಡ್ಡಗಟ್ಟಿದ್ದಾರೆ. ಸುತ್ತಿಗೆ ಹಾಗೂ ರಾಡ್‌ನಿಂದ ದರೋಡೆಕೋರರು ಹಲ್ಲೆ ನಡೆಸಿದ್ದಾರೆ. ಹಲ್ಲೆಯ ಬಳಿಕ ಸ್ವಿಫ್ಟ್ ಕಾರಿನ ಸಮೇತ ಎಸ್ಕೇಪ್ ಆಗಿದ್ದಾರೆ.

ಮಂಡ್ಯ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ದರೋಡೆಕೋರರ ಬಂಧನಕ್ಕಾಗಿ 7 ವಿಶೇಷ ತಂಡಗಳನ್ನು ರಚನೆ ಮಾಡಲಾಗಿದೆ. ಬೆಂಗಳೂರು–ಕೇರಳ ಸೇರಿದಂತೆ ಇತರೆಡೆಗೆ ತಂಡಗಳು ತೆರಳಿ ಆರೋಪಿಗಳ ಪತ್ತೆಗೆ ಬಲೆ ಬೀಸಿದ್ದಾರೆ. ಶೀಘ್ರ ಆರೋಪಿಗಳನ್ನು ಪತ್ತೆ ಹಚ್ಚಲಾಗುವುದು ಎಂದು ಜಿಲ್ಲಾ ಪೊಲೀಸ್ ಅಧೀಕ್ಷಕ ಎನ್. ಯತೀಶ್ ತಿಳಿಸಿದ್ದಾರೆ.

ದಾದಿಯರ ಸೇವೆ ಅವಿಸ್ಮರಣೀಯ



ಹನೂರು, ಮೇ 15(ಸೋಮು)– ದಾದಿಯರ ಸೇವೆ ಅವಿಸ್ಮರಣೀಯವಾದದ್ದು. ಇವರ ಸೇವೆಯ ಮಹತ್ವ ಕೊರೊನಾದಂತಹ ಮಾರಕ ರೋಗದಿಂದ ಎಲ್ಲರಿಗೂ ತಿಳಿಯುವಂತಾಗಿದೆ ಎಂದು ಕ್ರೈಸ್ತ ಧರ್ಮ ಗುರುಗಳಾದ ಫಾದರ್ ಅಗಸ್ಟಿನ್ ಹೇಳಿದರು.

ಸಮೀಪದ ಕಾಮಗೆರೆ ಹೋಲಿಕ್ರಾಸ್ ಆಸ್ಪತ್ರೆಯಲ್ಲಿ ಏರ್ಪಡಿಸಲಾಗಿದ್ದ ಅಂತಾರಾಷ್ಟ್ರೀಯ ವಿಶ್ವ ದಾದಿಯರ ದಿನ ಆಚರಣೆಯಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಕೊರೊನಾದಂತಹ ಸಂದರ್ಭದಲ್ಲಿ ತಮ್ಮ ಪ್ರಾಣವನ್ನು ಲೆಕ್ಕಿಸದೇ ಕುಟುಂಬ ತೊರೆದು ತಮ್ಮ ಕರ್ತವ್ಯವನ್ನು ಅಚ್ಚುಕಟ್ಟಾಗಿ ನಿಭಾಯಿಸಿದ್ದಾರೆ. ಈ ಸೇವೆಗೆ ಬೆಲೆ ಕಟ್ಟಲು ಸಾಧ್ಯವಿಲ್ಲ ಎಂದರು.

ಸಂಸ್ಥೆಯ ಆಡಳಿತಾಧಿಕಾರಿ ಸಿಸ್ಟರ್ ಡೆಲಿನಾ ಮಾತನಾಡಿ, ದಾದಿಯರು ವೈದ್ಯರಿಗಿಂತ ಮಿಗಿಲಾಗಿ ರೋಗಿಗಳ ಶುಶ್ರೂಷೆ ಮಾಡುವಲ್ಲಿ ಮಹತ್ವ ಪಾತ್ರ ವಹಿಸುತ್ತಾರೆ. ಫ್ಲಾರೆನ್ಸ್ ನೈಟಿಂಗೇಲ್ ದಾದಿಯಾಗಿ ಮನುಕುಲಕ್ಕೆ ನೀಡಿದ ಸೇವೆ ಪ್ರಸ್ತುತ ದಿನದಲ್ಲಿ ಅವಿಸ್ಮರಣೀಯ. ಅವರ ಹುಟ್ಟುಹಬ್ಬವನ್ನು ವಿಶ್ವದಾದಿಯರ ದಿನವನ್ನಾಗಿ ಆಚರಿಸುತ್ತಿರುವುದು ಅವರಿಗೆ ಮತ್ತು ಇಂದು ಸೇವೆ ಸಲ್ಲಿಸುತ್ತಿರುವ ದಾದಿಯರಿಗೆ ಸ್ಫೂರ್ತಿ ಮತ್ತು ಗೌರವವಾಗಿದೆ ಎಂದರು.

ಈ ಸಂದರ್ಭದಲ್ಲಿ ವೈದ್ಯರು, ದಾದಿಯರು, ಆಸ್ಪತ್ರೆ ಇನ್ನಿತರೆ ಅಧಿಕಾರಿಗಳು ಮತ್ತು ಸಿಬ್ಬಂದಿ ಇದ್ದರು.

ಶ್ರೀಕ್ಷೇತ್ರ ಸ್ಕಂದಗಿರಿ: ಅದ್ದೂರಿ ಪಾರ್ವತಾಂಬ ರಥೋತ್ಸವ



ಗುಂಡ್ಲುಪೇಟೆ, ಮೇ 15(ಸೋಮ್.ಜಿ)– ತಾಲೂಕಿನ ಪ್ರಸಿದ್ಧ ಧಾರ್ಮಿಕ ಶ್ರೀಕ್ಷೇತ್ರ ಸ್ಕಂದಗಿರಿ ಪಾರ್ವತಾಂಬ ಸಮೇತ ಸೋಮೇಶ್ವರ ರಥೋತ್ಸವ ಸಾವಿರಾರು ಭಕ್ತರ ಸಮ್ಮುಖದಲ್ಲಿ ಭಾನುವಾರ ವಿಜೃಂಭಣೆಯಿಂದ ಜರುಗಿತು.

ಕಳೆದ ಎರಡು ವರ್ಷಗಳಿಂದ ಕೊರೊನಾ ನಿಂತು ಹೋಗಿದ್ದ ರಥೋತ್ಸವವನ್ನು ಈ ಬಾರಿ ಅದ್ದೂರಿಯಾಗಿ ಆಚರಿಸಲಾಯಿತು. ಈ ಹಿನ್ನೆಲೆಯಲ್ಲಿ ದೇವಾಲಯಕ್ಕೆ ಸುಣ್ಣ, ಬಣ್ಣ ಬಳಿದು, ತಳಿರು, ತೋರಣ ವಿದ್ಯುತ್ ದೀಪಗಳಿಂದ ಅಲಂಕರಿಸಲಾಗಿತ್ತು. ರಾಜ್ಯದ ನಾನಾ ಕಡೆಗಳು ಸೇರಿದಂತೆ ತಾಲೂಕಿನ ಸುತ್ತಮುತ್ತಲ ಗ್ರಾಮಗಳಾದ ಕಂದೇಗಾಲ, ಮೊಳ್ಳಯ್ಯನಹುಂಡಿ, ಬೆಟ್ಟಹಳ್ಳಿ, ಶಿಂಡನಪುರ ಗ್ರಾಮಗಳಿಂದ ಆಗಮಿಸಿದ್ದ ಸಾವಿರಾರು ಭಕ್ತರು ಬೆಳಗಿನಿಂದಲೇ ಸಾಲಿನಲ್ಲಿ ನಿಂತು ಪೂಜೆ ಸಲ್ಲಿಸಿದರು.

ಚಾಮರಾಜನಗರದ ಚಾಮರಾಜೇಶ್ವರ ಸ್ವಾಮಿ ದೇವಸ್ಥಾನದ ಪ್ರಧಾನ ಅರ್ಚಕ ನಾಗರಾಜ ದೀಕ್ಷಿತರ ಸಾರಥ್ಯದಲ್ಲಿ ಬೆಳಗ್ಗೆ ದೇವಾಲಯದಲ್ಲಿ ಮೂಲ ವಿಗ್ರಹ ಹಾಗೂ ಉತ್ಸವ ಮೂರ್ತಿಗಳಿಗೆ ವಿವಿಧ ವರ್ಣದ ಹೂವುಗಳಿಂದ ಅಲಂಕರಿಸಿ ವಿಶೇಷ ಪೂಜೆ ಸಲ್ಲಿಸಲಾಯಿತು. ಬಳಿಕ, ಬೆಳಗ್ಗೆ 11 ಗಂಟೆಯಲ್ಲಿ ರಥೋತ್ಸವಕ್ಕೆ ತಹಸೀಲ್ದಾರ್ ಸಿ.ಜಿ.ರವಿಶಂಕರ್ ಚಾಲನೆ ನೀಡಿದರು. ಶ್ರೀಸೋಮೇಶ್ವರ ಸಮೇತ ಪಾರ್ವತಿ ದೇವಿಯ ಉತ್ಸವ ಮೂರ್ತಿ ರಥದ ಮೇಲಿರಿಸಿ ಬೆಟ್ಟದ ತಪ್ಪಲಿನಲ್ಲಿ ಸಾವಿರಾರು ಭಕ್ತರ ಜೈಕಾರದೊಂದಿಗೆ ರಥೋತ್ಸವವನ್ನು ನೆರವೇರಿಸಲಾಯಿತು. ಈ ವೇಳೆ ಕ್ಷೇತ್ರದ ಶಾಸಕ ಸಿ.ಎಸ್.ನಿರಂಜನಕುಮಾರ್, ಕಾಂಗ್ರೆಸ್ ಮುಖಂಡ ಹೆಚ್.ಎಂ.ಗಣೇಶ್ ಪ್ರಸಾದ್ ದೇವಿಯ ದರ್ಶನ ಪಡೆದರು.

ಈ ವೇಳೆ ಸಾಲು ಸಾಲಾಗಿ ಬರುತ್ತಿದ್ದ ವಾಹನಗಳನ್ನು ನಿಯಂತ್ರಿಸಲು ಪೊಲೀಸರು ಹರಸಾಹಸ ಮಾಡಬೇಕಾಯಿತು. ಅಕ್ಕಪಕ್ಕದ ಹಾಗೂ ತಾಲೂಕಿನ ವಿವಿಧ ಗ್ರಾಮಗಳ ಭಕ್ತರು ಆಗಮಿಸಿ ಉತ್ಸವಮೂರ್ತಿ ಮತ್ತು ರಥಕ್ಕೆ ಪೂಜೆ ಸಲ್ಲಿಸಿ ದರ್ಶನ ಪಡೆದರು.

ಚಾಮರಾಜನಗರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಮೊದಲನೇ ವರ್ಷದ ಘಟಿಕೋತ್ಸವ

ವೈದ್ಯಕೀಯ ವೃತ್ತಿಯಲ್ಲಿ ಸೇವಾ ಮನೋಭಾವ ಹೆಚ್ಚಿಸಿಕೊಳ್ಳಿ

ಬೆಂಗಳೂರಿನ ರಾಜೀವ್‌ಗಾಂಧಿ ವಿಶ್ವವಿದ್ಯಾಲಯದ ಉಪಕುಲಪತಿ ಡಾ.ಎಂ.ಕೆ.ರಮೇಶ್ ಸಲಹೆ



ವೈದ್ಯಕೀಯ ವೃತ್ತಿಯಲ್ಲಿ ಏನು, ಯಾಕೆ, ಹೇಗೆ ಎಂಬ ಕುತೂಹಲ ಇರಬೇಕು. ನಾವಿರುವ ಸ್ಥಳದಲ್ಲಿ ಕೆಲಸವನ್ನು ಶ್ರದ್ಧೆ ನಿಷ್ಠೆಯಿಂದ ಮಾಡಿದಾಗ ಸೇವೆ ಯಲ್ಲಿ ಸಾರ್ಥಕತೆ ದೊರೆಯಲಿದೆ. ವೃತ್ತಿಯನ್ನು ಗೌರವಿಸಿ ಅದರಲ್ಲೇ ನೆಮ್ಮದಿ ಕಾಣಬೇಕು. ಉತ್ತಮ ಪರಿಣಿತಿ ಪಡೆದಿರುವ ನಿಮ್ಮಲ್ಲಿ ಇಂದಿನಿಂದ ಬದಲಾವಣೆ ಆರಂಭವಾಗಲಿದೆ.
–ಡಾ.ಎಂ.ಕೆ.ರಮೇಶ್, ಕುಲಪತಿಗಳು, ಬೆಂಗಳೂರಿನ ರಾಜೀವ್‌ಗಾಂಧಿ ವಿವಿ

ಚಾಮರಾಜನಗರ, ಮೇ 15– ವೈದ್ಯಕೀಯ ವೃತ್ತಿಯಲ್ಲಿ ಯಾವುದೇ ಪ್ರಲೋಭನೆಗೆ ಒಳಗಾಗದೇ ನಿಷ್ಠೆಯಿಂದ ಸೇವಾ ಮನೋಭಾವ ಹೆಚ್ಚಿಸಿಕೊಳ್ಳಬೇಕು ಎಂದು ಬೆಂಗಳೂರಿನ ರಾಜೀವ್‌ಗಾಂಧಿ ವಿಶ್ವವಿದ್ಯಾಲಯದ ಕುಲಪತಿ ಡಾ.ಎಂ.ಕೆ.ರಮೇಶ್ ಸಲಹೆ ನೀಡಿದರು.

ನಗರದ ಹೊರವಲಯದ ಯಡಪುರದ ಬಳಿಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಆವರಣದಲ್ಲಿ ನಡೆದ ಚಾಮರಾಜನಗರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಮೊದಲನೇ ವರ್ಷದ ಘಟಿಕೋತ್ಸವ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

ವೈದ್ಯಕೀಯ ಪದವಿ ಪಡೆದು ಉತ್ತಮ ವೈದ್ಯರಾಗುವತ್ತ ಸಾಗಿದ್ದೀರಿ, ತಾವು ಪಡೆದಿರುವ ಪದವಿಯ ಹಿಂದೆ ಹಲವರ ಶ್ರಮವಿದೆ. ತಂದೆ–ತಾಯಿ, ಪೋಷಕರು, ಒಂದು ಕಲ್ಲನ್ನು ಕಡೆದು ಅದನ್ನು ಮೂರ್ತಿಯಾಗಿ ರೂಪಿಸುವ ಶಿಕ್ಷಕರು, ನಗರದ ಹೊರಭಾಗದಲ್ಲಿರುವ ಚಾಮರಾಜನಗರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ವಾತಾವರಣ ಹಿಂದಿನ ಗುರುಕುಲ ಕಲಿಕೆಯನ್ನು ನೆನಪಿಸುವ ಮಾದರಿಯಲ್ಲಿದೆ. ವೈದ್ಯಕೀಯ ವೃತ್ತಿ ಆರಂಭಿಸುವವರಿಗೆ ಸಾಮಾಜಿಕ ಬದ್ಧತೆ ಇರಬೇಕು. ಸಮಾಜಕ್ಕೆ ನಮ್ಮ ಸೇವೆ ಏನು ಎನ್ನುವುದನ್ನು ಮನಗಾಣಬೇಕು. ಇದು ವೈದ್ಯಕೀಯ ಪದವಿಯ ಮೌಲ್ಯವನ್ನು ಹೆಚ್ಚಿಸಲಿದೆ ಎಂದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ನಿರ್ದೇಶಕರು ಹಾಗೂ ಡೀನ್ ಡಾ.ಜಿ.ಎಂ.ಸಂಜೀವ್ ಮಾತನಾಡಿ, 2016ರಲ್ಲಿ ಆರಂಭವಾದ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ಪ್ರವೇಶ ಪಡೆದ ವಿದ್ಯಾರ್ಥಿಗಳ ಪೋಷಕರಲ್ಲಿ ಸಂಸ್ಥೆಯ ಬಗ್ಗೆ ಇದ್ದ ಆತಂಕವನ್ನು ಘಟಿಕೋತ್ಸವ ದೂರ ಮಾಡಿದೆ ಎಂದರೆ ತಪ್ಪಾಗಲಾರದು. ಸರ್ಕಾರ ನುಡಿದಂತೆ ನಡೆದು ಅತ್ಯುತ್ತಮ ವೈದ್ಯಕೀಯ ವಿಜ್ಞಾನ ಕಾಲೇಜನ್ನು ಜಿಲ್ಲೆಗೆ ನೀಡಿದೆ. ಪ್ರವೇಶಾತಿ ಪಡೆದ 145 ಮಂದಿಯಲ್ಲಿ 138 ವಿದ್ಯಾರ್ಥಿಗಳು ತರಬೇತಿ ಪಡೆದಿದ್ದಾರೆ. ಸಂಸ್ಥೆಗೆ ಆರೋಗ್ಯ ಇಲಾಖೆ ಉತ್ತಮ ಸಹಕಾರ ನೀಡಿದೆ ಎಂದು ತಿಳಿಸಿದರು.

ಸಂಸ್ಥೆಯಲ್ಲಿ ಪ್ರಸಕ್ತ ಸಾಲಿನಿಂದ 8 ವಿಷಯಗಳು ಪ್ರಾರಂಭವಾಗಲಿವೆ. ಜಿಲ್ಲೆಗೆ ಪಿಜಿ ಮಂಜೂರಾದರೆ ಮುಂದಿನ ದಿನಗಳಲ್ಲಿ ಎಲ್ಲಾ ಆಸ್ಪತ್ರೆಗಳಂತೆ ಉತ್ತಮ ವೈದ್ಯಕೀಯ ಸೇವೆ ನೀಡಲಾಗುವುದು. ವೈದ್ಯಕೀಯ ವೃತ್ತಿಗೆ ಯಾವುದೇ ಚ್ಯುತಿ ಬಾರದಂತೆ ಸೇವೆ ಮನೋಭಾವ ಹೊಂದಿ ನಮ್ಮ ದೇಶದಲ್ಲಿಯೇ ಜನರಿಗೆ ಆರೋಗ್ಯ ಸೇವೆ ನೀಡಲು ಮುಂದಾಗಬೇಕು ಎಂದರು. ನವದೆಹಲಿಯ ಎಂಎಆರ್‌ಬಿಎನ್‌ಎಂಸಿ ಅಧ್ಯಕ್ಷರು, ನಿಮ್ಹಾನ್ಸ್ ಮಾಜಿ ನಿರ್ದೇಶಕರು ಹಾಗೂ ಪದ್ಮಶ್ರೀ ಪುರಸ್ಕೃತರಾದ ಡಾ.ಬಿ.ಎನ್.ಗಂಗಾಧರ, ಕರುಣಾ ಟ್ರಸ್ಟ್‌ನ ಸಂಸ್ಥಾಪಕ ಡಾ.ಹೆಚ್.ಆರ್.ಸುದರ್ಶನ್ ಮಾತನಾಡಿದರು.

ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಪ್ರಾಂಶುಪಾಲ ಡಾ.ಗಿರೀಶ್ ವಿ.ಪಾಟೀಲ್, ಔಷಧ ವಿಭಾಗದ ಮುಖ್ಯಸ್ಥ ಡಾ.ರಮೇಶ್, ಸಿಮ್ಸ್ ಬೋಧನಾ ಆಸ್ಪತ್ರೆಯ ಡಿಎನ್‌ಎಂಎಸ್ ಡಾ.ಶ್ರೀನಿವಾಸ್ ಇತರರು ಸಮಾರಂಭದಲ್ಲಿ ಇದ್ದರು. ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಡಾ.ದೇವಕಿ ಅವರು ವಿದ್ಯಾರ್ಥಿಗಳಿಗೆ ಪ್ರಮಾಣ ವಚನ ಬೋಧಿಸಿದರು. ವೈದ್ಯಕೀಯ ಪದವಿ ಪಡೆದ ವಿದ್ಯಾರ್ಥಿಗಳು ಸಮಾರಂಭದಲ್ಲಿ ತಮ್ಮ ಅನುಭವ, ಅನಿಸಿಕೆಗಳನ್ನು ಹಂಚಿಕೊಂಡರು.

ದೇಮಹಳ್ಳಿ ಗ್ರಾಪಂ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆ



ಚಾಮರಾಜನಗರ, ಮೇ 15– ದೇಮಹಳ್ಳಿ ಗ್ರಾಮ ಪಂಚಾಯಿತಿಗೆ ಗುರುವಾರ ನಡೆದ ಚುನಾವಣೆಯಲ್ಲಿ ಅಧ್ಯಕ್ಷರಾಗಿ ಬಾಣಹಳ್ಳಿ ಜಯಲಕ್ಷ್ಮೀ ಹಾಗೂ ಉಪಾಧ್ಯಕ್ಷರಾಗಿ ದೇಮಹಳ್ಳಿ ಡಿ.ಕೆ.ಶಿವಕುಮಾರ್ ಅವಿರೋಧವಾಗಿ ಆಯ್ಕೆಯಾದರು. ಅಧ್ಯಕ್ಷೆ ಸುಮಿತ್ರ ಹಾಗೂ ಉಪಾಧ್ಯಕ್ಷ ಬಸವಣ್ಣ ಅವರ ರಾಜೀನಾಮೆಯಿಂದ ತೆರವಾಗಿದ್ದ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಬಾಣಹಳ್ಳಿ ಜಯಲಕ್ಷ್ಮೀ ಹಾಗೂ ಉಪಾಧ್ಯಕ್ಷ ಸ್ಥಾನಕ್ಕೆ ದೇಮಹಳ್ಳಿ ಡಿ.ಕೆ.ಶಿವಕುಮಾರ್ ಅವರನ್ನು ಹೊರತುಪಡಿಸಿ ಬೇರೆ ಸದಸ್ಯರು ನಾಮಪತ್ರ ಸಲ್ಲಿಸದ ಕಾರಣ ಚುನಾವಣಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿದ ಜಿಲ್ಲಾ ಮಾರುಕಟ್ಟೆ ಅಧಿಕಾರಿ ಎನ್.ರವಿಚಂದ್ರ ಅವರು ಅವಿರೋಧ ಆಯ್ಕೆ ಘೋಷಿಸಿದರು.

ಈ ವೇಳೆ ಗ್ರಾಪಂ ಸದಸ್ಯರಾದ ಸುಮಿತ್ರ, ಬಸವಣ್ಣ, ಪುನೀತ್, ಜಯಪ್ರಕಾಶ್, ಭಾಗ್ಯ, ನೀಲಾಂಬಿಕಾ, ಲತಾ, ಗೀತಾ, ರಾಜಮ್ಮ, ಮುಖಂಡರಾದ ಮಾದಪ್ಪ, ಮರಿಸ್ವಾಮಿ, ಕಮರವಾಡಿ ರೇವಣ್ಣ, ಡಿ.ಪಿ.ಶಿವಕುಮಾರ್, ಬಾಣಹಳ್ಳಿ ಮಹೇಶ್, ಡಿ.ಎನ್.ಮಹದೇವಸ್ವಾಮಿ, ಮಹೇಶ್, ಜಿ.ಗುರುಸಿದ್ದಯ್ಯ ಹಾಜರಿದ್ದರು.

ಚರಂಡಿಯಲ್ಲಿ ನವಜಾತ ಶಿಶು ಶವ ಪತ್ತೆ

ಯಳಂದೂರು, ಮೇ 15– ತಾಲೂಕಿನ ಯರಿಯೂರು ಗ್ರಾಮದಲ್ಲಿ ನವಜಾತ ಗಂಡು ಶಿಶುವಿನ ಶವ ಪತ್ತೆಯಾಗಿದೆ. ಗ್ರಾಮದ ಪರಿಶಿಷ್ಟ ಜನಾಂಗದ ಮಧ್ಯದ ಬೀದಿಯಲ್ಲಿ ಎಂದಿನಂತೆ ಗ್ರಾಮ ಪಂಚಾಯಿತಿ ಪೌರ ಕಾರ್ಮಿಕರು ಸ್ವಚ್ಛತಾ ಕೆಲಸ ಮಾಡುತ್ತಿರುವಾಗ ಖಾಲಿ ನಿವೇಶನದ ಬಳಿಯ ಚರಂಡಿಯಲ್ಲಿ ಅಂದಾಜು 5ರಿಂದ 6 ತಿಂಗಳ ಗಂಡು ಶಿಶುವಿನ ಮೃತ ದೇಹ ಪತ್ತೆಯಾಗಿದೆ. ಕೂಡಲೇ ಪೌರ ಕಾರ್ಮಿಕರು ವಿಚಾರವನ್ನು ಯರಿಯೂರು ಗ್ರಾಮ ಪಂಚಾಯಿತಿ ಪಿಡಿಓ ಮಮತಾ ಅವರಿಗೆ ತಿಳಿಸಿದ್ದಾರೆ.

ವಿಷಯ ತಿಳಿದು ಸ್ಥಳಕ್ಕೆ ಧಾವಿಸಿದ ಪಿಡಿಓ ಮಮತಾ ಪರಿಶೀಲಿಸಿ, ಈ ಬಗ್ಗೆ ಯಳಂದೂರು ಪಟ್ಟಣ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದಾರೆ.

ಕೊಡಗಿನಲ್ಲಿ ಪ್ರವಾಸಿಗರ ದಂಡು




ಮಡಿಕೇರಿ, ಮೇ 15–ಕೊಡಗು ಜಿಲ್ಲೆಯತ್ತ ಇತ್ತೀಚಿನ ದಿನಗಳಲ್ಲಿ ಭಾರೀ ಸಂಖ್ಯೆಯಲ್ಲಿ ಪ್ರವಾಸಿಗರು ಆಗಮಿಸುತ್ತಿರುವ ಹಿನ್ನೆಲೆ ಪ್ರೇಕ್ಷಣೀಯ ತಾಣಗಳು ತುಂಬಿದ್ದು, ಪ್ರವಾಸೋದ್ಯಮ ಚೇತರಿಕೆಯತ್ತ ಸಾಗಿದೆ. ಮೋಡ ಕವಿದ ವಾತಾವರಣ ಸಹಿತ ಮಂಜು ಕವಿದ ಹವಾಮಾನ ಪ್ರವಾಸಿಗರನ್ನು ಸೆಳೆಯುತ್ತಿದೆ.

ಕೊಡಗಿನ ದುಬಾರೆ, ಕಾವೇರಿ ನಿಸರ್ಗ ಧಾಮ, ಮಡಿಕೇರಿಯ ರಾಜಾಸೀಟು, ಅಬ್ಬಿಫಾಲ್ಸ್, ಮಾಂದಲ್‌ಪಟ್ಟಿ, ಕೋಟೆಬೆಟ್ಟ, ಮಲ್ಲಳ್ಳಿ ಜಲಪಾತಗಳತ್ತ ಹೆಚ್ಚಿನ ಸಂಖ್ಯೆಯಲ್ಲಿ ಪ್ರವಾಸಿಗರು ಆಗಮಿಸುತ್ತಿದ್ದಾರೆ. ಜಿಲ್ಲೆಯಲ್ಲೆಡೆ ಸದ್ಯ ಮಳೆಯ ಸಿಂಚನವಾಗುತ್ತಿದ್ದು, ನೂರಾರು ಸಂಖ್ಯೆಯಲ್ಲಿ ಪ್ರವಾಸಿಗರು ಕೊಡಗಿನತ್ತ ಧಾವಿಸುತ್ತಿದ್ದು, ಪ್ರಕೃತಿ ಸೌಂದರ್ಯ ಸವಿಯುತ್ತಿದ್ದಾರೆ. ರೆಸಾರ್ಟ್‌ಗಳು, ಹೋಂ ಸ್ಟೇಗಳು, ಲಾಡ್ಜ್‌ಗಳು ಪ್ರವಾಸಿಗರಿಂದ ತುಂಬಿ ಹೋಗಿವೆ. ಇಲ್ಲಿನ ಮಂಜು ಮುಸುಕಿದ ಚಳಿಯ ವಾತಾವರಣದಲ್ಲಿ ಪ್ರವಾಸಿಗರು ಸಂಭ್ರಮಿಸುತ್ತಿದ್ದಾರೆ.

ನಗರದ ಪ್ರಮುಖ ರಸ್ತೆಗಳಲ್ಲಿ ಪ್ರವಾಸಿಗರ ವಾಹನಗಳು ಕಂಡು ಬರುತ್ತಿದ್ದು, ಸಹಜವಾಗಿಯೇ ವಾರಾಂತ್ಯದ ದಿನಗಳಲ್ಲಿ ವಾಹನ ದಟ್ಟಣೆ ಕಂಡು ಬರುತ್ತಿದೆ. ಪ್ರವಾಸಿಗರು ಜಿಲ್ಲೆಗೆ ಆಗಮಿಸುತ್ತಿರುವುದರಿಂದ ಪ್ರವಾಸೋದ್ಯಮವನ್ನೇ ನಂಬಿಕೊಂಡು ಬದುಕು ಕಟ್ಟಿಕೊಂಡಿದ್ದವರಿಗೆ ತುಸು ನಿರಾಳವಾಗಿದೆ. ಪ್ರವಾಸಿ ತಾಣಗಳಿಗೆ ತೆರಳುವ ಜೀಪುಗಳು, ಟ್ಯಾಕ್ಸಿಗಳು, ಸುತ್ತಮುತ್ತಲಿನ ಅಂಗಡಿ–ಮುಂಗಟ್ಟುಗಳು ಹಾಗೂ ಪ್ರವಾಸೋದ್ಯಮ ಅವಲಂಬಿತ ಉದ್ಯಮಗಳಲ್ಲಿ ಕೋವಿಡ್ ಕಾರಣದಿಂದ ಕುಸಿದಿದ್ದ ಆರ್ಥಿಕತೆ ಮತ್ತೆ ಚೇತರಿಕೆಯ ಹಾದಿಗೆ ಹೊರಳುತ್ತಿದೆ.

ಬಸವನತ್ತೂರಲ್ಲಿ ನೂತನ ರೋಟರಿ ಹೌಸ್ ಹಸ್ತಾಂತರ



ಕುಶಾಲನಗರ, ಮೇ 15–ಕುಶಾಲನಗರದ ರೋಟರಿ ಸಂಸ್ಥೆಯಿಂದ ಕೂಡುಮಂಗಳೂರು ಗ್ರಾಪಂ ವ್ಯಾಪ್ತಿಯ ಬಸವನತ್ತೂರಿನ ಆನೆಕೆರೆ ಬಳಿ ನಿರ್ಗತಿಕ ಕುಟುಂಬವೊಂದಕ್ಕೆ ನಿರ್ಮಿಸಿಕೊಟ್ಟ ನೂತನ ರೋಟರಿ ಹೌಸ್ ಅನ್ನು ಉದ್ಘಾಟಿಸಿ, ಹಸ್ತಾಂತರಿಸಲಾಯಿತು.

ರೋಟರಿ ಹೌಸ್ ನಂ–1 ಮನೆ ಉದ್ಘಾಟಿಸಿ ಮಾತನಾಡಿದ ರೋಟರಿ 3181 ಜಿಲ್ಲಾ ರಾಜ್ಯಪಾಲ ಎ.ಆರ್.ರವೀಂದ್ರಭಟ್, ರೋಟರಿ ವಿವಿಧ ಕ್ಷೇತ್ರಗಳಲ್ಲಿ ತನ್ನ ಸೇವೆ ಸಲ್ಲಿಸುತ್ತಿದೆ. ಸಾಮಾಜಿಕ ಸೇವಾ ಕಾರ್ಯಗಳು, ಯೋಜನೆಗಳಿಗೆ ರೋಟರಿ ಇದುವರೆಗೂ ಸಾಕಷ್ಟು ಹಣ ವಿನಿಯೋಗಿಸಿದೆ. ಕೊಡಗು ಜಿಲ್ಲೆಯಲ್ಲೂ ಕೂಡ ಸರಾಸರಿ 50 ಕೋಟಿ ರೂ. ಮೊತ್ತದ ವಿವಿಧ ಕಾರ್ಯಕ್ರಮ ಹಮ್ಮಿಕೊಳ್ಳುತ್ತಿದೆ. ಕೊಡುಗೆ ಮತ್ತು ಸೇವೆಗೆ ಅಮೆರಿಕಾ ನಂತರ ಭಾರತದ ರೋಟರಿ ಹೆಸರುವಾಸಿಯಾಗಿದ್ದು, ಎರಡನೇ ಸ್ಥಾನದಲ್ಲಿದೆ ಎಂದರು.

ರೋಟರಿ ಮೂಲಕ ಪ್ರಥಮವಾಗಿ ಮನೆಯೊಂದನ್ನು ಕೊಡುಗೆ ನೀಡಿದ್ದು, ಇನ್ನು ಮುಂದೆಯೂ ಅಶಕ್ತರಿಗೆ ಮನೆಗಳನ್ನು ಒದಗಿಸಲು ರೋಟರಿ ಸಂಸ್ಥೆ ಪ್ರಯತ್ನಿಸಲಿದೆ ಎಂದರು. 2.5 ಲಕ್ಷ ರೂ. ವೆಚ್ಚದಲ್ಲಿ ನಿರ್ಮಿಸಿದ ಮನೆಯನ್ನು ಫಲಾನುಭವಿ ನಾಗಮ್ಮ ಅವರಿಗೆ ಹಸ್ತಾಂತರಿಸಲಾಯಿತು.

ಕುಶಾಲನಗರ ರೋಟರಿ ಅಧ್ಯಕ್ಷ ಎಂ.ಡಿ.ರಂಗಸ್ವಾಮಿ ಅಧ್ಯಕ್ಷತೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಕೂಡುಮಂಗಳೂರು ಗ್ರಾಪಂ ಅಧ್ಯಕ್ಷೆ ಇಂದಿರಾ ರಮೇಶ್, ಸದಸ್ಯರಾದ ಫಿಲೋಮಿನಾ, ರೋಟರಿ ಸಹಾಯಕ ರಾಜ್ಯಪಾಲ ಹೆಚ್.ಟಿ.ಅನಿಲ್ ರೋಟರಿ ಸೇವೆ ಶ್ಲಾಘಿಸಿದರು.

ಗ್ರಾಪಂ ಸದಸ್ಯರಾದ ಗೌರಮ್ಮ, ಚಂದ್ರಶೇಖರ್, ರೋಟರಿ ವಲಯ ಕಾರ್ಯದರ್ಶಿ ಹೆಚ್.ಎಸ್. ವಸಂತಕುಮಾರ್, ಕುಶಾಲನಗರ ಕಾರ್ಯದರ್ಶಿ ರಿಚರ್ಡ್ ಡಿಸೋಜ, ಪ್ರಮುಖರಾದ ಎನ್.ಜಿ.ಪ್ರಕಾಶ್, ವಿ.ಎನ್.ಉಮಾಶಂಕರ್, ಮಹೇಶ್, ಡಾ.ಹರಿಶೆಟ್ಟಿ, ಜೇಕಬ್, ಸಂಜು ಪ್ರಮೋದ್ ಮುತ್ತಪ್ಪ, ಸೈಜನ್ ಪೀಟರ್, ಪ್ರವೀಣ್ ಮತ್ತಿತರರಿದ್ದರು.

ವಿ.ಪೇಟೆ ಪಪಂ ಮುಂದೆ ವಿವಿಧ ಸಂಘಟನೆಗಳ ಪ್ರತಿಭಟನೆ



ವಿರಾಜಪೇಟೆ, ಮೇ 15– ವಿರಾಜಪೇಟೆ ಪಟ್ಟಣ ಪಂಚಾಯಿತಿ ವ್ಯಾಪ್ತಿಯ ಹಲವಾರು ರಸ್ತೆಗಳು ಹೊಂಡ ಗುಂಡಿಗಳಾಗಿದ್ದು ವಾಹನ ಸಂಚರಿಸಲು ಹರಸಹಾಸ ಪಡಬೇಕಾಗಿದೆ ಹಾಗೂ ಕುಡಿಯುವ ನೀರು ಎರಡು ಮೂರು ದಿನಗಳಿಗೊಮ್ಮೆ ಬರುತ್ತದೆ. ಮನೆ ಕಂದಾಯ ಹಾಗೂ ನೀರಿನ ತೆರಿಗೆಯನ್ನು ಹೆಚ್ಚಿಸಿರುವುದನ್ನು ವಿರೋಧಿಸಿ ಕರ್ನಾಟಕ ರಕ್ಷಣ ವೇದಿಕೆ, ಡಿವೈಎಫ್‌ಐ ಸಂಘಟನೆ ಹಾಗೂ ನಾಗರಿಕ ಸಮಿತಿ ವತಿಯಿಂದ ಪಟ್ಟಣ ಪಂಚಾಯಿತಿ ಎದುರು ಪ್ರತಿಭಟನೆ ನಡೆಸಿ, ಮುಖ್ಯಾಧಿ ಕಾರಿಗೆ ಮನವಿ ಸಲ್ಲಿಸಿದರು.

ಪ್ರತಿಭಟನೆ ಸಂದರ್ಭ ನಾಗರಿಕ ಸಮಿತಿ ಅಧ್ಯಕ್ಷ ಡಾ. ದುರ್ಗಾಪ್ರಸಾದ್ ಮಾತನಾಡಿ, ಪಟ್ಟಣದ ಮುಖ್ಯ ರಸ್ತೆ ಅಗಲೀಕರಣ ಕೈಬಿಟ್ಟು ಈಗಿರುವ ರಸ್ತೆಯನ್ನು ಚರಂಡಿವರೆಗೆ ವಿಸ್ತರಣೆ ಮಾಡಿ ಡಾಂಬರೀಕರಣ ಮಾಡಿ ಪೊಲೀಸ್ ಇಲಾಖೆ ವಾಹನಗಳಿಗೆ ಸುಗಮ ಸಂಚಾರದ ವ್ಯವಸ್ಥೆ ಮಾಡಿ ಕೊಡಬೇಕು ಎಂದರು.

ನಾಗರಿಕ ಸಮಿತಿ ವಕೀಲ ಲೋಕನಾಥ್ ಮಾತನಾಡಿ ಅಯ್ಯಪ್ಪ ಬೆಟ್ಟದ ರಕ್ಷಣೆಗಾಗಿ ಲೋಕೋಪಯೋಗಿ ಇಲಾಖೆ ರೂ.50 ಲಕ್ಷ ವೆಚ್ಚದಲ್ಲಿ 22 ಅಡಿ ಎತ್ತರದ ತಡೆಗೋಡೆ ನಿರ್ಮಿಸಿದ್ದು ಕಾಮಗಾರಿ ಕಳಪೆಯಾಗಿ ತಡೆಗೋಡೆ ಬಾಗಿ ನಿಂತಿದೆ. ಮಳೆಗಾಲದಲ್ಲಿ ಕುಸಿಯುವ ಸಾಧ್ಯತೆ ಇದ್ದು, ಇದರಿಂದ ಅಯ್ಯಪ್ಪ ದೇವಾಲಯಕ್ಕೆ ಅಪಾಯವಿದೆ. ಈ ಬಗ್ಗೆ ಸಮಗ್ರ ತನಿಖೆಯಾಗಬೇಕು ಎಂದು ಆಗ್ರಹಿಸಿದರು.

ಕರ್ನಾಟಕ ರಕ್ಷಣಾ ವೇದಿಕೆಯ ತಾಲೂಕು ಅಧ್ಯಕ್ಷ ಅನಿಲ್ ಕುಮಾರ್ ಮಾತನಾಡಿ ಪಟ್ಟಣ ಪಂಚಾಯಿತಿಯಿಂದ ಕುಡಿಯುವ ನೀರು ಮತ್ತು ಸ್ವಯಂ ಘೋಷಿತ ತೆರಿಗೆ ಹೆಚ್ಚಿಸಿರುವ ಬಗ್ಗೆ ಅಸಮಾದಾನ ವ್ಯಕ್ತ ಪಡಿಸಿದರು.

ಪ್ರತಿಭಟನೆಯಲ್ಲಿ ನಾಗರಿಕ ಸಮಿತಿಯ ನಾಣಯ್ಯ, ಡಿವೈಎಫ್‌ಐ ಸಂಘಟನೆಯ ನಗರ ಕಾರ್ಯದರ್ಶಿ ಶಾಜಿ ರಮೇಶ್, ರತೀಶ್, ಪಿ.ಕೆ.ಅಬ್ದುಲ್ ರೆಹಮನ್, ಮಲ್ದಾರೆ ಭಾವ ಮಾತನಾಡಿದರು. ಸಮಸ್ಯೆಗಳನ್ನು ಅಲಿಸಿದ ಪಪಂ ಅಧ್ಯಕ್ಷೆ ಸುಶ್ಮಿತಾ, ಮುಖ್ಯಾಧಿಕಾರಿ ಚಂದ್ರಕುಮಾರ್, ಕಾಮಗಾರಿ ಸ್ಥಾಯಿ ಸಮಿತಿ ಅಧ್ಯಕ್ಷೆ ಜೂನ ಅವರು ಸಮಸ್ಯೆಗಳ ಪರಿಹಾರಕ್ಕೆ ಕ್ರಮ ಕೈಗೊಳ್ಳುವ ಭರವಸೆ ನೀಡಿದರು.

ಹೊದ್ದೂರು–ಪಾಲೆಮಾಡು ಸರ್ಕಾರಿ ಜಾಗ ಸರ್ವೆಗೆ ಆಗ್ರಹ



ಮಡಿಕೇರಿ, ಮೇ 15–ಹೊದ್ದೂರು–ಪಾಲೆಮಾಡು ಗ್ರಾಮದಲ್ಲಿರುವ 119 ಎಕರೆ ಸರ್ಕಾರಿ ಜಾಗವನ್ನು ಕೋರ್ಟ್ ಮುಖಾಂತರ ಸರ್ವೆ ನಡೆಸಿ ಸತ್ಯಾಸತ್ಯತೆ ಪರಿಶೀಲಿಸುವಂತೆ ಭೂಮಿ ಮತ್ತು ವಸತಿ ಹಕ್ಕು ವಂಚಿತರ ಹೋರಾಟ ಸಮಿತಿ ಆಗ್ರಹಿಸಿದೆ.

ಮಡಿಕೇರಿಯಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಸಮಿತಿಯ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮೊಣ್ಣಪ್ಪ, ಪಾಲೆಮಾಡು ಸ್ಮಶಾನ ಜಾಗದಲ್ಲಿ ಕ್ರಿಕೆಟ್ ಸ್ಟೇಡಿಯಂ ನಿರ್ಮಾಣ ಕಾರ್ಯವನ್ನು ಖಂಡಿಸಿದರು.

2009–10ರಲ್ಲಿ ಹೊದ್ದೂರು ಗ್ರಾಮದ ಸರ್ವೆ ನಂ.167/1ಎನಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡಗಳಿಗೆ ಸ್ಮಶಾನಕ್ಕಾಗಿ ಜಾಗವನ್ನು ಕಾಯ್ದಿರಿಸಲಾಗಿತ್ತು. ಈ ಸಂಬಂಧ 2010–11ನೇ ಸಾಲಿನಲ್ಲಿ ಆರ್‌ಟಿಸಿಗೆ ದಾಖಲೆ ಬಂದಿದೆ ಆದರೆ 2015ರಲ್ಲಿ ಸ್ಥಳೀಯ ನಿವಾಸಿಗಳ ಅಭಿಪ್ರಾಯ ಪಡೆಯದೇ ತಹಸೀಲ್ದಾರ್ ಕ್ರಿಕೆಟ್ ಕ್ರೀಡಾಂಗಣಕ್ಕೆ 12.70 ಎಕರೆ ಸರ್ಕಾರಿ ಜಾಗವನ್ನು ಗುತ್ತಿಗೆ ಆಧಾರದಲ್ಲಿ ನೀಡಲು ಶಿಫಾರಸು ಮಾಡಿದ್ದಾರೆ. ಅದೇ ಜಾಗದಲ್ಲಿ 2 ಎಕರೆ ಸ್ಮಶಾನ ಜಾಗವೂ ಸೇರಿದ್ದು, ಸ್ಮಶಾನವನ್ನು ಯಥಾಸ್ಥಿತಿಯಲ್ಲೇ ಮುಂದುವರಿಸುವಲ್ಲಿ ಜಿಲ್ಲಾಡಳಿತ, ಸರ್ಕಾರ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಜಿಲ್ಲಾಡಳಿತ ಮತ್ತು ಸರ್ಕಾರ ಶ್ರೀಮಂತರ ಪರ ನಿಲುವು ಹೊಂದಿದೆ. ಸ್ಮಶಾನ ಜಾಗದಲ್ಲಿ ಕ್ರಿಕೆಟ್ ಸ್ಟೇಡಿಯಂ ನಿರ್ಮಾಣವಾದರೆ ಸಮಾಧಿಗಳನ್ನು ಬೇರೆಡೆಗೆ ಸ್ಥಳಾಂತರಿಸಲು ಸಾಧ್ಯವಿಲ್ಲ. ಹೊದ್ದೂರು–ಪಾಲೆಮಾಡು ಗ್ರಾಮದ ಸ.ನಂ 167/1ಎ ನಲ್ಲಿ 119 ಎಕರೆ ಸರ್ಕಾರಿ ಜಾಗವಿದ್ದು, ಅಲ್ಲಿ ಒತ್ತುವರಿಯಾಗಿರುವ ಜಮೀನನ್ನು ಕೋರ್ಟ್ ಮುಖಾಂತರ ಸರ್ವೆ ನಡೆಸಬೇಕು ಎಂದು ಮನವಿ ಮಾಡಿದರು.

ಹೊದ್ದೂರು ಗ್ರಾಪಂ ಅಧ್ಯಕ್ಷೆ ಕುಸುಮಾವತಿ ಮಾತನಾಡಿ, ಪಾಲೆಮಾಡು ಸ್ಮಶಾನ ಜಾಗದಲ್ಲಿ 2008ರಿಂದ 150ಕ್ಕೂ ಹೆಚ್ಚು ಶವಸಂಸ್ಕಾರ ಮಾಡಲಾಗಿದ್ದು, ಜಿಲ್ಲಾಡಳಿತ ಹಾಗೂ ಸರ್ಕಾರ ಜನರ ಭಾವನೆಗೆ ಧಕ್ಕೆ ಉಂಟು ಮಾಡಬಾರದು.

ಈ ಹಿಂದೆ ಜಿಲ್ಲಾಧಿಕಾರಿ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಸ್ಮಶಾನ ಜಾಗವನ್ನು ಉದ್ಯಾನವನವನ್ನಾಗಿ ಮಾಡಿ ಹಾಗೆಯೇ ಉಳಿಸಿಕೊಳ್ಳುವುದಾಗಿ ಭರವಸೆ ನೀಡಿದ್ದರು. ಆದರೀಗ ಸ್ಟೇಡಿಯಂ ನಿರ್ಮಾಣಕ್ಕೆ ಜಾಗ ಮಂಜೂರು ಮಾಡಲಾಗಿದೆ. ಇದು ಸರಿಯಾದ ಕ್ರಮವಲ್ಲ ಎಂದು ಆಕ್ಷೇಪ ವ್ಯಕ್ತಪಡಿಸಿದರು. ಸುದ್ದಿಗೋಷ್ಠಿಯಲ್ಲಿ ಪಾಲೆಮಾಡು ನಿವಾಸಿಗಳಾದ ಕೃಷ್ಣ, ರಾಜು, ರಾಕೇಶ್ ಹಾಜರಿದ್ದರು.

ಪಾಲೆಮಾಡು ಕ್ರಿಕೆಟ್ ಸ್ಟೇಡಿಯಂಗೆ ಅಡ್ಡಿಪಡಿಸುವುದು ಸರಿಯಲ್ಲ

ಮಡಿಕೇರಿ: ಹೊದ್ದೂರು ಗ್ರಾ.ಪಂ ವ್ಯಾಪ್ತಿಯ ಪಾಲೆಮಾಡುವಿನಲ್ಲಿ ಕ್ರಿಕೆಟ್ ಸ್ಟೇಡಿಯಂ ನಿರ್ಮಾಣಕ್ಕೆ ಅಡ್ಡಿಪಡಿಸುತ್ತಿರುವುದು ಸರಿಯಾದ ಕ್ರಮವಲ್ಲವೆಂದು ಅಸಮಾಧಾನ ವ್ಯಕ್ತಪಡಿಸಿರುವ ವಿರಾಜಪೇಟೆ ಶಾಸಕ ಕೆ.ಜಿ.ಬೋಪಯ್ಯ ಪೊಲೀಸ್ ರಕ್ಷಣೆಯಲ್ಲಿ ಕಾಮಗಾರಿ ಮುಂದುವರೆಯಲಿದೆ ಎಂದು ತಿಳಿಸಿದ್ದಾರೆ.



ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕೊಡಗು ಕ್ರೀಡಾಪಟುಗಳ ತವರೂರು ಎಂದು ಖ್ಯಾತಿ ಪಡೆದಿದ್ದು, ಹಲವು ಕುಟುಂಬ, ಸಂಘ ಸಂಸ್ಥೆಗಳು ಹಾಗೂ ಯುವ ಸಮೂಹ ಕ್ರೀಡೆಗಳ ಕಡೆ ಆಸಕ್ತರಾಗಿದ್ದಾರೆ. ಆದರೆ ಕೊಡಗಿನಲ್ಲಿ ಸುಸಜ್ಜಿತ ಕ್ರಿಕೆಟ್ ಮೈದಾನದ ಕೊರತೆ ಇದ್ದು, ಇದೀಗ ನಿರ್ಮಾಣ ಕಾರ್ಯಕ್ಕೂ ಅಡ್ಡಿಪಡಿಸಲಾಗುತ್ತಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

2011ರಲ್ಲಿ ಕ್ರಿಕೆಟ್ ಸಂಸ್ಥೆಗೆ ಸ್ಟೇಡಿಯಂ ನಿರ್ಮಾಣ ಮಾಡಲು ಜಾಗ ಮಂಜೂರಾಗಿದೆ. ಅಲ್ಲದೆ ಸ್ವಂತ ಬಂಡವಾಳದಿಂದಲೇ ಸ್ಟೇಡಿಯಂ ನಿರ್ಮಾಣ ಮಾಡಲು ಕ್ರಿಕೆಟ್ ಸಂಸ್ಥೆ ಮುಂದಾಗಿದೆ. ಆದರೆ ಮೈದಾನದ ಅಭಿವೃದ್ಧಿ ಕಾರ್ಯಕ್ಕೆ ಜಾತಿ ಹೆಸರಿನಲ್ಲಿ ಅಡ್ಡಿಪಡಿಸಲಾಗುತ್ತಿದ್ದು, ಇದು ಸರಿಯಾದ ಕ್ರಮವಲ್ಲ ಎಂದರು. ಪಾಲೆಮಾಡು ನಿವಾಸಿಗಳು ಸ್ಮಶಾನಕ್ಕಾಗಿ ಕೇವಲ 1 ಎಕರೆ ಜಾಗವನ್ನು ಕೋರಿದ್ದರು. ಸರ್ಕಾರದಿಂದ 2 ಎಕರೆ ಜಾಗವನ್ನು ಈಗಾಗಲೇ ಮಂಜೂರು ಮಾಡಿ ನೀಡಲಾಗಿದೆ. ಹೊರಗಿನಿಂದ ಬಂದ ವ್ಯಕ್ತಿ ಅಭಿವೃದ್ಧಿಗೆ ಅಡ್ಡಿ ಪಡಿಸುತ್ತಿದ್ದಾರೆ. ಇಂತಹವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲು ಜಿಲ್ಲಾಧಿಕಾರಿ ಹಾಗೂ ಪೊಲೀಸರಿಗೆ ಸೂಚಿಸಲಾಗಿದ್ದು, ಪೊಲೀಸ್ ರಕ್ಷಣೆಯಲ್ಲಿ ಮೈದಾನ ಕಾಮಗಾರಿ ನಡೆಯಲಿದೆ ಎಂದು ಬೋಪಯ್ಯ ತಿಳಿಸಿದರು.

ಕೆ.ಜಿ.ರತ್ನ ನಿಧನ

ಸೋಮವಾರಪೇಟೆ, ಮೇ 15–ಇಲ್ಲಿಗೆ ಸಮೀಪದ ತಾಕೇರಿ ಗ್ರಾಮದ ಕೆ.ಪಿ.ಗಣಪತಿ ಅವರ ಪತ್ನಿ ಕೆ.ಜಿ.ರತ್ನ(54) ಭಾನುವಾರ ನಿಧನರಾದರು.



ಮೃತರು ಇಬ್ಬರು ಪುತ್ರರು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸ್ವ–ಗ್ರಾಮದಲ್ಲಿ ಸಂಜೆ ನಡೆಯಿತು.

ಕಾರು ಡಿಕ್ಕಿ; ಪಾದಚಾರಿ ಸಾವು



ಕುಶಾಲನಗರ, ಮೇ 15–ಕಾರು ಡಿಕ್ಕಿ ಹೊಡೆದು ಪಾದಚಾರಿಯೊಬ್ಬರು ಸ್ಥಳದಲ್ಲಿಯೇ ಸಾವನ್ನಪ್ಪಿರುವ ಘಟನೆ ಬಸವನಹಳ್ಳಿ ಬಳಿ ಭಾನುವಾರ ನಡೆದಿದೆ.

ಅಂದಗೋವೆಯ ನಿವಾಸಿ ಲೋಕೇಶ್(56) ಮೃತಪಟ್ಟವರು. ಇವರು ಬಸವನಹಳ್ಳಿ ಬಿ.ಎಂ.ರಸ್ತೆಯಲ್ಲಿ ಬಿದಿರಿನಿಂದ ತಯಾರಿಸಿದ ಸಾಮಗ್ರಿಗಳ ಖರೀದಿಗೆಂದು ರಸ್ತೆ ದಾಟುತ್ತಿದ್ದರು. ಈ ವೇಳೆ ಅತೀವೇಗವಾಗಿ ಬಂದ ಕಾರು ಲೋಕೇಶ್‌ಗೆ ಡಿಕ್ಕಿ ಹೊಡೆದಿದೆ. ಪರಿಣಾಮ ಲೋಕೇಶ್ ಸ್ಥಳದಲ್ಲೇ ಅಸುನೀಗಿದ್ದಾರೆ. ಅಪಘಾತದ ಬಳಿಕ ಕಾರು ಚಾಲಕ ಪರಾರಿಯಾಗಿದ್ದಾನೆ. ಕುಶಾಲನಗರ ಸಂಚಾರಿ ಪೊಲೀಸರು ಪ್ರಕರಣ ದಾಖಲಿಸಿಕೊಂಡು ಕಾರಿನ ಪತ್ತೆಗಾಗಿ ಶೋಧ ನಡೆಸಿದ್ದಾರೆ. ಮರಣೋತ್ತರ ಪರೀಕ್ಷೆಗಾಗಿ ಮೃತದೇಹವನ್ನು ಕುಶಾಲನಗರ ಸರ್ಕಾರಿ ಆಸ್ಪತ್ರೆ ಶವಾಗಾರಕ್ಕೆ ರವಾನಿಸಲಾಗಿದೆ.

ಮೇ 21ರಿಂದ ಭದ್ರಕಾಳಿದೇವಿ ಹಬ್ಬ

ವಿರಾಜಪೇಟೆ, ಮೇ 15–ಸಮೀಪದ ಕುಕ್ಲೂರು ಗ್ರಾಮದ ಕುಂದತ್ ಶ್ರೀ ಮೂಲ ಭದ್ರಕಾಳಿ ದೇವಿಯ ಹಬ್ಬ ಮೇ 21ರಿಂದ 23ರವರೆಗೆ ಮೂರು ದಿನಗಳ ಕಾಲ ನಡೆಯಲಿದೆ.

ಮೇ 22ರಂದು ದೊಡ್ಡಹಬ್ಬ ಮತ್ತು ರಾತ್ರಿ ದೇವರ ತೆರೆ ನಡೆಯುವುದು. ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ದೇವರ ಕೃಪೆಗೆ ಪಾತ್ರರಾಗುವಂತೆ ಆಡಳಿತ ಮಂಡಳಿ ವಿನಂತಿಸಿದೆ. ಹೆಚ್ಚಿನ ವಿವರಗಳಿಗೆ ಮೊಬೈಲ್ ಸಂಖ್ಯೆ 7411327963 ಮೂಲಕ ಸಂಪರ್ಕಿಸಬಹುದಾಗಿದೆ.

ಒಂದನೇ ಪುಟದಿಂದ

ಒಂದು ಕುಟುಂಬಕ್ಕೆ ಒಂದೇ ಟಿಕೆಟ್

ಪಕ್ಷಕ್ಕಾಗಿ ದುಡಿದಿದ್ದರೆ ಟಿಕೆಟ್ ನೀಡುವ ಬಗ್ಗೆ ಪರಿಶೀಲನೆ ನಡೆಸಲು ಸೂಚಿಸಲಾಗಿದೆ. ಇವಿಎಂ ಬಗ್ಗೆ ಸಮಾನಾಂತರ ಪಕ್ಷಗಳ ಜೊತೆ ಚರ್ಚೆ ಮಾಡಿ ಮುಂದಿನ ಹೋರಾಟ ನಡೆಸುವ ಬಗ್ಗೆ ಸಭೆ ನಿರ್ಧರಿಸಿದೆ. ಎಐಸಿಸಿ ಅಧ್ಯಕ್ಷೆ ಸೋನಿಯಾ ಗಾಂಧಿ ಅವರಿಗೆ ಸಹಕರಿಸಲು ಸಲಹಾ ಸಮಿತಿಗಳನ್ನು ರಚನೆ ಮಾಡಲಾಗಿದೆ. ಬೂತ್ ಮಟ್ಟದಿಂದ ಕಾರ್ಯಕಾರಿ ಸಮಿತಿವರೆಗೆ ಶೇ.50 ಸ್ಥಾನ ಯುವಕರಿಗೆ ನೀಡಲು ತೀರ್ಮಾನಿಸಲಾಗಿದೆ. ಎಸಿ–ಎಸ್‌ಟಿ, ಹಿಂದುಳಿದ ವರ್ಗ ಹಾಗೂ ಅಲ್ಪಸಂಖ್ಯಾತರಿಗೆ ಶೇ.50 ಸ್ಥಾನ ಮೀಸಲಿಡಲು ನಿರ್ಧಾರ ಕೈಗೊಳ್ಳಲಾಗಿದೆ. ಬ್ಲಾಕ್ ಸಮಿತಿಯಿಂದ ಕಾರ್ಯಕಾರಿ ಸಮಿತಿವರೆಗೆ ಪ್ರತೀ ಪದಾಧಿಕಾರಿಗೂ ಗರಿಷ್ಠ 5 ವರ್ಷ ಅವಧಿ ನಿಗದಿಪಡಿಸಲಾಗಿದ್ದು, ಬಳಿಕ ಮೂರು ವರ್ಷ ಕೂಲಿಂಗ್ ಪಿರಿಯಡ್ ಆಗಿರುತ್ತದೆ. ಜನರ ನೈಜ ಸಮಸ್ಯೆ ಕೈಗೆತ್ತಿಕೊಳ್ಳಲು ಪ್ರತೀ ರಾಜ್ಯದಲ್ಲೂ ಸಮಿತಿ ರಚನೆ ಮಾಡಲು ತೀರ್ಮಾನ ಕೈಗೊಳ್ಳಲಾಗಿದೆ. ರಾಜ್ಯದ ಉಸ್ತುವಾರಿಗಳು ಆಯಾ ರಾಜ್ಯದಲ್ಲೇ ಠಿಕಾಣಿ ಹೂಡಲು ಸಿಡಬ್ಲ್ಯುಸಿ ಸಭೆ ಸೂಚಿಸಿದೆ.

ಭಾರತ ಜೋಡಣಾ ಯಾತ್ರೆಗೆ ಸಿಡಬ್ಲ್ಯುಸಿ ಸಭೆ ನಿರ್ಧರಿಸಿದ್ದು, ಪ್ರತೀ ರಾಜ್ಯದಲ್ಲೂ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಪ್ರವಾಸ ಮಾಡಲಿದ್ದಾರೆ. ಪ್ರವಾಸದ ರೂಟ್ ಮ್ಯಾಪ್ ಹೊಣೆಗಾರಿಕೆ ಆಯಾ ಪ್ರದೇಶ ಕಾಂಗ್ರೆಸ್ ಸಮಿತಿಗಳಿಗೆ ವಹಿಸಲಾಗಿದೆ.

ಎಲ್ಲಾ ಹಂತಗಳಲ್ಲಿ 35 ವರ್ಷ ವಯೋಮಾನದವರಿಗೆ ಆದ್ಯತೆ ನೀಡಬೇಕು ಎಂದು ಮುಖುಲ್ ವಾಸ್ನಿಕ್ ನೇತೃತ್ವದ ಸಂಘಟನಾ ಸಮಿತಿ ನೀಡಿದ ಸಲಹೆ ಬಗ್ಗೆ ಚರ್ಚಿಸಲಾಯಿತು. ಕಾಂಗ್ರೆಸ್ ಕಾರ್ಯಕಾರಿಣಿ ಸಮಿತಿ ಸೇರಿದಂತೆ ಎಲ್ಲಾ ಹಂತಗಳಲ್ಲಿ ಶೇ.50 ರಷ್ಟು ಹುದ್ದೆಗಳನ್ನು 50 ವರ್ಷಕ್ಕಿಂತ ಕಡಿಮೆ ಇರುವವರಿಗೆ ನೀಡಬೇಕು ಎಂಬ ಸಲಹೆಯನ್ನು ಸಭೆ ಅಂಗೀಕರಿಸಿತು. ಸಭೆಯಲ್ಲಿ ಎಐಸಿಸಿ ಮುಖಂಡ ರಾಹುಲ್ ಗಾಂಧಿ, ಪ್ರಧಾನ ಕಾರ್ಯದರ್ಶಿ ಪ್ರಿಯಾಂಕ ಗಾಂಧಿ, ಹಿರಿಯ ನಾಯಕರಾದ ಮಲ್ಲಿಕಾರ್ಜುನ ಖರ್ಗೆ, ಗುಲಾಂ ನಬಿ ಆಜಾದ್, ಪಿ.ಚಿದಂಬರಂ, ಸಿದ್ದರಾಮಯ್ಯ, ಎಲ್ಲಾ ರಾಜ್ಯಗಳ ಪ್ರದೇಶ ಕಾಂಗ್ರೆಸ್ ಅಧ್ಯಕ್ಷರು ಹಾಗೂ ರಾಷ್ಟ್ರ ಮಟ್ಟದ ನಾಯಕರು ಭಾಗವಹಿಸಿದ್ದರು.

ಜನರೊಂದಿಗೆ ಸಂಪರ್ಕ ಕಡಿದಿದೆ...

ಯಾತ್ರೆ ಕೈಗೊಳ್ಳುವುದಾಗಿ ಪ್ರಕಟಿಸಿದರು. ಪಕ್ಷ ಬೆವರು ಹರಿಸಿ ಜನರೊಂದಿಗೆ ಸಂಪರ್ಕ ಸಾಧಿಸಬೇಕು. ಅದಕ್ಕಾಗಿ ರೈತರು ಮತ್ತು ಕೂಲಿ ಕಾರ್ಮಿಕರ ಜೊತೆ ಒಂದೆರಡಲ್ಲ, ತಿಂಗಳು ಕಾಲ ಕಳೆಯಿರಿ ಎಂದು ಪಕ್ಷದ ಮುಖಂಡರು ಹಾಗೂ ಕಾರ್ಯಕರ್ತರಿಗೆ ಮನವಿ ಮಾಡಿದರು. ನಮ್ಮಂತೆ ಬಿಜೆಪಿ ವಿರುದ್ಧ ಹೋರಾಡಲು ಪ್ರಾದೇಶಿಕ ಪಕ್ಷಗಳಿಗೆ ಸಾಧ್ಯವಿಲ್ಲ. ಯಾಕೆಂದರೆ ಅವುಗಳು ಸಿದ್ಧಾಂತವನ್ನು ಹೊಂದಿಲ್ಲ. ಈ ಕಾರಣದಿಂದಲೇ ಬಿಜೆಪಿ ಕಾಂಗ್ರೆಸ್ ಬಗ್ಗೆ ಮಾತನಾಡುತ್ತದೆಯೇ ಹೊರತು ಪ್ರಾದೇಶಿಕ ಪಕ್ಷಗಳ ಬಗ್ಗೆ ಮಾತನಾಡುವುದಿಲ್ಲ ಎಂದರು. ಬಿಜೆಪಿ ನಮಗಿಂತಲೂ ಉತ್ತಮವಾದ ಕ್ಷೇತ್ರವನ್ನು ಹೊಂದಿದೆ. ಅದು ಸಂವಹನ ಕ್ಷೇತ್ರ. ನಾವು ನಮ್ಮ ಸಂವಹನವನ್ನು ಸುಧಾರಿಸಬೇಕು ಮತ್ತು ಜನರೊಂದಿಗೆ ಸಂಪರ್ಕ ಸಾಧಿಸಬೇಕು ಎಂದರು. ಬಿಜೆಪಿ ಬಗ್ಗೆ ವಾಗ್ದಾಳಿ ನಡೆಸಿದ ಅವರು, ಬಿಜೆಪಿ ರಾಷ್ಟ್ರದ ಪ್ರಮುಖ ಸಂಸ್ಥೆಗಳನ್ನು ದುರ್ಬಳಕೆ ಮಾಡಿಕೊಳ್ಳುತ್ತಿದೆ. ನ್ಯಾಯಾಂಗವನ್ನು ದಾರಿ ತಪ್ಪಿಸುತ್ತಿದೆ. ಚುನಾವಣಾ ಆಯೋಗದ ತೋಳುಗಳನ್ನು ತಿಳಿಸಲಾಗಿದೆ. ಬೆದರಿಕೆ ಮೂಲಕ ಮಾಧ್ಯಮಗಳನ್ನು ಮೌನಗೊಳಿಸಲಾಗಿದೆ. ಇದೀಗ ಬಿಜೆಪಿ ಜನರನ್ನು ಇಬ್ಭಾಗ ಮಾಡುತ್ತಿದೆ. ಅದರಿಂದ ದೇಶಕ್ಕೆ ಯಾವುದೇ ಪ್ರಯೋಜನವಿಲ್ಲ ಎಂಬುದನ್ನು ಕಾಂಗ್ರೆಸ್‌ನಿಂದ ಮಾತ್ರ ಸಾಧ್ಯ ಎಂದರು.

ಇಂದಿನಿಂದ ಶಾಲೆಗಳು ಆರಂಭ

ಕಲ್ಯಾಣ ಇಲಾಖೆಯ 47, ಅನುದಾನಿತ 134, ಅನುದಾನ ರಹಿತ 354, ಕೇಂದ್ರ ಸರ್ಕಾರದ 8 ಶಾಲೆ ಸೇರಿದಂತೆ ಒಟ್ಟು 775 ಪ್ರೌಢಶಾಲೆಗಳಿವೆ. ಜಿಲ್ಲೆಯಲ್ಲಿ ಒಟ್ಟಾರೆ 2,112 ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಿದ್ದರೆ, ಬುಡಕಟ್ಟು ಮತ್ತು ಸಮಾಜ ಕಲ್ಯಾಣ ಇಲಾಖೆಯ 75, ಅನುದಾನಿತ 167, ಅನುದಾನ ರಹಿತ 899, ಕೇಂದ್ರ ಸರ್ಕಾರದ 10 ಶಾಲೆ ಸೇರಿದಂತೆ ಜಿಲ್ಲೆಯಲ್ಲಿ 3363 ಶಾಲೆಗಳಿವೆ. ಇವುಗಳಲ್ಲಿ 1ರಿಂದ 5ನೇ ತರಗತಿಯ 2,07,000 ವಿದ್ಯಾರ್ಥಿಗಳು ತರಗತಿಗೆ ಹೆಸರು ನೋಂದಾಯಿಸಿಕೊಂಡಿದ್ದಾರೆ.

6ರಿಂದ 8ನೇ ತರಗತಿಯ 1,36,000 ವಿದ್ಯಾರ್ಥಿಗಳಿದ್ದರೆ, 9ರಿಂದ 10ನೇ ತರಗತಿಯ 86,000 ವಿದ್ಯಾರ್ಥಿಗಳು ತರಗತಿಗೆ ಹಾಜರಾಗುವ ಸಂಭವವಿದೆ. ಅಂದಾಜು ಜಿಲ್ಲೆಯಲ್ಲಿ 1 ರಿಂದ 10ನೇ ತರಗತಿವರೆಗೆ ಪ್ರಸಕ್ತ ಶೈಕ್ಷಣಿಕ ಸಾಲಿನಲ್ಲಿ 4.20 ಲಕ್ಷ ವಿದ್ಯಾರ್ಥಿಗಳು ಜಿಲ್ಲೆಯ ಎಲ್ಲಾ ಬಗೆಯ ಶಾಲೆಗಳಲ್ಲಿ ಶಿಕ್ಷಣ ಪಡೆಯಲಿದ್ದಾರೆ ಎಂದು ಶಿಕ್ಷಣ ಇಲಾಖೆಯ ಅಧಿಕಾರಿಗಳು ಸ್ಪಷ್ಟನೆ ನೀಡಿದ್ದಾರೆ. ಎಲ್ಲಾ ಶಾಲೆಗಳಲ್ಲೂ ನಾಳೆಯಿಂದಲೇ ತರಗತಿ ಪುನರಾರಂಭಿಸುವುದಕ್ಕೆ ಸೂಚನೆ ನೀಡಲಾಗಿದೆ. ಅದಕ್ಕಾಗಿ ಕಳೆದ ಎರಡು ದಿನಗಳಿಂದಲೇ ಎಲ್ಲಾ ಶಾಲೆಗಳಲ್ಲೂ ಸ್ವಚ್ಛತಾ ಕಾರ್ಯಗಳನ್ನು ನಡೆಸಲಾಗಿದೆ. ಅಲ್ಲದೇ ಶೈಕ್ಷಣಿಕ ವರ್ಷದ ಮೊದಲ ದಿನವಾಗಿರುವುದರಿಂದ ಎಲ್ಲಾ ಶಾಲೆಗಳ ಶಿಕ್ಷಕರು ವಿದ್ಯಾರ್ಥಿಗಳನ್ನು ಸಂಭ್ರಮದಿಂದ ಬರಮಾಡಿಕೊಳ್ಳುವಂತೆ ಸೂಚನೆ ನೀಡಲಾಗಿದೆ.

ಸಿಕ್ಕಿದೆ ಮಹತ್ವದ ಸಿಡಿ

ಅನ್ನು ಬ್ರೇಕ್ ಮಾಡಿದ್ದ. ನಂತರ ಪಿಎಸ್‌ಐ ಹುದ್ದೆಗೆ ಸೆಲೆಕ್ಟ್ ಮಾಡಿಸಬೇಕಾದ ಅಭ್ಯರ್ಥಿಗಳ ಓಎಂಆರ್ ಶೀಟ್ ತಿದ್ದಿ ಮತ್ತೆ ಅದೇ ಟ್ರಂಕ್‌ನಲ್ಲಿ ಓಎಂಆರ್ ಶೀಟ್ ಇಟ್ಟು ಒನ್ ಟೈಂ ಲಾಕ್ ಮತ್ತೆ ಹಾಕುವ ಕೆಲಸವನ್ನು ಮಾಡಲಾಗಿತ್ತು ಎಂಬ ವಿಚಾರ ಸಿಐಡಿ ಅಧಿಕಾರಿಳಿಗಳಿಗೆ ತಿಳಿದು ಬಂದಿದೆ. ಇನ್ನು ಒನ್ ಟೈಮ್ ಲಾಕ್ ಅನ್ನು ಯಾವ ರೀತಿಯಲ್ಲಿ ಬಳಸಲಾಗುತ್ತಿತ್ತು. ಯಾವ ಪರೀಕ್ಷೆಗಲ್ಲಿನ ಹಗರಣಗಳಿಗೆ ಬಳಸ ಲಾಗುತ್ತಿದೆ? ಎಂಬದುದರ ಬಗ್ಗೆ ಸಿಐಡಿ ಅಧಿಕಾರಿಗಳು ಪರಿಶೀಲನೆ ಮಾಡುತ್ತಿದ್ದಾರೆ.

ನೂರಾರು ಸಿಡಿಗಳು; ಡಿವೈಎಸ್ಪಿ ಶಾಂತಕುಮಾರ್ ಮನೆಯಲ್ಲಿ ನೂರಾರು ಸಿಡಿಗಳು ಕೂಡ ಲಭ್ಯವಾಗಿದೆ. ಆ ಸಿಡಿಯಲ್ಲಿ 2009 ಬ್ಯಾಚ್‌ನಿಂದ ಹಿಡಿದು ಇಲ್ಲಿಯವರೆಗೆ ಕರೆದ ಎಲ್ಲಾ ಬ್ಯಾಚ್‌ನ ಡೀಲಿಂಗ್ ಪಿಎಸ್‌ಐ ಕ್ಯಾಂಡಿಡೇಟ್‌ಗಳ ರೋಲ್ ನಂಬರ್‌ಗಳು ಆ ಸಿಡಿಯಲ್ಲಿವೆಯಂತೆ. ಈಗಾಗಲೇ ಆ ಸಿಡಿಗಳನ್ನ ವಶಕ್ಕೆ ಪಡೆದು ಸಿಐಡಿ ಟೀಂ ಎಲ್ಲಾ ಸ್ಟೋರೇಜ್‌ಗಳನ್ನ ಹಾರ್ಡ್ ಡಿಸ್ಕ್‌ಗೆ ಪಡೆದು ಹಿಂದೆ ಆಯ್ಕೆಯಾದ ಅಭ್ಯರ್ಥಿಗಳ ಬುಡವನ್ನು ಅಲುಗಾಡಿಸುವಂತಹ ಕೆಲಸವನ್ನು ಮಾಡಲಿದ್ದಾರಂತೆ. ಇನ್ನುಳಿದಂತೆ ಶಾಂತಕುಮಾರ್‌ನ ರೈಟ್ ಹ್ಯಾಂಡ್ ಅಂತಾನೇ ಕರೆಸಿಕೊಂಡಿರುವ ಸಿಎಆರ್ ಮುಖ್ಯ ಪೇದೆ ಶ್ರೀಧರನ ಮನೆಯಲ್ಲೂ 16 ಲಕ್ಷದಷ್ಟು ಹಣ ಸಿಕ್ಕಿದ್ದು ಹೆಚ್ಚಿನ ವಿಚಾರಣೆಯನ್ನು ಸಿಐಡಿ ಮಾಡುತ್ತಿದೆ.

ಡಿವೈಎಸ್ಪಿ ಮನೆಯಲ್ಲಿ ಸಿಕ್ಕಿರುವ ಸಿಡಿಯಿಂದಾಗಿ ಈಗಾಲೇ ಅಕ್ರಮವನ್ನು ಎಸಗಿ ಪೊಲೀಸ್ ಇಲಾಖೆಯಲ್ಲಿ ವಿವಿಧ ಹುದ್ದೆಗಳನ್ನು ಪಡೆದಿರುವ ಅಧಿಕಾರಿಗಳಿಗೆ ನಡುಕ ಶುರುವಾಗಿದೆ. ತಮ್ಮ ಬ್ಯಾಚ್‌ನಲ್ಲಿ ನಡೆದ ಅಕ್ರಮಗಳು ಎಲ್ಲಿ ಹೊರ ಬೀಳಲಿವೆಯೋ. ಅಕ್ರಮ ಎಲ್ಲಿ ಬಯಲಾಗಲಿದೆಯೋ?. ಸಿಐಡಿ ತನಿಖೆಗೆ ಕರೆಯಬಹುದಾ ಎಂಬ ಆತಂಕದಲ್ಲಿ ಹಲವಾರು ಜನರು ಇದ್ದಾರೆ ಎನ್ನುತ್ತಿದ್ದಾರೆ ಸಿಐಡಿ ಅಧಿಕಾರಿಗಳು. ಪಿಎಸ್‌ಐ ಅಕ್ರಮ ನೇಮಕಾತಿ ಹಗರಣದ ತನಿಖೆ ಬಗೆದಷ್ಟು ಆಳಕ್ಕೆ ಹೋಗುತ್ತಿದ್ದು. ಈಗ ಸಿಕ್ಕಿ ಬಿದ್ದಿರುವ ತಂಡವೇ ಹಲವು ಪರೀಕ್ಷೆಗಳಲ್ಲಿ ಅಕ್ರಮ ಎಸಗಿರೋದು ಗೊತ್ತಾಗುತ್ತಿದೆ. ಇನ್ನು ಪರೀಕ್ಷೆಯಲ್ಲಿ ಅಕ್ರಮ ಎಸಗಿರುವ ಅಧಿಕಾರಿಗಳಿಗೆ ನಡುಕ ಹುಟ್ಟಿರುವುದಂತೂ ಸುಳ್ಳಲ್ಲ.

ಭಾರತಕ್ಕೆ ಥಾಮಸ್ ಕಪ್

ಮೇಲುಗೈ ಸಾಧಿಸಿತು. ಇದರೊಂದಿಗೆ ಭಾರತ 2–0 ಅಂತರದ ಮುನ್ನಡೆಯೊಂದಿಗೆ ಆತ್ಮವಿಶ್ವಾಸ ಹೆಚ್ಚಿಸಿಕೊಂಡಿತು. ಇದಾದ ಬಳಿಕ ನಡೆದ ಮತ್ತೊಂದು ಸಿಂಗಲ್ಸ್ ಪಂದ್ಯದಲ್ಲೂ ಯಶಸ್ಸು ಭಾರತದ ಪಾಲಾಯಿತು. ವಿಶ್ವದ ಮಾಜಿ ನಂ.1 ಆಟಗಾರ ಹೈದರಾಬಾದ್ ಮೂಲದ ಕಿಡಂಬಿ ಶ್ರೀಕಾಂತ್, ಏಷ್ಯನ್ ಚಾಂಪಿಯನ್ ಜೊನಾಥನ್ ಕ್ರಿಸ್ಟೀ ಅವರನ್ನು ಕೇವಲ 48 ನಿಮಿಷಗಳ ಅಂತರದಲ್ಲಿ 21–15 23–21 ಅಂತರದ ಗೇಮ್‌ಗಳಿಂದ ಬಗ್ಗುಬಡಿದರು. ಈ ಜಯದೊಂದಿಗೆ ಭಾರತ ತಂಡ ಬೆಸ್ಟ್ ಆಫ್ 5 ಸ್ಪರ್ಧೆಯಲ್ಲಿ 3–0 ಅಂತರದಲ್ಲಿ ಗೆದ್ದು ಮೊತ್ತ ಮೊದಲ ಬಾರಿ ಚಾಂಪಿಯನ್ಸ್ ಎನಿಸಿಕೊಳ್ಳುವ ಮೂಲಕ ಇತಿಹಾಸ ಬರೆಯಿತು.

ಗಣ್ಯರಿಂದ ಅಭಿನಂದನೆ: ಇದೇ ಮೊದಲ ಬಾರಿಗೆ ಥಾಮಸ್ ಕಪ್ ಪ್ರಶಸ್ತಿ ಗೆದ್ದು ಇತಿಹಾಸ ನಿರ್ಮಿಸಿದ ಭಾರತೀಯ ಪುರುಷರ ಬ್ಯಾಡ್ಮಿಂಟನ್ ತಂಡಕ್ಕೆ ಪ್ರಧಾನಿ ನರೇಂದ್ರ ಮೋದಿ, ಭಾರತ ಕ್ರಿಕೆಟ್ ತಂಡದ ಮಾಜಿ ಆಟಗಾರರಾದ ಗೌತಮ್ ಗಂಭೀರ್, ವಸೀಮ್ ಜಾಫರ್ ಸೇರಿದಂತೆ ಹಲವು ಗಣ್ಯರು ಅಭಿನಂದನೆ ಸಲ್ಲಿಸಿದ್ದಾರೆ.

ಕೋಟಿ ರೂ. ಬಹುಮಾನ: ಪ್ರಶಸ್ತಿ ಗೆದ್ದ ಭಾರತೀಯ ಪುರುಷರ ಬ್ಯಾಡ್ಮಿಂಟನ್ ತಂಡಕ್ಕೆ ಕೇಂದ್ರ ಕ್ರೀಡಾ ಸಚಿವಾಲಯವು 1 ಕೋಟಿ ರೂ ಬಹುಮಾನ ಘೋಷಿಸಿದೆ. ಕೇಂದ್ರ ಸಚಿವ ಅನುರಾಗ್ ಠಾಕೂರ್ 1 ಕೋಟಿ ನಗದು ಬಹುಮಾನ ಘೋಷಿಸಿ, 'ಮಲೇಷ್ಯಾ, ಡೆನ್ಮಾರ್ಕ್ ಮತ್ತು ಇಂಡೋನೇಷ್ಯಾದಂಥ ಬಲಿಷ್ಠ ತಂಡಗಳನ್ನು ಮಣಿಸಿದ ಭಾರತ ಬ್ಯಾಡ್ಮಿಂಟನ್ ತಂಡ ಕ್ರೀಡಾ ಕ್ಷೇತ್ರದಲ್ಲಿ ವಿಶಿಷ್ಟ ಸಾಧನೆ ಮಾಡಿದೆ ಎಂದಿದ್ದಾರೆ.

ಬ್ಯಾಡ್ಮಿಂಟನ್ ಸಂಸ್ಥೆಯಿಂದ 1 ಕೋಟಿ: ತಂಡದ ಆಟಗಾರರಿಗೆ ಒಟ್ಟು 1 ಕೋಟಿ ನೀಡುವುದಾಗಿ ಭಾರತ ಬ್ಯಾಡ್ಮಿಂಟನ್ ಸಂಸ್ಥೆ ಅಧ್ಯಕ್ಷ ಹಿಮಾಂತ ಬಿಸ್ವ ಶರ್ಮಾ ತಿಳಿಸಿದ್ದಾರೆ. ನೆರವು ಸಿಬ್ಬಂದಿಗೆ ಒಟ್ಟು 20 ಲಕ್ಷ ನೀಡಲಾಗುವುದು ಎಂದು ತಿಳಿಸಿದ್ದಾರೆ.

ಭಾರತಕ್ಕೆ ಮೊದಲ ಚಿನ್ನ: ಈ ಹಿಂದೆ 1979ರಲ್ಲಿ ನಡೆದ ಪಂದ್ಯಾವಳಿಯಲ್ಲಿ ಭಾರತ ಸೆಮಿಫೈನಲ್ ಪ್ರವೇಶಿಸಿದ್ದೇ ಗರಿಷ್ಠ ಸಾಧನೆಯಾಗಿತ್ತು. ಇದೀಗ ಭಾರತ ಪಂದ್ಯಾವಳಿ ಗೆಲ್ಲುವ ಮೂಲಕ ಚೊಚ್ಚಲ ಚಿನ್ನ ಗೆದ್ದ ಸಾಧನೆ ಮಾಡಿದೆ.

ಮತ್ತೆರಡು ಯುದ್ಧ ನೌಕೆಗಳ ಸೇರ್ಪಡೆ

ಇದಾಗಿದ್ದು, ಮುಂಬೈನ ಮಜಗಾಂವ್ ಡಾಕ್‌ನಲ್ಲಿ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಸಮ್ಮುಖದಲ್ಲಿ ಸಮುದ್ರ ಸಂಚಾರಕ್ಕೆ ಚಾಲನೆ ನೀಡಲಾಗುವುದು. ಸ್ಥಳೀಯವಾಗಿ ನಿರ್ಮಿತಗೊಂಡಿರುವ ಯುದ್ಧನೌಕೆ ಇದಾಗಿದೆ. ಉದಯಗಿರಿ ಎಂಬುವುದು 2ನೇ ಯುದ್ಧನೌಕೆಯಾಗಿದೆ. ಪ್ರಾಜೆಕ್ಟ್ –17ಎ ಅಡಿಯಲ್ಲಿ ಇದನ್ನು ನಿರ್ಮಿತಗೊಳಿಸಲಾಗಿದೆ. ಐಎನ್‌ಎಸ್ ಸೂರತ್ ಯುದ್ಧನೌಕೆಯು 36,000 ಕೋಟಿ ಮೊತ್ತದ ಪ್ರಾಜೆಕ್ಟ್–15ಬಿ 4ನೇ ಮತ್ತು ಅಂತಿಮ ಹಡಗು. ಈ ಯೋಜನೆಯಲ್ಲಿ ಮೂರು ರೀತಿಯ ಯುದ್ಧನೌಕೆಗಳನ್ನು ನಿರ್ಮಿಸಲಾಗಿದೆ. ಐಎನ್‌ಎಸ್ ವಿಶಾಖಪಟ್ಟಣಂ ಅನ್ನು 2021ರ ನವೆಂಬರ್‌ನಲ್ಲಿ ನಿಯೋಜಿಸಲಾಗಿದ್ದರೆ, 2ನೇ ಹಡಗು ಮರ್ಮಗೋವಾ ಈ ವರ್ಷದ ಕೊನೆಯಲ್ಲಿ ಕಾರ್ಯಾರಂಭ ಮಾಡುವ ಸಾಧ್ಯತೆಯಿದೆ. 3ನೇ ಹಡಗು ಇಂಫಾಲ್ ಪ್ರಯೋಗದ ಹಂತದಲ್ಲಿದೆ.

ಮೈಸೂರು ವೈದ್ಯಕೀಯ ಕಾಲೇಜಿನ 93ನೇ ಪದವೀಧರ ದಿನಾಚರಣೆ

ಪ್ರತಿಯೊಬ್ಬ ರೋಗಿಯಲ್ಲೂ ದೇವರನ್ನು ಕಾಣಿರಿ

- ವೈದ್ಯಕೀಯ ಪದವಿ ಪ್ರದಾನ ಸಮಾರಂಭದಲ್ಲಿ ಯುವ ವೈದ್ಯರಿಗೆ ಡಾ.ಸುಧಾಮೂರ್ತಿ ಕರೆ
- ವಿವಿಧ ವಿಭಾಗದಲ್ಲಿ ಪ್ರತಿಭಾನ್ವಿತರಿಗೆ 13 ದತ್ತಿನಿಧಿ ಪ್ರದಾನ

ಮೈಸೂರು, ಮೇ 15(ಆರ್‌ಕೆಬಿ)– ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯ 93ನೇ ಪದವೀಧರ ದಿನಾಚರಣೆ 'ಸಮ್ಮರ್ ಡ್ರೀಮ್ಸ್' 2016ರ ತಂಡದ 150 ವಿದ್ಯಾರ್ಥಿಗಳಿಗೆ ಇನ್ಫೋಸಿಸ್ ಫೌಂಡೇಷನ್‌ನ ಮಾಜಿ ಅಧ್ಯಕ್ಷೆ ಹಾಗೂ ಮೂರ್ತಿ ಫೌಂಡೇಷನ್‌ನ ಅಧ್ಯಕ್ಷೆ ಡಾ.ಸುಧಾಮೂರ್ತಿ ಅವರು ಭಾನುವಾರ ಪದವಿ ಪ್ರದಾನ ಮಾಡಿದರು.

ಮೈಸೂರಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವ ವಿದ್ಯಾನಿಲಯದ ಘಟಿಕೋತ್ಸವ ಭವನದಲ್ಲಿ ನಡೆದ ಸಮ್ಮರ್ ಡ್ರೀಮ್ಸ್ ಪದವಿ ಪ್ರದಾನ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿದ್ದ ಅವರು, 150 ಮಂದಿ ವೈದ್ಯಕೀಯ ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಿದ ನಂತರ ಘಟಿಕೋತ್ಸವ ಭಾಷಣ ಮಾಡಿ, ಯುವ ವೈದ್ಯರು ಹಣ ಗಳಿಕೆಗೆ ಆಸಕ್ತಿ ತೋರದೆ ಬಡವರು ಮತ್ತು ಅಸಹಾಯಕರ ಚಿಕಿತ್ಸೆಯತ್ತ ಹೆಚ್ಚು ಗಮನ ಕೇಂದ್ರೀಕರಿಸುವ ಮೂಲಕ ಮಾನವೀಯತೆ ತೋರಬೇಕು ಎಂದು ಕರೆ ನೀಡಿದರು.



ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯ 2016ನೇ ಬ್ಯಾಚ್‌ನ ವಿದ್ಯಾರ್ಥಿಗಳಲ್ಲಿ ಅತೀ ಹೆಚ್ಚು ಅಂಕ ಗಳಿಸಿದ ವೈದ್ಯಕೀಯ ವಿದ್ಯಾರ್ಥಿಗಳಿಗೆ ಇನ್ಫೋಸಿಸ್ ಫೌಂಡೇಷನ್‌ನ ಮಾಜಿ ಅಧ್ಯಕ್ಷೆ ಡಾ.ಸುಧಾಮೂರ್ತಿ ಪದವಿ ಪ್ರದಾನ ಮಾಡಿದರು. ಎಂಎಂಸಿಆರ್‌ಐ ಡೀನ್ ಮತ್ತು ನಿರ್ದೇಶಕ ಡಾ.ಹೆಚ್.ಎನ್.ದಿನೇಶ್, ಆದಿಚುಂಚನಗಿರಿ ವಿಶ್ವವಿದ್ಯಾನಿಲಯದ (ಎಸಿಯು) ಉಪಕುಲಪತಿ ಡಾ.ಎಂ.ಎ.ಶೇಖರ್, ಎಸಿಯು ಹಾಗೂ ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವ ವಿದ್ಯಾನಿಲಯದ (ಆರ್‌ಜಿಯುಹೆಚ್‌ಎಸ್) ವಿಶ್ರಾಂತ ಕುಲಪತಿ ಡಾ.ಎಸ್.ಚಂದ್ರಶೇಖರ ಶೆಟ್ಟಿ, ಎಂಎಂಸಿಆರ್‌ಐ ಪ್ರಾಂಶುಪಾಲ ಡಾ.ಕೆ.ಆರ್.ದಾಕ್ಷಾಯಣಿ ಇನ್ನಿತರರನ್ನು ಚಿತ್ರದಲ್ಲಿ ಕಾಣಬಹುದು.

ದೇವರು ಗುಡಿ, ಗೋಪುರಗಳಲಿದ್ದಾನೆ ಎಂಬುದಕ್ಕಿಂತ ಮುಖ್ಯವಾಗಿ ಪ್ರತಿಯೊಬ್ಬ ರೋಗಿಯಲ್ಲೂ ದೇವರಿದ್ದಾನೆ ಎಂಬುದನ್ನು ಅರಿತು ಬಡವರು, ಅಸಹಾಯಕರಿಗೆ ಸಾಧ್ಯವಾದಷ್ಟು ಚಿಕಿತ್ಸೆ ನೀಡುವ ಮೂಲಕ ದೇವರನ್ನು ಕಾಣಬೇಕು. ಇಂತಹ ಸೇವೆಯಿಂದ ಹಣವೂ ಹರಿದು ಬರುತ್ತದೆ ಎಂದು ತಮ್ಮ ವೈದ್ಯ ತಂದೆ ಮತ್ತು ಸಹೋದರಿಯನ್ನು ಉದಾಹರಿಸಿದರು.

ವೈದ್ಯ ವೃತ್ತಿ ಮಹೋನ್ನತ ಹುದ್ದೆ. ಹಣ ಮಾಡಲೆಂದು ಈ ವೃತ್ತಿಯನ್ನು ಬಳಸಿಕೊಳ್ಳಬಾರದು. ಹಣ ಗಳಿಸಬಹುದು. ಆದರೆ ಆರೋಗ್ಯವನ್ನು ಗಳಿಸುವುದು ಅಸಾಧ್ಯ. ಅನೇಕ ಶ್ರೀಮಂತರು ಹಣ ಮಾಡಿ ವಿವಿಧ ಕಾಯಿಲೆಯಿಂದ ಬಳಲುತ್ತಿರುವುದನ್ನು ಕಾಣುತ್ತೇವೆ. ಆರೋಗ್ಯ ಹದಗೆಟ್ಟರೆ ಹಣವಿದ್ದರೂ ಅಧೈರ್ಯರಾಗುತ್ತಾರೆ. ಹಾಗಾಗಿ ವೈದ್ಯರಾದವರು ರೋಗಿಗಳ ಆರೋಗ್ಯದ ಹಿಂದೆ ಇರಬೇಕೇ ಹೊರತು ಹಣದ ಹಿಂದೆ ಹೋಗಬಾರದು ಎಂದು ಯುವ ವೈದ್ಯರಿಗೆ ಸಲಹೆ ನೀಡಿದರು.

ವೈದ್ಯರಾದವರ ಜ್ಞಾನ ನಿರಂತರ ನವೀಕರಣಗೊಳ್ಳುತ್ತಿರುತ್ತದೆ. ಹೊಸ ಜ್ಞಾನ ಪಡೆಯುತ್ತಲೇ ಇರುತ್ತಾರೆ. ಹಾಗಾಗಿ ರೋಗಿಗಳ ಮೇಲೆ ಯಾವುದೇ ದುಷ್ಪರಿಣಾಮಕ್ಕೆ ಅವಕಾಶ ನೀಡದೇ ರೋಗಿಗಳ ಜೀವ ಉಳಿಸುವತ್ತ ನಿಮ್ಮ ಮಾನವೀಯ ಪ್ರಯತ್ನ ಇರಲಿ ಎಂದು ಕಿವಿಮಾತು ಹೇಳಿದರು.

ತಮ್ಮ ಮಕ್ಕಳಿಗೆ ವೈದ್ಯಕೀಯ ಶಿಕ್ಷಣ ನೀಡಿದ ವೈದ್ಯಲೋಕಕ್ಕೆ ಕೊಡುಗೆ ನೀಡಿದ ಪೋಷಕರನ್ನು ಪ್ರಶಂಸಿಸಿದ ಅವರು, ಜೊತೆಗೆ ಸಮಾಜಕ್ಕೆ ಉತ್ತಮ ಸೇವೆ ಸಲ್ಲಿಸುವ ರೀತಿಯಲ್ಲಿ ತಮ್ಮ ಮಕ್ಕಳಿಗೆ ಉತ್ತಮ ಮೌಲ್ಯಗಳನ್ನು ಕಲಿಸುವಂತೆ ಪೋಷಕರಿಗೆ ಕರೆ ನೀಡಿದರು.

ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯ ವಿವಿಧ ವಿಭಾಗದಲ್ಲಿ ಅತೀ ಹೆಚ್ಚು ಅಂಕ ಗಳಿಸಿದ ಪ್ರತಿಭಾನ್ವಿತ ವಿದ್ಯಾರ್ಥಿಗಳಾದ ಡಾ.ರಯಾನ್ ಅವರಿಗೆ 4 (ಬಯೋಕೆಮಿಸ್ಟ್ರಿ, ಮೈಕ್ರೋಬಯಲಾಜಿ, ಪಿಎಸ್‌ಎಂ, ಸರ್ಜರಿ), ಡಾ.ಗಾಯತ್ರಿ ಅವರಿಗೆ 3 (ಫಿಸಿಯಾಲಜಿ, ಪೆಥಾಲಜಿ, ಪೀಡಿಯಾಟ್ರಿಕ್), ಡಾ.ಸೃಷ್ಟಿ (ಅನಾಟಮಿ, ಫಾರ್ಮಕಾಲಜಿ)–2, ಡಾ.ಸಂದೀಪ್ (ಆಪ್ತಮಾಲಜಿ, ಮೆಡಿಸಿನ್)–2, ಡಾ.ಸಂಜಯ್ (ಫೋರೆನ್ಸಿಕ್)–1 ಡಾ.ದಿವ್ಯಶ್ರೀ (ಇಎನ್‌ಟಿ)–1 ಸೇರಿದಂತೆ ಒಟ್ಟು 13 ದತ್ತಿನಿಧಿ ಬಹುಮಾನಗಳನ್ನು ಪಡೆದುಕೊಂಡರು.

ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯ ಡೀನ್ ಮತ್ತು ನಿರ್ದೇಶಕ ಡಾ.ಹೆಚ್.ಎನ್.ದಿನೇಶ್ ಅಧ್ಯಕ್ಷತೆ ವಹಿಸಿದ್ದರು. ಆದಿಚುಂಚನಗಿರಿ ವಿಶ್ವ ವಿದ್ಯಾನಿಲಯದ (ಎಸಿಯು) ಉಪಕುಲಪತಿ ಡಾ.ಎಂ.ಎ.ಶೇಖರ್, ಎಸಿಯು ಹಾಗೂ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವ ವಿದ್ಯಾ ನಿಲಯದ (ಆರ್‌ಜಿಯುಹೆಚ್‌ಎಸ್) ವಿಶ್ರಾಂತ ಕುಲಪತಿ ಡಾ.ಎಸ್.ಚಂದ್ರಶೇಖರ ಶೆಟ್ಟಿ, ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯ ಪ್ರಾಂಶುಪಾಲ ಡಾ.ಕೆ.ಆರ್.ದಾಕ್ಷಾಯಣಿ ಉಪಸ್ಥಿತರಿದ್ದರು.

ತೃತೀಯಲಿಂಗಿಯರಿಗೆ ಅಪಘಾತ ವಿಮೆ ಬಾಂಡ್ ವಿತರಿಸುವ ಮೂಲಕ ಡಿಕೆಶಿ ಹುಟ್ಟುಹಬ್ಬ ಆಚರಣೆ



ಮೈಸೂರು,ಮೇ 15(ಪಿಎಂ)– ತೃತೀಯ ಲಿಂಗಿಯರು ಕೀಳರಿಮೆ ಹೊಂದದೆ ಭಿಕ್ಷಾಟನೆ ಕೈಬಿಟ್ಟು ಸ್ವಾವಲಂಬಿ ಬದುಕು ನಡೆಸಬೇಕೆಂದು ವಿಧಾನ ಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ ಸಲಹೆ ನೀಡಿದರು.

ಮೈಸೂರಿನ ಕಾಂಗ್ರೆಸ್ ಭವನದಲ್ಲಿ ಭಾನುವಾರ ಮೈಸೂರು ನಗರ (ಜಿಲ್ಲಾ) ಕಾಂಗ್ರೆಸ್ ಪ್ರಚಾರ ಸಮಿತಿ ವತಿಯಿಂದ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರ 60ನೇ ವರ್ಷದ ಹುಟ್ಟುಹಬ್ಬ ಅಂಗವಾಗಿ 60 ಮಂದಿ ತೃತೀಯ ಲಿಂಗೀಯರಿಗೆ ಅಪಘಾತ ವಿಮೆ ಬಾಂಡ್ ವಿತರಿಸಿ ಅವರು ಮಾತನಾಡಿದರು.

ತೃತೀಯ ಲಿಂಗಿಯರು ಭಿಕ್ಷಾಟನೆ ತ್ಯಜಿಸಿ, ವ್ಯಾಪಾರ–ವಹಿವಾಟ ನಡೆಸುವ ಮೂಲಕ ಸ್ವಾವಲಂಬಿ ಬದುಕು ಸಾಧಿಸಬೇಕು. ಕೆಲವೊಂದು ಜೈವಿಕ ವ್ಯತ್ಯಾಸಗಳಿಂದ ತೃತೀಯ ಲಿಂಗಿಯರಾಗುತ್ತಾರೆ. ಇದರಲ್ಲಿ ಅವರ ತಪ್ಪೇನೂ ಇಲ್ಲ. ಅವರು ಧೈರ್ಯವಾಗಿ ಈ ಸಮಾಜವನ್ನು ಎದುರಿಸಬೇಕು ಎಂದು ಹೇಳಿದರು.

ಮೈಸೂರು ನಗರ (ಜಿಲ್ಲಾ) ಕಾಂಗ್ರೆಸ್ ಪ್ರಚಾರ ಸಮಿತಿ ಅಧ್ಯಕ್ಷ ಎಂ.ಕೆ.ಅಶೋಕ್ ಮಾತನಾಡಿ, ಒಂದು ಲಕ್ಷ ರೂ. ಮೊತ್ತದ ಅಪಘಾತ ವಿಮೆಯ ಬಾಂಡ್ ವಿತರಣೆ ಮಾಡಿದ್ದು, ಇದರ ಜೊತೆಗೆ ಮೂರು ವರ್ಷಕ್ಕೆ ಸಮಿತಿ ವತಿಯಿಂದಲೇ ನವೀಕರಣ ಮಾಡಿಸಲಾಗುವುದು ಎಂದು ತಿಳಿಸಿದರು.

ರಾಜಕೀಯ ಪಕ್ಷಗಳಲ್ಲೇ ಕಾಂಗ್ರೆಸ್ ಮೊದಲ ಬಾರಿಗೆ ತೃತೀಯ ಲಿಂಗಿಯರ ಘಟಕ ತೆರೆದಿದೆ. ಇದರ ನಗರ ಘಟಕದ ಅಧ್ಯಕ್ಷರಾಗಿ ಚಾಂದಿನಿ ಕಾರ್ಯನಿರ್ವಹಿಸುತ್ತಿದ್ದಾರೆ. ಈಗ ಗ್ರಾಮಾಂತರ (ಜಿಲ್ಲಾ) ಘಟಕದ ಅಧ್ಯಕ್ಷರಾಗಿ ಪ್ರಣತಿ ಪ್ರಕಾಶ್ ಅವರನ್ನು ನೇಮಕ ಮಾಡಲಾಗಿದೆ ಎಂದು ಇದೇ ವೇಳೆ ಪ್ರಕಟಿಸಲಾಯಿತು. ಅಲ್ಲದೆ, ಪ್ರಣತಿ ಪ್ರಕಾಶ್ ಅವರಿಗೆ ಘಟಕದ ಜವಾಬ್ದಾರಿ ವಹಿಸಿಕೊಡಲಾಯಿತು.

ಇದಕ್ಕೂ ಮುನ್ನ ಡಿ.ಕೆ.ಶಿವಕುಮಾರ್ ಹುಟ್ಟುಹಬ್ಬ ಅಂಗವಾಗಿ ಡಿ.ಕೆ.ಶಿವಕುಮಾರ್ ಅಭಿಮಾನಿ ಬಳಗದ ವತಿಯಿಂದ ಕಾಂಗ್ರೆಸ್ ಭವನದ ಆವರಣದಲ್ಲಿ ವಿವಿಧ ಜಾತಿಯ ಗಿಡ ನೆಟ್ಟು ಸಿಹಿ ವಿತರಣೆ ಮಾಡಲಾಯಿತು. ಕಾಂಗ್ರೆಸ್ ಜಿಲ್ಲಾಧ್ಯಕ್ಷ ಡಾ.ಬಿ.ಜೆ.ವಿಜಯ ಕುಮಾರ್, ನಗರಾಧ್ಯಕ್ಷ ಆರ್.ಮೂರ್ತಿ, ಬಳಗದ ಅಧ್ಯಕ್ಷ ಜಿ.ಶ್ರೀನಾಥಬಾಬು, ಕಾಂಗ್ರೆಸ್ ಮಾಧ್ಯಮ ವಕ್ತಾರ ಮಹೇಶ್ ಮತ್ತಿತರರು ಹಾಜರಿದ್ದರು.

ಚೀಟಿ ವ್ಯವಹಾರದಲ್ಲಿ ಕೋಟ್ಯಾಂತರ ರೂ. ವಂಚನೆ

ಕೆಎಸ್‌ಆರ್‌ಟಿಸಿ ನೌಕರ, ಕುಟುಂಬಸ್ಥರ ವಿರುದ್ಧ ಕೇಸ್

ಮೈಸೂರು, ಮೇ 15– ಚೀಟಿ ವ್ಯವಹಾರದಲ್ಲಿ ಕೋಟ್ಯಾಂತರ ರೂ. ವಂಚಿಸಿರುವ ಬಗ್ಗೆ ಕೆಎಸ್‌ಆರ್‌ಟಿಸಿ ನೌಕರ ಹಾಗೂ ಆತನ ಕುಟುಂಬದವರ ವಿರುದ್ಧ ಮೈಸೂರಿನ ಆಲನಹಳ್ಳಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಮೈಸೂರಿನ ನಂದಿನಿ ಬಡಾವಣೆ ನಿವಾಸಿ ಪ್ರೀತಿ(31) ಎಂಬುವರು ದೂರು ಸಲ್ಲಿಸಿದ್ದು, ಆಲನಹಳ್ಳಿಯಲ್ಲಿ ವಾಸವಿರುವ ಕೆಎಸ್‌ಆರ್‌ಟಿಸಿ ನೌಕರ ಕಾಂತರಾಜು ಎಂಬುವರ ಪತ್ನಿ ಜಿ.ನಾಗರತ್ನ ಅಲಿಯಾಸ್ ಉಷಾ ಅವರು 2018ನೇ ಸಾಲಿನಲ್ಲಿ 3 ಲಕ್ಷ 2.5 ಲಕ್ಷ ಹಾಗೂ 2 ಲಕ್ಷ ರೂ. ಮೌಲ್ಯದ ಚೀಟಿಗಳನ್ನು ನಡೆಸುತ್ತಿದ್ದರು. ಕಾಂತರಾಜು ಅವರು ತಾನು ಕೆಎಸ್‌ಆರ್‌ಟಿಸಿ ನೌಕರನಾಗಿದ್ದು, ಚೀಟಿ ಹಣಕ್ಕೆ ತಾನು ಗ್ಯಾರಂಟಿ ಎಂದು ತಿಳಿಸಿದ ಮೇರೆಗೆ ತಾನೂ ಸೇರಿದಂತೆ 21 ಮಂದಿ ಈಕೆಯ ಬಳಿ ಚೀಟಿ ಹಾಕಿದ್ದೆವು. ಇವರ ಮಕ್ಕಳಾದ ಸಂದೇಶ್ ನಾಯಕ, ಕೆ.ಎಸ್.ಹರ್ಷಿತಾ ಮತ್ತು ಕೆ.ಎಸ್.ಐಶ್ವರ್ಯಾ ಅವರ ಮೂಲಕ ನಮ್ಮಿಂದ ಚೀಟಿ ಹಣ ವಸೂಲು ಮಾಡುತ್ತಿದ್ದರು ಎಂದು ತಿಳಿಸಿದ್ದಾರೆ.

ಚೀಟಿ ಜೊತೆಗೆ 1.50 ಕೋಟಿ ರೂ.ಗಳನ್ನು ಕೈಸಾಲದ ರೂಪದಲ್ಲಿ ಅವರು ಪಡೆದಿದ್ದು, ಚೀಟಿ ಮುಕ್ತಾಯವಾದ ನಂತರ ಹಣವನ್ನು ಕೊಡದೇ ಸಬೂಬು ಹೇಳುತ್ತಿದ್ದರು. ಒಮ್ಮೆ ಊರಿನಲ್ಲಿ ಜಮೀನು ಮಾರಿ ಹಣ ಕೊಡುತ್ತೇವೆ ಎಂತಲೂ, ಮತ್ತೊಮ್ಮೆ ಕಾಂತರಾಜು ಅವರು ತಾನು ವಿಆರ್‌ಎಸ್ ತೆಗೆದುಕೊಳ್ಳುತ್ತಿದ್ದು, ಅದರಿಂದ ಬರುವ ಹಣವನ್ನು ಕೊಡುವುದಾಗಿಯೂ ಹೇಳುತ್ತಿದ್ದರು. ಆದರೆ ಹಣ ಕೊಡದೆ ವಂಚಿಸುವ ಸಲುವಾಗಿ ಪದೇ ಪದೆ ತಮ್ಮ ವಿಳಾಸವನ್ನು ಬದಲಿಸುತ್ತಿದ್ದರು. ಹಣ ಕೇಳಲು ಹೋದರೆ ಪ್ರಾಣ ಬೆದರಿಕೆ ಹಾಕಿ ಅವಾಚ್ಯ ಶಬ್ದಗಳಿಂದ ನಿಂದಿಸುತ್ತಿದ್ದಾರೆ ಎಂದು ದೂರಿನಲ್ಲಿ ತಿಳಿಸಲಾಗಿದೆ.

ಈ ಸಂಬಂಧ ನಜರ್‌ಬಾದ್ ಠಾಣೆ ಪೊಲೀಸರು ಕೆಎಸ್‌ಆರ್‌ಟಿಸಿ ನೌಕರ ಕಾಂತರಾಜು, ಅವರ ಪತ್ನಿ ನಾಗರತ್ನ ಅಲಿಯಾಸ್ ಉಷಾ, ಮಕ್ಕಳಾದ ಸಂದೇಶ್ ನಾಯಕ್, ಹರ್ಷಿತಾ ಮತ್ತು ಐಶ್ವರ್ಯಾ ವಿರುದ್ಧ ಭಾರತೀಯ ದಂಡ ಸಂಹಿತೆ 406, 420, 504, 506 ಮತ್ತು 149ರಡಿ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ಮೈಸೂರಲ್ಲಿ ಆರೋಗ್ಯದ ಬಗ್ಗೆ ಜಾಗೃತಿ ಮೂಡಿಸಿದ ಮ್ಯಾರಥಾನ್

ನೂರಾರು ಮಂದಿ ಪಾಲ್ಗೊಂಡಿದ್ದ ಓಟ, ವಿಜೇತರಿಗೆ ಬಹುಮಾನ ವಿತರಣೆ

ಮೈಸೂರು, ಮೇ 15(ಎಂಟಿವೈ)– ಮೈಸೂರಲ್ಲಿ ಭಾನುವಾರ ಆರೋಗ್ಯದ ಬಗ್ಗೆ ಕಾಳಜಿಗಾಗಿ ಜಾಗೃತಿ ಮೂಡಿಸಲು ನಡೆಸಿದ ಎರಡು ಪ್ರತ್ಯೇಕ ಮ್ಯಾರಥಾನ್ ಹಾಗೂ ರಸ್ತೆ ಓಟಕ್ಕೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದ್ದು, ನೂರಾರು ಮಂದಿ ಪಾಲ್ಗೊಂಡು ಕ್ರೀಡಾಸ್ಫೂರ್ತಿ ಪ್ರದರ್ಶಿಸಿದರು.

ಎರಡು ಪ್ರತ್ಯೇಕ ಸ್ಥಳದಲ್ಲಿ ಏಕ ಕಾಲದಲ್ಲಿ ನಡೆದ ಓಟ ಹಾಗೂ ಮ್ಯಾರಥಾನ್‌ನಲ್ಲಿ ವಿವಿಧ ವಯೋಮಾನದ ಕ್ರೀಡಾಪಟು ಹಾಗೂ ಕ್ರೀಡಾಸಕ್ತರು ಪಾಲ್ಗೊಂಡು ಗಮನ ಸೆಳೆದರು.

'ರನ್ ಫಾರ್ ಫಿಟ್ನೆಸ್' ಮ್ಯಾರಥಾನ್: ಮೈಸೂರಿನ ಜಯಚಾಮರಾಜೇಂದ್ರ ಎಂಜಿನಿಯರಿಂಗ್ ಕಾಲೇಜಿನಲ್ಲಿ ಜೆಸಿಯಾನ ಕಾರ್ಯಕ್ರಮದ ಅಂಗವಾಗಿ ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾನಿಲಯದ ವತಿಯಿಂದ ಆಯೋಜಿಸಿದ್ದ 'ರನ್ ಫಾರ್ ಫಿಟ್ನೆಸ್' ಮ್ಯಾರಥಾನ್‌ನಲ್ಲಿ 350ಕ್ಕೂ ಹೆಚ್ಚು ಮಂದಿ ಕ್ರೀಡಾಪಟುಗಳು ಪಾಲ್ಗೊಂಡಿದ್ದರು.

ಮ್ಯಾರಥಾನ್‌ಗೆ ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಜಿ.ಹೇಮಂತ್ ಕುಮಾರ್ ಚಾಲನೆ ನೀಡಿದರು. ಬಳಿಕ ಮಾತನಾಡಿದ ಅವರು, ಜೆಸಿಯಾನದ ಅಂಗವಾಗಿ ಮ್ಯಾರಥಾನ್ ಆಯೋಜಿಸಿರುವುದು ಶ್ಲಾಘನೀಯ. ಅದರಲ್ಲೂ 'ರನ್ ಫಾರ್ ಫಿಟ್ನೆಸ್' ಹೆಸರಿಟ್ಟು, ಆರೋಗ್ಯ ಕಾಪಾಡಿಕೊಳ್ಳಲು ದೈಹಿಕ ವ್ಯಾಯಾಮ ಮಾಡಲೇಬೇಕಾದ ಅನಿವಾರ್ಯತೆ ಬಗ್ಗೆ ಅರಿವು ಮೂಡಿಸುತ್ತಿರುವುದು ಉತ್ತಮ ಬೆಳವಣಿಗೆ. ನಾನು ವೃತ್ತಿ ಜೀವನ ಆರಂಭಿಸಿದ್ದು ಜೆಎಸ್‌ಎಸ್ ಸಂಸ್ಥೆಯಲ್ಲೇ. ಬಳಿಕ ಎಂಎಸ್ಸಿ ಕಂಪ್ಯೂಟರ್ ಸೈನ್ಸ್ ಪೂರ್ಣಗೊಳಿಸಿದ್ದು ಜೆಸಿಇನಲ್ಲಿ. ಹೀಗಾಗಿ ಜೆಸಿಇನಲ್ಲಿ ನನಗೆ ಸ್ನೇಹಿತರಿದ್ದಾರೆ. ಜೆಸಿಯಾನಕ್ಕೆ ಹಲವು ವರ್ಷಗಳ ಇತಿಹಾಸವಿದೆ. ಮ್ಯಾರಥಾನ್‌ನಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಆಸಕ್ತರು ಪಾಲ್ಗೊಂಡಿರುವುದು ಹೆಮ್ಮೆಯ ಸಂಗತಿ ಎಂದರು.



ಎಸ್‌ಜೆಸಿಇ ಆಯೋಜಿಸಿದ್ದ 'ರನ್ ಫಾರ್ ಫಿಟ್ನೆಸ್' ಮ್ಯಾರಥಾನ್‌ನಲ್ಲಿ ಓಡುತ್ತಿರುವ ಕ್ರೀಡಾಪಟುಗಳು.

ಮ್ಯಾರಥಾನ್ ಸಾಗಿದ ಮಾರ್ಗ: ಎಸ್‌ಜೆಸಿಇ ಆವರಣದಿಂದ ಆರಂಭವಾದ ಮ್ಯಾರಥಾನ್ ಸ್ಪೀಚ್ ಅಂಡ್ ಹಿಯರಿಂಗ್, ಬೋಗಾದಿ ರಸ್ತೆ, ಮೈಸೂರು ವಿವಿ ದ್ವಾರ, ಬಯಲು ರಂಗಮಂದಿರದ ರಸ್ತೆ, ಹುಣಸೂರು ರಸ್ತೆ, ಪ್ರಿಮಿಯರ್ ಸ್ಟುಡಿಯೋ ಮೂಲಕ ಮತ್ತೆ ಎಸ್‌ಜೆಸಿಇ ಆವರಣ ತಲುಪಿತು. ಒಟ್ಟು 6 ಕಿಮಿ ದೂರದ ಮ್ಯಾರಥಾನ್‌ನಲ್ಲಿ ಬಹುತೇಕ ಎಲ್ಲರೂ ಪೂರ್ಣಗೊಳಿಸಿ ಗಮನ ಸೆಳೆದರು. ಅದರಲ್ಲೂ ಈ ಮ್ಯಾರಥಾನ್‌ನಲ್ಲಿ 6 ವರ್ಷದ ದರ್ಶನ್, 78 ವರ್ಷದ ಮುಕುಂದ್ ಪಾಲ್ಗೊಂಡಿದ್ದು ವಿಶೇಷ ಎನಿಸಿತ್ತು.

ವಿಜೇತರು: ರನ್ ಫಾರ್ ಫಿಟ್ನೆಸ್ ಮ್ಯಾರಥಾನ್‌ನಲ್ಲಿ ಮೊದಲ 11 ಸ್ಥಾನ ಪಡೆದ ಪಟುಗಳಿಗೆ ಬಹುಮಾನ ನೀಡಲಾಯಿತು. 1–5ನೇ ಸ್ಥಾನ ಪಡೆದ ಪಿ.ಮಣಿಕಂಠ, ಸಿ.ಎಸ್.ಲಕ್ಷ್ಮೀಶ, ಎಸ್.ಎನ್.ಶ್ರೀಧರ, ಪುರುಷೋತ್ತಮ್ ಹಾಗೂ ಸುಮಂತ್ ಅವರಿಗೆ ತಲಾ 2 ಸಾವಿರ ರೂ. ನಗದು ಬಹುಮಾನ, ಪ್ರಮಾಣ ಪತ್ರ, ಪದಕ ನೀಡಲಾಯಿತು. 6 ರಿಂದ 11ನೇ ಸ್ಥಾನ ಪಡೆದ ರಾಹುಲ್, ಗೋಪಿ, ಶಿವಶಂಕರ, ಶ್ರೀಕಾಂತ್, ಮನೋಜ್ ಕುಮಾರ್, ರವಿರಾಜ್ ಅವರಿಗೆ ತಲಾ 1 ಸಾವಿರ ನಗದು ಬಹುಮಾನ, ಪ್ರಮಾಣ ಪತ್ರ, ಪದಕ ನೀಡಲಾಯಿತು. ಅಲ್ಲದೆ, ಮ್ಯಾರಥಾನ್‌ನಲ್ಲಿ ಪಾಲ್ಗೊಂಡಿದ್ದ ಎಲ್ಲರಿಗೂ ಪ್ರಮಾಣ ಪತ್ರ ನೀಡಲಾಯಿತು.

ಈ ಸಂದರ್ಭದಲ್ಲಿ ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಎ.ಎನ್.ಸಂತೋಷ್ ಕುಮಾರ್, ಪ್ರಾಂಶುಪಾಲ ಪ್ರೊ.ಎಸ್.ಬಿ.ಕಿವಡೆ, ವಿದ್ಯಾರ್ಥಿಗಳ ಕ್ಷೇಮಪಾಲನಾಧಿಕಾರಿ ಎಂ.ಎಸ್.ಸುನೀಲ್ ಕುಮಾರ್, ಕೆ.ಪಿ.ಪ್ರಜ್ವಲ್, ಜಯಂತ್, ಪೂರಬ್ ಗೌಡ ಹಾಗೂ ಇನ್ನಿತರರು ಪಾಲ್ಗೊಂಡಿದ್ದರು.

ಆರೋಗ್ಯಕ್ಕಾಗಿ ಓಟ: ಮೈಸೂರು ಜಿಲ್ಲಾ ಮಾಸ್ಟರ್ಸ್ ಅಥ್ಲೆಟಿಕ್ಸ್ ಅಸೋಸಿಯೇಷನ್ ವತಿಯಿಂದ ಆಯೋಜಿಸಿದ್ದ 'ಆರ್‌ಎನ್‌ಎಂ ವಿಜಯಲಕ್ಷ್ಮೀ ನಾರಾಯಣಸಿಂಗ್ ಮೆಮೊರಿಯಲ್ ರೋಡ್ ರೇಸ್ ಆರೋಗ್ಯಕ್ಕಾಗಿ ಓಟದಲ್ಲಿ ವಿವಿಧ ವಯೋಮಾನದ 500ಕ್ಕೂ ಹೆಚ್ಚು ಮಂದಿ ಪಾಲ್ಗೊಂಡಿದ್ದರು. ಮೈಸೂರಿನ ಜಿಲ್ಲಾಧಿಕಾರಿ ಕಚೇರಿ ಬಳಿ ಆರಂಭವಾದ ಓಟಕ್ಕೆ ಶಾಸಕ ಎಲ್.ನಾಗೇಂದ್ರ ಚಾಲನೆ ನೀಡಿದರು.

10ರಿಂದ 30 ವರ್ಷದೊಳಗಿನವರ ವಿಭಾಗದ 2 ಕಿ.ಮಿ ದೂರದ ಓಟದ ಸ್ಪರ್ಧೆಯಲ್ಲಿ ಕೃಷ್ಣರಾಜ ಬುಲೆವಾರ್ಡ್ ರಸ್ತೆಯಲ್ಲಿ ಸಾಗಿ ನ್ಯಾಯಾಲಯದ ಮುಂಭಾಗದ ಮತ್ತೆ ಜಿಲ್ಲಾಧಿಕಾರಿ ಕಚೇರಿ ತಲುಪಿದರು. 40 ವರ್ಷ ಮೇಲ್ಪಟ್ಟವರಿಗೆ 1 ಕಿ.ಮಿ ಓಟದಲ್ಲಿ ಓವಲ್ ಮೈದಾನದವರೆಗೂ ಹೋಗಿ ಮತ್ತೆ ಜಿಲ್ಲಾಧಿಕಾರಿ ಕಚೇರಿ ಬಳಿಗೆ ಸಮಾಪ್ತಿಗೊಳಿಸಿದರು. 5 ರಿಂದ 10 ವರ್ಷದ ಮಕ್ಕಳಿಗೆ 100 ಮೀಟರ್ ಓಟದ ಸ್ಪರ್ಧೆ ನಡೆಸಲಾಯಿತು. ರಸ್ತೆ ಓಟದಲ್ಲಿ ತಿ.ನರಸೀಪುರ ತಾಲೂಕಿನ ಕುರುಬೂರಿನ ಕ್ರೀಡಾಪಟುಗಳು ಪಾರುಪತ್ಯ ಮೆರೆದು ಗಮನ ಸೆಳೆದರು.

10 ರಿಂದ 15 ವರ್ಷದ ಬಾಲಕರ ವಿಭಾಗ: ಈ ವಿಭಾಗದ 2 ಕಿ.ಮಿ ಓಟದ ಸ್ಪರ್ಧೆಯಲ್ಲಿ ಕುರುಬೂರಿನ ಕ್ರೀಡಾಪಟುಗಳಾದ ಕಿಶೋರ್, ಎನ್.ವಿಶ್ವ, ಮಲ್ಲಿಕಾರ್ಜುನ, ರಂಜಿತ್, ಅಮರ್, ಶಾಂತ ನಾಗರಾಜು ಮೊದಲ ಆರು ಸ್ಥಾನದಲ್ಲಿ ಕ್ರಮವಾಗಿ ಕ್ರಮಿಸಿ ಬಹುಮಾನ ಪಡೆದರು. **ಬಾಲಕಿಯರ ವಿಭಾಗ:** ಕುರುಬೂರಿನ ಪ್ರಕೃತಿ, ಭಾನುಪ್ರಿಯ, ಅನನ್ಯ, ಮಾನಸ, ಸಹನಾ, ಸ್ಮಿತಾ ಪ್ರಶಸ್ತಿ ತನ್ನದಾಗಿಸಿಕೊಂಡರು.

15 ರಿಂದ 30 ವರ್ಷ, ಬಾಲಕ, ಪುರುಷ ವಿಭಾಗ: ಈ ವಿಭಾಗದ 2 ಕಿ.ಮೀ. ಓಟದಲ್ಲಿ ಹುಣಸೂರಿನ ಅರುಣ, ಬೆಳವಾಡಿಯ ಶಿವು, ಕುರುಬೂರಿನ ಎನ್.ದೊರೆಸ್ವಾಮಿ, ಮಹದೇವಸ್ವಾಮಿ, ಬೆಳವಾಡಿಯ ಎನ್.ಎ.ಸುಬ್ಬಯ್ಯ, ಕುರುಬೂರಿನ ಎಂ.ಹರ್ಷ ಬಹುಮಾನ ಗಳಿಸಿಕೊಂಡರು. **ಬಾಲಕಿಯರು ಹಾಗೂ ಮಹಿಳೆಯರ ವಿಭಾಗ:** ಕುರುಬೂರಿನ ತೇಜಸ್ವಿನಿ, ಚೈತ್ರ, ತುಳಸಿ, ಮೋನಿಕಾ, ಅರ್ಪಿತಾ, ವಿದ್ಯಾ ಬಹುಮಾನ ಪಡೆದುಕೊಂಡರು.

30 ರಿಂದ 40 ವರ್ಷ ಪುರುಷರ ವಿಭಾಗ: 1 ಕಿ.ಮೀ ಓಟದ ಸ್ಪರ್ಧೆಯಲ್ಲಿ ರಘುನಂದನ್, ಜೆ.ಅಭಿಷೇಕ್, ಎಂ.ಪಿ.ಅಜಿತ್, ಮಂಜುನಾಥ್, ರಕ್ಷಿತ್, ಎನ್.ಮನು, **40 ರಿಂದ 50 ಪುರುಷರ ವಿಭಾಗ:** 1 ಕಿ.ಮೀ ಓಟದ ಸ್ಪರ್ಧೆಯಲ್ಲಿ ಕೆ.ಆರ್.ಚರಣ್, ಚಲುವೇಗೌಡ, ಬಿ.ಗೋವಿಂದ, ಎಂ.ಜಿ.ಶಿವಣ್ಣ, ಚಂದ್ರಮೌಳೇಶ್ವರ, ದೇವಯ್ಯ ಬಹುಮಾನ ಪಡೆದರು. ಉಳಿದಂತೆ ಓಟದಲ್ಲಿ ಪಾಲ್ಗೊಂಡಿದ್ದವರಿಗೆ ಪ್ರಮಾಣ ಪತ್ರ ವಿತರಿಸಲಾಯಿತು.

ಈ ಸಂದರ್ಭದಲ್ಲಿ ಮೈಸೂರು ವಿವಿಯ ದೈಹಿಕ ಶಿಕ್ಷಣ ವಿಭಾಗದ ನಿರ್ದೇಶಕ ಡಾ.ಪಿ.ಕೃಷ್ಣಯ್ಯ, ಮಾಜಿ ನಿರ್ದೇಶಕ ಡಾ.ಸಿ.ಕೃಷ್ಣ, ಮೈಸೂರು ಜಿಲ್ಲಾ ಮಾಸ್ಟರ್ಸ್ ಅಥ್ಲೆಟಿಕ್ಸ್ ಅಸೋಸಿಯೇಷನ್ ಅಧ್ಯಕ್ಷೆ ಸುಮನಾ ನರಸಿಂಹಮೂರ್ತಿ, ಕಾರ್ಯದರ್ಶಿ ಪಿ.ಜಿ.ಸತ್ಯನಾರಾಯಣ, ಉಪಾಧ್ಯಕ್ಷ ಯೋಗೇಂದ್ರ, ಎನ್.ಆರ್.ಶಂಕರ್‌ರಾವ್, ಮುಡಾ ಸದಸ್ಯ ಎಂ.ಎನ್.ನವೀನ್‌ಕುಮಾರ್, ಸೋಮಶೇಖರ್, ಮಹದೇವ್, ಚಂದ್ರಶೇಖರ್, ಸುಬ್ಬಣ್ಣ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಗಟ್ಟವಾಡಿಯಲ್ಲಿ 18 ಅಡಿ ಎತ್ತರದ ಸುಬ್ರಹ್ಮಣ್ಯಸ್ವಾಮಿ ಏಕಶಿಲಾ ವಿಗ್ರಹ ಪ್ರತಿಷ್ಠಾಪನೆ



ನಂಜನಗೂಡು, ಮೇ 15– ತಾಲೂಕಿನ ಗಟ್ಟವಾಡಿಯ ಶ್ರೀಸುಬ್ರಹ್ಮಣ್ಯೇಶ್ವರ ಕ್ಷೇತ್ರದಲ್ಲಿ 18 ಅಡಿ ಎತ್ತರದ ಶ್ರೀಸುಬ್ರಹ್ಮಣ್ಯಸ್ವಾಮಿಯವರ ಬೃಹತ್ ಏಕಶಿಲಾ ವಿಗ್ರಹ ಪ್ರತಿಷ್ಠಾಪನೆ ಭಾನುವಾರ ಸಕಲ ಧಾರ್ಮಿಕ ವಿಧಿ ವಿಧಾನಗಳೊಂದಿಗೆ ನೆರವೇರಿತು.

18 ಅಡಿ ಎತ್ತರದ ಸುಬ್ರಹ್ಮಣ್ಯೇಶ್ವರ ಏಕಶಿಲಾ ವಿಗ್ರಹವನ್ನು ಭೂಮಿಯಿಂದ 36 ಅಡಿ ಎತ್ತರದಲ್ಲಿ ಪ್ರತಿಷ್ಠಾಪಿಸಿರುವುದು ದೇಶದಲ್ಲಿ ಪ್ರಥಮ ಎನ್ನಲಾಗಿದ್ದು, ಇದನ್ನು ಕಣ್ತುಂಬಿಕೊಳ್ಳಲು ನಾನಾ ಕಡೆಯಿಂದ ಭಕ್ತರು ಜಮಾಯಿಸಿದ್ದರು.

ಭಾನುವಾರ ಮುಂಜಾನೆ 4 ಗಂಟೆ ವೇಳೆಗೆ ವಿಗ್ರಹ ಪ್ರತಿಷ್ಠಾಪನಾ ಕಾರ್ಯ ಧಾರ್ಮಿಕ ವಿಧಿವಿಧಾನದೊಂದಿಗೆ ಸಾಂಗವಾಗಿ ನೆರವೇರಿತು. ನಂತರ ಶಾಸ್ತ್ರೋಕ್ತ ವಿಧಿವಿಧಾನ ನಡೆಸಿ ಬಳಿಕ ಕಳಾಶಾರಾಧನೆ ನಡೆಸಲಾಯಿತು. ನಂತರ ಭಕ್ತರಿಂದಲೇ ಶ್ರೀಸ್ವಾಮಿಗೆ ಪ್ರಥಮ ಕುಂಭಾಭಿಷೇಕ ನೆರವೇರಿಸಲಾಯಿತು. ಶಾಸಕ ಬಿ.ಹರ್ಷವರ್ಧನ್, ಧರ್ಮಾಧಿಕಾರಿ ಸುಬ್ರಹ್ಮಣ್ಯ, ತಪೋಭೂಮಿ ಚಾರಿಟಬಲ್ ಟ್ರಸ್ಟ್ ಅಧ್ಯಕ್ಷೆ ರೂಪ ಸುಬ್ರಹ್ಮಣ್ಯ, ಟ್ರಸ್ಟಿ ಡಾ.ಎಸ್.ಶ್ರೀಕಾಂತ್ ಸೇರಿದಂತೆ ಪ್ರಮುಖರು ಕುಂಭಾಭಿಷೇಕ ನೆರವೇರಿಸುವ ಮೂಲಕ ಭಕ್ತಿ ಸಮರ್ಪಿಸಿದರು. ನಂತರ ಸುಬ್ರಹ್ಮಣ್ಯ ಸಹಸ್ರ ಹೋಮ ನೆರವೇರಿತು. ಪೂರ್ಣಾಹುತಿ, ಮಹಾ ಮಂಗಳಾರತಿ ನೆರವೇರಿಸಿದ ನಂತರ ಮಹಾಪ್ರಸಾದ ವಿನಿಯೋಗಕ್ಕೆ ಅನುವು ಮಾಡಿಕೊಡಲಾಯಿತು.

ಇದಕ್ಕೂ ಮುನ್ನ ಮೇ 13ರಂದು ಶ್ರೀಮೇರು ಸಹಿತ ಶ್ರೀರಾಜರಾಜೇಶ್ವರಿ ವಿಗ್ರಹ ಪ್ರತಿಷ್ಠಾಪನೆ ನೆರವೇರಿದ್ದು, ಈ ವೇಳೆ ಯದುವಂಶಸ್ಥ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ಭಾಗಿಯಾಗಿದ್ದರು.

ಸುಬ್ರಹ್ಮಣ್ಯಸ್ವಾಮಿಗೆ ಅಭಿಷೇಕ ನೆರವೇರಿಸಿ ಮಾತನಾಡಿದ ಶಾಸಕ ಬಿ.ಹರ್ಷವರ್ಧನ್, ಎಲ್ಲಾ ಕಷ್ಟ ನಿವಾರಣೆ ಮಾಡುವ ಸುಬ್ರಹ್ಮಣ್ಯೇಶ್ವರನನ್ನು ನೋಡಲು ಭಕ್ತರು ಕುಕ್ಕೆ ಸುಬ್ರಹ್ಮಣ್ಯಕ್ಕೆ ಹೋಗುತ್ತಾರೆ. ಇದೀಗ ನಾನು ಪ್ರತಿನಿಧಿಸುವ ಕ್ಷೇತ್ರದಲ್ಲಿ ಸುಬ್ರಹ್ಮಣ್ಯೇಶ್ವರ ಸ್ವಾಮಿ ಸನ್ನಿಧಿ ಸ್ಥಾಪನೆಗೊಂಡು 18 ಅಡಿ ಎತ್ತರದ ಏಕಶಿಲಾ ಪ್ರತಿಷ್ಠಾಪನೆಯಲ್ಲಿ ಭಾಗಿಯಾಗಿರುವುದು ನನ್ನ ಸೌಭಾಗ್ಯ. ಈ ಭಾಗದ ಭಕ್ತರಿಗೆ ಸಮೀಪದಲ್ಲೇ ಸುಬ್ರಹ್ಮಣ್ಯೇಶ್ವರಸ್ವಾಮಿ ದರ್ಶನ ಮಾಡುವ ಅವಕಾಶ ಸಿಕ್ಕಂತಾಗಿದೆ. ಶ್ರೀಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಕ್ಷೇತ್ರದ ಶಾಸಕನಾಗಿ ಎಲ್ಲಾ ರೀತಿಯ ನೆರವು ನೀಡಲಾಗುವುದು ಎಂದರು. ದೇವಾಲಯದ ಧರ್ಮಾಧಿಕಾರಿ ಸುಬ್ರಹ್ಮಣ್ಯ ಮಾತನಾಡಿ, ಶ್ರೀಕ್ಷೇತ್ರದಲ್ಲಿ ಪ್ರತಿವರ್ಷ ಡಿಸೆಂಬರ್ ತಿಂಗಳ ಕುಮಾರ ಷಷ್ಠಿಯಂದು ಸ್ವಾಮಿಗೆ ಕುಂಭಾಭಿಷೇಕ ನಡೆಸಲಾಗುವುದು. ಈ ಕ್ಷೇತ್ರ ಮುಂದಿನ ದಿನಗಳಲ್ಲಿ ಉತ್ತಮ ಶ್ರೀಕ್ಷೇತ್ರವಾಗಿ ರೂಪುಗೊಳ್ಳಲಿದೆ ಎಂದರು. ಟ್ರಸ್ಟಿ ಡಾ.ಎಸ್.ಶ್ರೀಕಾಂತ್ ಮಾತನಾಡಿ, ದೇವಾಲಯದ ಆವರಣದಲ್ಲಿ ದಾಸೋಹ ಭವನ, ಸೇರಿದಂತೆ ಅಭಿವೃದ್ಧಿಗೆ ಸಹಕಾರ ನೀಡುವಂತೆ ಶಾಸಕ ಬಿ.ಹರ್ಷವರ್ಧನ್‌ರನ್ನು ಮನವಿ ಮಾಡಿದರು. ಈ ವೇಳೆ ರೂಪ ಸುಬ್ರಹ್ಮಣ್ಯ ಸೇರಿದಂತೆ ಅಪಾರ ಭಕ್ತವೃಂದ ಇದ್ದರು.

ಪತಿಯಿಂದಲೇ ಪತ್ನಿ ಹತ್ಯೆ

ಪಿರಿಯಾಪಟ್ಟಣ, ಮೇ 15(ವೀರೇಶ್)– ಪತಿಯೇ ಪತ್ನಿಯನ್ನು ಹತ್ಯೆಗೈದು ಪರಾರಿಯಾಗಿರುವ ಘಟನೆ ತಾಲೂಕಿನ ಸತ್ತೇಗಾಲ ಬಿ.ಕಾಲೋನಿಯಲ್ಲಿ ಶನಿವಾರ ರಾತ್ರಿ ನಡೆದಿದೆ. ಗ್ರಾಮದ ನಿವಾಸಿ ಲಕ್ಷ್ಮಿ(35) ಹತ್ಯೆಗೀಡಾಗಿದ್ದು, ಚಂದ್ರ ಹತ್ಯೆಗೈದ ಆರೋಪಿ.



ವಿವರ: ಲಕ್ಷ್ಮಿ ಹಾಗೂ ಚಂದ್ರ ತಾಲೂಕಿನ ಸತ್ತೇಗಾಲ ಬಿ.ಕಾಲೋನಿ ನಿವಾಸಿಗಳಾಗಿದ್ದು, ಕಳೆದ 12 ವರ್ಷಗಳ ಹಿಂದೆ ಪ್ರೀತಿಸಿ ವಿವಾಹವಾಗಿದ್ದರು. ಈ ದಂಪತಿಗೆ ಓರ್ವ ಪುತ್ರ, ಪುತ್ರಿ ಇದ್ದು ಅನ್ಯೋನ್ಯವಾಗಿದ್ದರು. ಆದರೆ ಕಳೆದ 5 ವರ್ಷಗಳ ಹಿಂದೆ ಗ್ರಾಮದ ರಮೇಶ್ ಎಂಬಾತನ ಜೊತೆ ನನ್ನ ಅಕ್ಕ ಲಕ್ಷ್ಮಿ ಫೋನ್‌ನಲ್ಲಿ ಮಾತನಾಡಿದ್ದಳು. ಇದನ್ನೇ ಗುರಿಯಾಗಿಸಿಕೊಂಡು ನನ್ನ ಭಾವ ಅಕ್ಕನ ಸಂಶಯಗೊಂಡು ಆಗಾಗ್ಗೆ ಜಗಳವಾಡುತ್ತಿದ್ದ. ಈ ಸಂಬಂಧ ಗ್ರಾಮದ ಮುಖಂಡರು, ಸಂಬಂಧಿಕರ ಸಮ್ಮುಖದಲ್ಲಿ ನ್ಯಾಯ ಪಂಚಾಯಿತಿ ನಡೆಸಿದ್ದರೂ, ತನ್ನ ಚಾಳಿ ಮುಂದುವರೆಸಿದ್ದ ಭಾವ ಚಂದ್ರ ನನ್ನ ಅಕ್ಕನ ಮೇಲೆ ಶನಿವಾರ ರಾತ್ರಿ ಹಲ್ಲೆ ನಡೆಸಿ ಆಕೆಯನ್ನು ಹತ್ಯೆಗೈದು ಪರಾರಿಯಾಗಿದ್ದಾನೆ ಎಂದು ಲಕ್ಷ್ಮಿ ಸಹೋದರ ಮಂಜುನಾಥ್ ಪಿರಿಯಾಪಟ್ಟಣ ಠಾಣೆಗೆ ದೂರು ನೀಡಿದ್ದಾರೆ. ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ಆರೋಪಿ ಪತ್ತೆಗೆ ಬಲೆ ಬೀಸಿದ್ದಾರೆ. ಸ್ಥಳಕ್ಕೆ ಎಎಸ್ಪಿ ಶಿವಕುಮಾರ್, ಡಿವೈಎಸ್ಪಿ ಪಿ.ರವಿಕುಮಾರ್, ಇನ್ಸ್‌ಪೆಕ್ಟರ್ ಜಗದೀಶ್, ಎಸ್‌ಐ ಪುಟ್ಟರಾಜು ಭೇಟಿ ನೀಡಿ ಪರಿಶೀಲನೆ ನಡೆಸಿ, ಶವವನ್ನು ಮೈಸೂರಿನ ಕೆ.ಆರ್.ಆಸ್ಪತ್ರೆಗೆ ಮರಣೋತ್ತರ ಪರೀಕ್ಷೆಗೆ ರವಾನಿಸಿದರು.

ತಿ.ನರಸೀಪುರ ವಿವಿಧೆಡೆ ಮಧು ಜಿ.ಮಾದೇಗೌಡ ಪ್ರಚಾರ



ತಿ.ನರಸೀಪುರ ಮೇ 15 (ಎಸ್‌ಕೆ)– ಪಟ್ಟಣದ ವಿವಿಧೆಡೆ ದಕ್ಷಿಣ ಪದವೀಧರರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಮಧು ಜಿ.ಮಾದೇಗೌಡ ಮತದಾರರನ್ನು ಭೇಟಿ ಮಾಡಿ ಮತಯಾಚಿಸಿದರು.

ಶಾಸಕ ಡಾ.ಯತೀಂದ್ರ ಜೊತೆಗೂಡಿ ಮತಯಾಚನೆ ಆರಂಭಿಸಿದ ಮಧು ಜಿ.ಮಾದೇಗೌಡ ಪ್ರಮುಖ ಶಿಕ್ಷಣ ಸಂಸ್ಥೆಗಳು ಸೇರಿದಂತೆ ನೋಂದಾಯಿತ ಪದವೀಧರರು, ಕ್ಷೇತ್ರ ಶಿಕ್ಷಣಾಧಿಕಾರಿ ಕಚೇರಿ ಆವರಣದಲ್ಲಿ ಆಯೋಜಿಸಿದ್ದ ತರಬೇತಿ ಕಾರ್ಯಾಗಾರದಲ್ಲಿ ಹಾಜರಿದ್ದ ಪದವೀಧರ ಶಿಕ್ಷಕರನ್ನು ಪ್ರತ್ಯೇಕವಾಗಿ ಭೇಟಿಯಾಗಿ ಮತಯಾಚಿಸಿದರು. ಬಳಿಕ ಮಾತನಾಡಿದ ಅವರು, ಕಾವೇರಿ ನೀರಿಗಾಗಿ ಹೋರಾಟ ನಡೆಸಲು ಜೀವನವನ್ನೇ ಮುಡುಪಾಗಿಟ್ಟ ಜಿ.ಮಾದೇಗೌಡರ ಪುತ್ರನಾದ ನಾನು ಕಳೆದ 2 ದಶಕಗಳಿಂದಲೂ ಶಿಕ್ಷಣ ಕ್ಷೇತ್ರದಲ್ಲಿ ಸೇವೆ ಸಲ್ಲಿಸುತ್ತಿದ್ದೇನೆ. ಭಾರತಿ ಶಿಕ್ಷಣ ಸಂಸ್ಥೆ ಮೂಲಕ ಸಾವಿರಾರು ಶಿಕ್ಷಕರಿಗೆ ಉದ್ಯೋಗ, ಲಕ್ಷಾಂತರ ವಿದ್ಯಾರ್ಥಿಗಳಿಗೆ ಶಿಕ್ಷಣ ನೀಡುತ್ತಿದ್ದೇವೆ. ಪದವೀಧರರು ಹಾಗೂ ಶಿಕ್ಷಣ ಕ್ಷೇತ್ರದ ಸಮಸ್ಯೆಗಳ ಅರಿವಿದೆ. ಹೀಗಾಗಿ ಪದವೀಧರರ ಧ್ವನಿಯಾಗಿ ನಿಲ್ಲುತ್ತೇನೆ. ಪದವೀಧರರು ತಮ್ಮ ಮೊದಲ ಪ್ರಾಶಸ್ತ್ಯದ ಮತ ನೀಡಬೇಕೆಂದು ಮನವಿ ಮಾಡಿದರು.

ಮರಿತಿಬ್ಬೇಗೌಡರ ಬೆಂಬಲ ಕೋರುವೆ: ಜೆಡಿಎಸ್ ಅಭ್ಯರ್ಥಿ ಹೆಚ್.ಕೆ.ರಾಮು ವಿರುದ್ಧ ಬಹಿರಂಗವಾಗಿ ಅಸಮಾಧಾನ ಹೊರಹಾಕಿರುವ ಮರಿತಿಬ್ಬೇಗೌಡರ ಬಗ್ಗೆ ಮಾಧ್ಯಮಗಳಲ್ಲಿ ಗಮನಿಸಿದ್ದೇನೆ. ಚುನಾವಣೆಯಲ್ಲಿ ಅವರು ಸೇರಿದಂತೆ ನಮ್ಮನ್ನು ಬೆಂಬಲಿಸುವ ಪ್ರತಿಯೊಬ್ಬರ ಸಹಕಾರವನ್ನು ವೈಯಕ್ತಿಕವಾಗಿ ಕೋರುತ್ತೇನೆ ಎಂದರು. ಈ ವೇಳೆ ಕಾಂಗ್ರೆಸ್ ವೈದ್ಯಕೀಯ ವಿಭಾಗದ ಜಿಲ್ಲಾಧ್ಯಕ್ಷ ಡಾ.ಪ್ರದೀಪ್, ಶಿಕ್ಷಕರ ಸಂಘದ ಅಧ್ಯಕ್ಷ ಹೆಚ್.ಡಿ.ಮಾದಪ್ಪ, ಉಪಾಧ್ಯಕ್ಷ ಪುಟ್ಟಸ್ವಾಮಿ ಇದ್ದರು.

ಶಾಸಕನಾದ ಬಳಿಕ ಭಗೀರಥ ಪ್ರಯತ್ನದಿಂದ

ಭೇರ್ಯ, ಸುತ್ತಮುತ್ತಲ ಗ್ರಾಮಗಳಿಗೆ ಶಾಶ್ವತ ಕುಡಿಯುವ ನೀರು

ಭಗೀರಥ ಜಯಂತಿಯಲ್ಲಿ ಶಾಸಕ ಸಾ.ರಾ.ಮಹೇಶ್



ಭೇರ್ಯ, ಮೇ 15– ನಾನು ಶಾಸಕನಾದ ಮೇಲೆ ಭಗೀರಥ ಪ್ರಯತ್ನದಿಂದ ಭೇರ್ಯ ಹಾಗೂ ಸುತ್ತಮುತ್ತಲಿನ ಗ್ರಾಮಗಳಿಗೆ ಶಾಶ್ವತ ಕುಡಿಯುವ ನೀರು ಒದಗಿಸಿದೆ ಎಂದು ಶಾಸಕ ಸಾ.ರಾ.ಮಹೇಶ್ ತಿಳಿಸಿದರು.

ಭೇರ್ಯದಲ್ಲಿ ಭಗೀರಥ ಉಪ್ಪಾರ ಸಂಘದಿಂದ ಹಮ್ಮಿಕೊಂಡಿದ್ದ ಭಗೀರಥ ಜಯಂತ್ಯುತ್ಸವದಲ್ಲಿ ಮಾತನಾಡಿದ ಅವರು, ಮಾಜಿ ಸಿಎಂ ಸಿದ್ದರಾಮಯ್ಯನವರು 2013ರಲ್ಲಿ ಮುಖ್ಯಮಂತ್ರಿ ಆಗುವುದಕ್ಕೂ ಮುಂಚೆಯೇ ನಾನು 2008ರಿಂದಲೇ ಸಮುದಾಯ ಭವನ ನಿರ್ಮಾಣಕ್ಕೆ ಅನುದಾನ ನೀಡಿದ್ದೇನೆ ಎಂದರು. ನಿಮ್ಮೂರಿನಲ್ಲಿ ಉಪ್ಪಾರ ಶ್ರೀರಾಮ ಮಂದಿರ ನಿರ್ಮಿಸಲು ಅಂದಾಜು ಪಟ್ಟಿ ಕೊಟ್ಟರೆ ವೈಯಕ್ತಿಕ ಮತ್ತು ಶಾಸಕರ ಅನುದಾನ ನೀಡುತ್ತೇನೆ ಎಂದು ಭರವಸೆ ನೀಡಿದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಮುಡಾ ಮಾಜಿ ಅಧ್ಯಕ್ಷ ಹೆಚ್.ಎನ್. ವಿಜಯ್, ನಿಮ್ಮ ಸಮಾಜ ಜೊತೆ ಸದಾ ಇರುತ್ತೇನೆ. ಯುವ ಪೀಳಿಗೆ ಶೈಕ್ಷಣಿಕವಾಗಿ ಮುಂದೆ ಬನ್ನಿ, ಎಲ್ಲಾ ರೀತಿಯ ಸಹಾಯ ಮಾಡುತ್ತೇನೆ ಎಂದ ಅವರು ಉದ್ಯೋಗ ಸಿಗದವರು ಚಿಂತಿಸದೇ ಸ್ವಂತ ಉದ್ಯೋಗ ಪ್ರಾರಂಭಿಸಿ ಎಂದು ಸಲಹೆ ನೀಡಿದ ಅವರು, ಸಮಾಜದ ಅಭಿವೃದ್ಧಿಗೆ ಪೂರಕವಾದ ಉತ್ತಮ ಕಾರ್ಯ ಮಾಡೋಣ. ಉಪ್ಪಾರ ಶ್ರೀರಾಮ ಮಂದಿರ ನಿರ್ಮಾಣಕ್ಕೆ ನಾನು ಸಹ ಆರ್ಥಿಕ ನೆರವು ನೀಡುವುದಾಗಿ ಭರವಸೆ ನೀಡಿದರು.

ಇದಕ್ಕೂ ಮುನ್ನ ಭಗೀರಥ ಉಪ್ಪಾರ ಸಮಾಜ ಯುವ ಬಳಗದಿಂದ ಅಲಂಕರಿಸಿದ ಬೆಳ್ಳಿ ರಥದಲ್ಲಿ ಮಹರ್ಷಿ ಶ್ರೀಭಗೀರಥರ ಭಾವಚಿತ್ರ ಇಟ್ಟು ಜಾನಪದ ಕಲಾ ತಂಡಗಳೊಂದಿಗೆ ಮೆರವಣಿಗೆ ಮಾಡಲಾಯಿತು.

ವಾಣಿಜ್ಯ ಇಲಾಖೆ ನಿವೃತ್ತ ಅಪರ ಆಯುಕ್ತ ಡಿ.ಜಗನ್ನಾಥ್, ಕೆಪಿಸಿಸಿ ಕಾರ್ಯಕಾರಿಣಿ ಸದಸ್ಯ ದೊಡ್ಡಸ್ವಾಮಿಗೌಡ, ಜಿಪಂ ಮಾಜಿ ಸದಸ್ಯ ಎಂ.ಟಿ.ಕುಮಾರ್, ತಾ.ಶರಣು ಸಾಹಿತ್ಯ ಪರಿಷತ್ ಅಧ್ಯಕ್ಷ ಸಿ.ಪಿ.ರಮೇಶ್ ಮಾತನಾಡಿದರು. ಗ್ರಾಪಂ ಅಧ್ಯಕ್ಷೆ ತಾಯಮ್ಮ, ಜಿಲ್ಲಾ ಯೂನಿಯನ್ ಬ್ಯಾಂಕ್ ನಿರ್ದೇಶಕ ರಾಮೇಗೌಡ, ಗ್ರಾಪಂ ಉಪಾಧ್ಯಕ್ಷ ಶಿವಕುಮಾರ್, ಸದಸ್ಯ ಬಿ.ಕೆ.ಕುಮಾರ್, ಮಾಜಿ ಸದಸ್ಯ ಶಿವರಾಂ, ಸಹಕಾರ ಸಂಘದ ಅಧ್ಯಕ್ಷ ಬಿ.ಎಂ.ಪ್ರಕಾಶ್, ಪಿಡಿಓ ಕೆ.ಎ.ಮಂಜುನಾಥ್, ನಾಡಗೌಡ ಕುಮಾರಸ್ವಾಮಿ, ತಾಲೂಕು ಉಪ್ಪಾರ ಸಂಘದ ಅಧ್ಯಕ್ಷ ಡಿ.ತಮ್ಮಯ್ಯ, ಮುಖಂಡರಾದ ನಿಂಗಪ್ಪ, ಜಿಲ್ಲಾ ಉಪ್ಪಾರ ನೌಕರರ ಸಂಘದ ಅಧ್ಯಕ್ಷ ಮಹದೇವಶೆಟ್ಟಿ, ಲಿಂಗಣ್ಣ, ನಗರಪಾಲಿಕೆ ನಿವೃತ್ತ ಇಂಜಿನಿಯರ್ ಸೋಮಶೇಖರಪ್ಪ, ಕೆ.ಆರ್.ನಗರ ಪಟ್ಟಣದ ಭಗೀರಥ ಉಪ್ಪಾರ ಸಂಘದ ಅಧ್ಯಕ್ಷ ನಟರಾಜು, ಜಿಲ್ಲಾ ಉಪ್ಪಾರ ವೇದಿಕೆ ಮಾಜಿ ಅಧ್ಯಕ್ಷ ಕೆ.ಟಿ.ಮೋಹನ್, ಕನ್ನಡ ಸಹ ಪ್ರಾಧ್ಯಾಪಕ ರಾಮೇಗೌಡ, ಭೇರ್ಯ ಮತ್ತು ಸಂಬ್ರವಳ್ಳಿ ಗ್ರಾಮದ ಉಪ್ಪಾರ ಸಮಾಜದ ಮುಖಂಡರು, ಯುವಕರು ಉಪಸ್ಥಿತರಿದ್ದರು.

ಅನ್ನದಾಸೋಹ ಜಾರಿಗೆ ತಂದ ಪ್ರಥಮ ಮಹಿಳೆ ಹೇಮರೆಡ್ಡಿ ಮಲ್ಲಮ್ಮ



ಕೆ.ಆರ್.ನಗರ, ಮೇ 15– ಅಕ್ಕಪಕ್ಕದ ಮನೆಯವರು ಹಸಿವಿನಿಂದ ನರಳುತ್ತಿರುವುದನ್ನು ನೋಡಿದ ಹೇಮರೆಡ್ಡಿ ಮಲ್ಲಮ್ಮ ಅನ್ನ ದಾಸೋಹ ಜಾರಿಗೆ ತಂದ ಪ್ರಥಮ ಮಹಿಳೆ ಎಂದು ನಾಡಹಬ್ಬಗಳ ಸಮಿತಿ ಅಧ್ಯಕ್ಷ ಎಸ್.ಸಂತೋಷ್ ತಿಳಿಸಿದರು.

ಪಟ್ಟಣದ ತಾಲೂಕು ಕಚೇರಿ ಸಭಾಂಗಣದಲ್ಲಿ ನಡೆದ ಶಿವಶರಣೆ ಹೇಮರೆಡ್ಡಿ ಮಲ್ಲಮ್ಮ ಜಯಂತಿ ಉದ್ಘಾಟಿಸಿ ಮಾತನಾಡಿದ ಅವರು, ಹೇಮರೆಡ್ಡಿ ಮಲ್ಲಮ್ಮ ಒಬ್ಬ ವೀರ ಮಹಿಳೆ. ಇಂದು ಮಠಮಾನ್ಯ ಮತ್ತು ಇನ್ನಿತರ ಸಂಘ ಸಂಸ್ಥೆ ನೀಡುತ್ತಿರುವ ಅನ್ನ ದಾಸೋಹ ಜಾರಿಗೆ ತಂದ ಶಿವಶರಣೆ ಜಯಂತಿ ಆಚರಿಸುವುದು ನಮ್ಮೆಲ್ಲರ ಪುಣ್ಯ ಎಂದರು.

ಮಲ್ಲಮ್ಮರ ಅತ್ತೆ ಸೊಸೆಯನ್ನು ಕಾಡಿಗಟ್ಟಿದಾಗ ಎದೆಗುಂದದೆ ಕಾಡಿನಲ್ಲಿಯೇ ಜಾನುವಾರುಗಳನ್ನು ಸಾಕುವ ಮೂಲಕ ಬಂದ ಹಣದಲ್ಲಿ ಅನ್ನ ದಾಸೋಹ ಮಾಡಿದ ಶಿವಶರಣೆ. ಹೆಣ್ಣು ಮನಸ್ಸು ಮಾಡಿದರೆ ಏನು ಬೇಕಾದರೂ ಮಾಡಬಹುದು ಎಂಬುದಕ್ಕೆ ಇದೆ ಸಾಕ್ಷಿ ಎಂದರು. ಶಿಕ್ಷಕರ ಸಂಘದ ಗೌರವಾಧ್ಯಕ್ಷ ರಾಜಶೇಖರ ಮಾತನಾಡಿ, ತನ್ನ ಜೀವನವನ್ನು ಸಮಾಜ ಸೇವೆಗೆ ಮುಡುಪಿಟ್ಟ ಹೇಮರೆಡ್ಡಿ ಮಲ್ಲಮ್ಮರ ರೀತಿ ನಾವು ಮಾಡಲಾಗದಿದ್ದರೂ, ಅವರ ಆದರ್ಶ, ದಿಟ್ಟತನ ಹೋರಾಟದ ಗುಣಗಳನ್ನು ಮೈಗೂಡಿಸಿಕೊಳ್ಳೋಣ ಎಂದರು.

ಕಾರ್ಯಕ್ರಮದಲ್ಲಿ ತಾಪಂ ಇಓ ಹೆಚ್.ಕೆ.ಸತೀಶ್, ತಾಲೂಕು ವೀರಶೈವ ಸಮಾಜದ ಅಧ್ಯಕ್ಷ ಕೆಂಪರಾಜ್, ಪ್ರಧಾನ ಕಾರ್ಯದರ್ಶಿ ಮಹೇಶ್, ಯುವ ಮಹಿಳಾಧ್ಯಕ್ಷೆ ಮನೋಹರಿ, ನಿವೃತ್ತ ನೌಕರರ ಸಂಘದ ಅಧ್ಯಕ್ಷ ಸಣ್ಣಲಿಂಗಪ್ಪ, ಶಿಕ್ಷಕರ ಸಂಘದ ಗೌರವಾಧ್ಯಕ್ಷ ರಾಜಶೇಖರ, ಬಿಜೆಪಿ ಮಹಿಳಾಧ್ಯಕ್ಷೆ ದಾಕ್ಷಾಯಣಿ, ಸರ್ಕಾರಿ ನೌಕರರ ಸಂಘದ ನಿರ್ದೇಶಕ ಸಣ್ಣಸ್ವಾಮಿ, ಯಶವಂತ್, ನಟರಾಜ್ ಸೇರಿದಂತೆ ಇನ್ನಿತರರಿದ್ದರು.

'ದಾಸೋಹ ಪಥ', 'ದೇವನೂರ ಒಡಲೊಳಗೆ' ಕೃತಿ ಲೋಕಾರ್ಪಣೆ

ನಂಜನಗೂಡು, ಮೇ 15(ಸುದರ್ಶನ್)– ನಗರದ ಜೆಎಸ್‌ಎಸ್ ಮಂಗಳ ಮಂಟಪದಲ್ಲಿ ಭಾನುವಾರ ಸದಾಶಿವಮೂರ್ತಿ ಅವರ ಶಿಷ್ಯರು, ಅಭಿಮಾನಿಗಳಿಂದ ನಡೆದ ಅಭಿನಂದನಾ ಸಮಾರಂಭದಲ್ಲಿ ಪ್ರೊ.ಡಿ.ಎಸ್.ಸದಾಶಿವಮೂರ್ತಿ ಅವರ 'ದಾಸೋಹ ಪಥ' ಮತ್ತು 'ದೇವನೂರ ಒಡಲೊಳಗೆ' ಕೃತಿಗಳನ್ನು ಲೋಕಾರ್ಪಣೆಗೊಳಿಸಲಾಯಿತು.



ಈ ವೇಳೆ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಪ್ರೊ.ಮಲೆಯೂರು ಗುರುಸ್ವಾಮಿ ಮಾತನಾಡಿ, ಪ್ರೊ.ಡಿ.ಎಸ್.ಸದಾಶಿವಮೂರ್ತಿ ಅವರು ಸಾಹಿತ್ಯ ಹಾಗೂ ಧಾರ್ಮಿಕ ಲೋಕಕ್ಕೆ ತಮ್ಮ 2 ಅಮೂಲ್ಯ ಕೃತಿಗಳನ್ನು ಕೊಡುಗೆ ನೀಡುವ ಮೂಲಕ ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದ್ದಾರೆ ಎಂದರು.

ಪ್ರೊ.ಡಿ.ಎಸ್.ಸದಾಶಿವಮೂರ್ತಿರವರು ತಮ್ಮ ವಿನಯ, ವ್ಯಕ್ತಿತ್ವ, ಸಾಮಾಜಿಕ ಕಾಳಜಿಯಿಂದಾಗಿ ಸಮಾಜದ ಜನರ ಪ್ರೀತಿ ವಿಶ್ವಾಸ ಗಳಿಸಿದ್ದಾರೆ. ಜೊತೆಗೆ ದೇವನೂರಿನ ಮಣ್ಣಿನ ಮೋಹ ಇಟ್ಟುಕೊಂಡು 'ದಾಸೋಹ ಪಥ' ಕೃತಿಯಲ್ಲಿ ದೇವನೂರು ಮಠದ ದಾಸೋಹ ಚರಿತ್ರೆಯನ್ನು ಜನಸಾಮಾನ್ಯರಿಗೆ ಅರ್ಥವಾಗುವ ಶೈಲಿಯಲ್ಲಿ ರಚಿಸಿದ್ದಾರೆ. ಅಲ್ಲದೆ 'ದೇವನೂರಿನ ಒಡಲೊಳಗೆ' ಕೃತಿ ಮೂಲಕ ದೇವನೂರಿನ ಜಾನಪದ ಕಲಾವಿದರು, ಕಲಾವಿದ ಕುಟುಂಬಗಳು, ದೇವಾಲಯಗಳು, ಸ್ಥಳ ಮಹಿಮೆ, ಮಣ್ಣಿನ, ವಿವಿಧ ಜನಾಂಗದವರ ಬದುಕು ಪರಿಚಯಿಸಿದ್ದಾರೆ. ಈ 2 ಕೃತಿಗಳು ಕನ್ನಡ ಸಾಹಿತ್ಯ ಲೋಕವನ್ನು ಶ್ರೀಮಂತಗೊಳಿಸುವ ಕೃತಿಗಳಾಗಿವೆ ಎಂದರು.

ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಡಾ.ಎಂ.ಎನ್.ನಂದೀಶ್ ಹಂಚೆ ಅಭಿನಂದನಾ ಭಾಷಣ ಮಾಡಿ, ಒಬ್ಬ ಪ್ರಾಧ್ಯಾಪಕ ಸಮಾಜದ ಬದಲಾವಣೆಗೆ ಕಾರಣವಾಗುವಂತಹ ಸರ್ವಕಾಲಿಕ ಬೋಧನೆ ಮಾಡಿದಾಗ ಮಾತ್ರ ಸಮಾಜದ ಉದ್ಧಾರ ಸಾಧ್ಯ. ಪ್ರೊ.ಸದಾಶಿವಮೂರ್ತಿರವರು ಅಂತಹ ಪ್ರಾಧ್ಯಾಪಕರಲ್ಲಿ ಒಬ್ಬರು. ಅವರು ತಮ್ಮ ಮಾರ್ಗದರ್ಶನದ ಮೂಲಕ ಅನೇಕ ವಿದ್ಯಾರ್ಥಿಗಳ ವ್ಯಕ್ತಿತ್ವ ರೂಪಿಸಿದ್ದಾರೆ. ಅವರ ಧಾರ್ಮಿಕ, ಸಾಮಾಜಿಕ ಕಾಳಜಿಯಿಂದಾಗಿ ಅಪಾರ ಶಿಷ್ಯವೃಂದ, ಹಿತೈಷಿಗಳು ಅಭಿಮಾನಿಗಳನ್ನು ಹೊಂದಿದ್ದಾರೆ. ಸಮಾಜದಲ್ಲಿ ಎಲ್ಲಾ ಜನರ ಪ್ರೀತಿ ವಿಶ್ವಾಸಗಳಿಸಿದ್ದಾರೆ ಎಂದರು. ಸಮಾರಂಭದಲ್ಲಿ ಸುತ್ತೂರು ಮಠದ ಶ್ರೀಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ 'ಸದಾಶಯ' ಎಂಬ ಅಭಿನಂದನಾ ಗ್ರಂಥ ಲೋಕಾರ್ಪಣೆಗೊಳಿಸಿ ಆಶೀರ್ವದಿಸಿದರು. ದೇವನೂರಿನ ಶ್ರೀಮಹಾಂತ ಸ್ವಾಮೀಜಿ 'ದಾಸೋಹ ಪಥ', 'ದೇವನೂರ ಒಡಲೊಳಗೆ' ಕೃತಿಗಳನ್ನು ಬಿಡುಗಡೆಗೊಳಿಸಿದರು.

ಸನ್ಮಾನ ಸ್ವೀಕರಿಸಿ ಮಾತನಾಡಿದ ಪ್ರೊ.ಡಿ.ಎಸ್.ಸದಾಶಿವಮೂರ್ತಿ, ಸಮಾಜಕ್ಕೆ ಸೇವೆ ಸಲ್ಲಿಸಬೇಕು. ಸಂದೇಶ ಕೊಡುಗೆ ನೀಡಬೇಕೆಂಬ ಸಂಕಲ್ಪದಿಂದಾಗಿ ನನ್ನ ಅನುಭವಗಳಿಂದ 2 ಕೃತಿಗಳನ್ನು ರಚಿಸಿದ್ದೇನೆ. ನನಗೆ ವಿದ್ಯಾಭ್ಯಾಸ ನೀಡಿ ನನ್ನ ವ್ಯಕ್ತಿತ್ವ ಬೆಳವಣಿಗೆಗೆ ಕಾರಣವಾದ ಮಠಗಳ ಋಣ ತೀರಿಸಲು ಸೇವೆಯಲ್ಲಿ ನಿರತನಾಗಿದ್ದೇನೆ. ನನಗೆ ಅಭಿಮಾನದಿಂದ ಅಭಿನಂದಿಸಿದ ಎಲ್ಲರಿಗೂ ಕೃತಜ್ಞತೆ ಸಲ್ಲಿಸುತ್ತೇನೆ ಎಂದರು.

ಸಮಾರಂಭದಲ್ಲಿ ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ಡಾ.ಡಿ.ಎಸ್.ಗುರು, ಹೆಚ್.ರಾಜು, ಶಿವಲಿಂಗಪ್ಪ, ಅನುರಾಗ ಸೇವಾ ಟ್ರಸ್ಟ್‌ನ ಡಿ.ಜೆ.ಸದಾಶಿವಮೂರ್ತಿ, ರವೀಶ್‌ಮೂರ್ತಿ, ಮ.ಗು.ಬಸವಣ್ಣ, ಶಿವಕುಮಾರ್, ಅಖಿಲ ಭಾರತ ವೀರಶೈವ ತಾಲೂಕು ಅಧ್ಯಕ್ಷ ಬುಲೆಟ್ ಮಹದೇವಪ್ಪ ಹಲವರಿದ್ದರು.


ಬೈಕ್‌ಗೆ ಅಪರಿಚಿತ ವಾಹನ ಡಿಕ್ಕಿ: ಸವಾರ ಸಾವು

ತಿ.ನರಸೀಪುರ, ಮೇ 15– ಬೈಕ್‌ಗೆ ಅಪರಿಚಿತ ವಾಹನ ಡಿಕ್ಕಿ ಹೊಡೆದ ಪರಿಣಾಮ ಸವಾರ ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ಪಟ್ಟಣದ ಕಪಿಲಾ ನದಿಯ ನೂತನ ಸೇತುವೆ ಬಳಿ ಶನಿವಾರ ರಾತ್ರಿ ನಡೆದಿದೆ.

ತಾಲೂಕಿನ ಕೆಬ್ಬೇಹುಂಡಿ ಗ್ರಾಮದ ಮಹದೇವ ಎಂಬುವರ ಪುತ್ರ ಭರತ್(19) ಮೃತಪಟ್ಟವರು. ಈತ ಶನಿವಾರ ತಿ.ನರಸೀಪುರದ ಆಲಗೂಡು ರಸ್ತೆಯಲ್ಲಿರುವ ಚಿಕ್ಕಮ್ಮ ಕಲ್ಯಾಣ ಮಂಟಪದಲ್ಲಿ ನಡೆಯುತ್ತಿದ್ದ ಸ್ನೇಹಿತನ ಅಕ್ಕನ ಮದುವೆಗೆ ಬೈಕ್‌ನಲ್ಲಿ ಆಗಮಿಸಿ ಸ್ವಗ್ರಾಮಕ್ಕೆ ವಾಪಸ್ ತೆರಳುತ್ತಿದ್ದ ವೇಳೆ ರಾತ್ರಿ 9.30ರ ವೇಳೆಯಲ್ಲಿ ನರಸೀಪುರದ ಕಪಿಲಾ ನದಿಯ ನೂತನ ಸೇತುವೆ ಬಳಿ ಅಪರಿಚಿತ ವಾಹನ ಬೈಕ್‌ಗೆ ಡಿಕ್ಕಿ ಹೊಡೆದು ಪರಾರಿಯಾಗಿದೆ. ಪರಿಣಾಮ ತೀವ್ರ ಗಾಯಗೊಂಡ ಭರತ್ ಸ್ಥಳದಲ್ಲೇ ಸಾವನ್ನಪ್ಪಿದ್ದಾನೆ ಎನ್ನಲಾಗಿದೆ. ಈ ಸಂಬಂಧ ಮೃತನ ತಂದೆ ಮಹದೇವ ತಿ.ನರಸೀಪುರ ಪೊಲೀಸ್ ಠಾಣೆಗೆ ದೂರು ನೀಡಿದ್ದು, ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ತನಿಖೆ ಕೈಗೊಂಡಿದ್ದಾರೆ

ಪದವೀಧರರ ಚುನಾವಣೆಯಲ್ಲಿ ಮೈ.ವಿ.ರವಿಶಂಕರ್ ಗೆಲುವು ನಿಶ್ಚಿತ

ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್



ಪಿರಿಯಾಪಟ್ಟಣ, ಮೇ 15(ವೀರೇಶ್)– ಈ ಬಾರಿಯ ದಕ್ಷಿಣ ಪದವೀಧರರ ಕ್ಷೇತ್ರದ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿ ಮೈ.ವಿ. ರವಿಶಂಕರ್ ಗೆಲುವು ನಿಶ್ಚಿತ ಎಂದು ಜಿಲ್ಲಾ ಉಸ್ತುವಾರಿ ಸಚಿವ ಸೋಮಶೇಖರ್ ತಿಳಿಸಿದರು.

ಪಟ್ಟಣದ ಬಿಜೆಪಿ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈ.ವಿ.ರವಿಶಂಕರ್ ಪದವೀಧರರ ಬಗ್ಗೆ ಆಳವಾದ ಚಿಂತನೆ ಇಟ್ಟುಕೊಂಡು ಸರ್ಕಾರದ ಮಟ್ಟದಲ್ಲಿ ಅವರ ಸಮಸ್ಯೆಗಳ ಬಗ್ಗೆ ಚರ್ಚಿಸಿ ಹೋರಾಟ ನಡೆಸುವ ಅಭ್ಯರ್ಥಿ. ಕಳೆದ ಚುನಾವಣೆಯಲ್ಲಿ ಅವರು ಅತ್ಯಲ್ಪ ಮತಗಳಿಂದ ಸೋಲು ಅನುಭವಿಸಿದ್ದರು. ಆಗ ರಾಜ್ಯದಲ್ಲಿ ನಮ್ಮ ಸರ್ಕಾರ ಅಧಿಕಾರದಲ್ಲಿರಲಿಲ್ಲ. ಆದರೆ ಪ್ರಸ್ತುತ ರಾಜ್ಯ, ಕೇಂದ್ರದಲ್ಲಿ ನಮ್ಮದೇ ಸರ್ಕಾರವಿರುವುದರಿಂದ ಈ ಚುನಾವಣೆಯಲ್ಲಿ ಅವರ ಗೆಲುವು ನಿಶ್ಚಿತ ಎಂದು ನುಡಿದರು.

ಜಿಲ್ಲೆಯಲ್ಲಿ 60 ಸಾವಿರ ಪದವೀಧರ ಮತದಾರರಿದ್ದು, ಈ ಪೈಕಿ 30 ಸಾವಿರಕ್ಕೂ ಹೆಚ್ಚು ಮತದಾರರನ್ನು ಖುದ್ದಾಗಿ ಭೇಟಿ ಮಾಡಲಾಗಿದೆ. ಇನ್ನು 4 ದಿನಗಳಲ್ಲಿ ಉಳಿದವರನ್ನು ಭೇಟಿ ಮಾಡಲಾಗುವುದು. ಪಿರಿಯಾಪಟ್ಟಣದಲ್ಲಿ 2600 ಪದವೀಧರ ಮತದಾರರಿದ್ದು, ಈಗಾಗಲೇ 1500 ಮತದಾರರನ್ನು ಖುದ್ದಾಗಿ ಭೇಟಿ ಮಾಡಲಾಗಿದೆ ಎಂದ ಅವರು, ನನ್ನ ಉಸ್ತುವಾರಿ ಜಿಲ್ಲೆಯಲ್ಲಿ ಹುಣಸೂರು, ಹೆಚ್.ಡಿ.ಕೋಟೆ ಕ್ಷೇತ್ರಗಳಲ್ಲಿ ಪ್ರವಾಸ ನಡೆಸಿ ಮತಯಾಚಿಸಿದ್ದೇನೆ. ಇದೀಗ ಪಿರಿಯಾಪಟ್ಟಣದಲ್ಲಿ ಪ್ರವಾಸ ಮಾಡಿ ಮತದಾರರನ್ನು ಭೇಟಿ ಮಾಡುತ್ತಿದ್ದೇನೆ ಎಂದರು.

ತಾಲೂಕಿನ ಕಾರ್ಯಕರ್ತರ ಗೊಂದಲದಿಂದ ರಘು ಕೌಟಿಲ್ಯಗೆ ಹಿನ್ನಡೆಯಾಗಿದ್ದು, ಈ ಬಾರಿಯೂ ಅದೇ ಫಲಿತಾಂಶ ಮರುಕಳುಹಿಸಬಹುದಾ ಎಂಬ ಪತ್ರಕರ್ತರ ಪ್ರಶ್ನೆಗೆ ಉತ್ತರಿಸಿದ ಸೋಮಶೇಖರ್, ರಘು ಕೌಟಿಲ್ಯ ಸ್ಪರ್ಧಿಸಿದ್ದು ಚುನಾಯಿತ ಪ್ರತಿನಿಧಿಗಳ ಕ್ಷೇತ್ರಕ್ಕೆ ಅಲ್ಲಿ ನಮ್ಮ ಪಕ್ಷದ ಮತದಾರರ ಸಂಖ್ಯೆ ಕಡಿಮೆ. ಅದು ಅವರ ಸೋಲಿಗೆ ಕಾರಣವಾಗಿದೆ ವಿನಃ ಕಾರ್ಯಕರ್ತರು ಯಾವುದೇ ರೀತಿ ಅವರ ಸೋಲಿಗೆ ಕಾರಣರಲ್ಲ ಎಂದು ವಿಶ್ಲೇಷಿಸಿದರು.

ಈಗಾಗಲೇ ಬಿಜೆಪಿ ಬಂಡಾಯ ಅಭ್ಯರ್ಥಿ ವಿನಯ್ ಎಂಬುವರು ಪದವೀಧರ ಕ್ಷೇತ್ರದ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದು, ಮತದಾರರಿಗೆ ಇನ್ಶೂರೆನ್ಸ್ ಬಾಂಡ್ ನೀಡುವ ಮೂಲಕ ಆಮಿಷ ಒಡ್ಡುತ್ತಿದ್ದಾರೆ. ಅದು ನಿಮ್ಮ ಅಧಿಕೃತ ಅಭ್ಯರ್ಥಿಗೆ ತೊಡಕಾಗುವುದಿಲ್ಲವೇ ಎಂಬ ಪ್ರಶ್ನೆಗೆ ಉತ್ತರಿಸಿದ ಸಚಿವರು, ಈಗಾಗಲೇ ರಾಜ್ಯ ಹಾಗೂ ಜಿಲ್ಲಾ ಮಟ್ಟದ ನಾಯಕರು, ಪಕ್ಷದ ಅಧ್ಯಕ್ಷರು ವಿನಯ್ ಅವರನ್ನು ಮನವೊಲಿಸುವ ಪ್ರಯತ್ನದಲ್ಲಿದ್ದಾರೆ. ಅದು ಸಫಲವಾಗದಿದ್ದಲ್ಲಿ ಅವರನ್ನು ಬೆಂಬಲಿಸುವ ಪಕ್ಷದ ಯಾರೇ ಆಗಲಿ ಅವರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲಾಗುವುದು ಎಂದರು.

ಸುದ್ದಿಗೋಷ್ಠಿಯಲ್ಲಿ ಮಾಜಿ ಸಂಸದ ವಿಜಯ ಶಂಕರ್, ತಾಲೂಕು ಅಧ್ಯಕ್ಷ ಎಂ.ಎಂ.ರಾಜೇಗೌಡ, ಮುಖಂಡರಾದ ಕೌಲನಹಳ್ಳಿ ಸೋಮಶೇಖರ್, ನವೀನ್, ವಸಂತಕುಮಾರ್, ಜಿಲ್ಲಾ ಉಪಾಧ್ಯಕ್ಷ ಅಣ್ಣಪ್ಪ ತಾಲೂಕು ಮಾಜಿ ಅಧ್ಯಕ್ಷ ಪಿ.ಜೆ.ರವಿ, ಕೃಷ್ಣ, ನಳಿನಿಗೌಡ, ಟಿ.ರಮೇಶ್ ಇತರರಿದ್ದರು.

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ಡಾಕ್ಟರ್ ಸ್ಟ್ರೇಂಜ್ (3ಡಿ)(ಇಂ): ಬೆ.9.15ಕ್ಕೆ, ಬೆ.11.40ಕ್ಕೆ, ಮ.2.05ಕ್ಕೆ, ರಾ.7.35ಕ್ಕೆ, ಸರ್ಕಾರು ವಾರಿ ಪಾಟ (ತೆ): ಸಂ.4.30ಕ್ಕೆ, ಕೆಜಿಎಫ್ 2 (ಕ): ರಾ.10ಕ್ಕೆ.
ಸ್ಕ್ರೀನ್ 2	ಡಾನ್ (ತ): ಬೆ.10.10ಕ್ಕೆ, ಸಂ.4ಕ್ಕೆ, ಜಯೇಶ್‌ಬಾಯ್ ಜೋರ್ದಾರ್ (ಹಿಂ): ಮ.1.20ಕ್ಕೆ, ರಾ.7.15ಕ್ಕೆ, ರಾ.9.55ಕ್ಕೆ.
ಸ್ಕ್ರೀನ್ 3	ಸೆಲ್ಫಿ ಮಮ್ಮಿ ಗೂಗಲ್ ಡ್ಯಾಡಿ (ಕ): ಬೆ.10.40ಕ್ಕೆ, ಅಯ್ಯಂಗಾರನ್ (ತ): ಮ.1.15ಕ್ಕೆ, ಕ್ರಿಟಿಕಲ್ ಕೀರ್ತನೆಗಳು (ಕ): ಸಂ.4ಕ್ಕೆ, ಸರ್ಕಾರು ವಾರಿ ಪಾಟ (ತೆ): ಸಂ.6.50ಕ್ಕೆ, ಮೇರಿ ಆವಾಜ್ ಸುನೊ (ಮ): ರಾ.9.55ಕ್ಕೆ.
ಸ್ಕ್ರೀನ್ 4	ಕಸ್ತೂರಿ ಮಹಲ್ (ಕ): ಬೆ.10.25ಕ್ಕೆ, ಕೆಜಿಎಫ್ 2(ಕ): ಮ.12.55ಕ್ಕೆ, ಸಂ.6.35ಕ್ಕೆ, ಅವತಾರ ಪುರುಷ (ಕ): ಸಂ.4.10ಕ್ಕೆ, ಸರ್ಕಾರು ವಾರಿ ಪಾಟ (ಕ): ರಾ.9.50ಕ್ಕೆ.

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1	ಡಾಕ್ಟರ್ ಸ್ಟ್ರೇಂಜ್ (3ಡಿ)(ಇಂ): ಬೆ.10ಕ್ಕೆ, ಸಂ.4.10ಕ್ಕೆ, ಸಂ.6.55ಕ್ಕೆ, ಡಾನ್ (ತ): ಮ.12.45ಕ್ಕೆ, ರಾ.9.40ಕ್ಕೆ.
ಸ್ಕ್ರೀನ್ 2	ಜಯೇಶ್‌ಬಾಯ್ ಜೋರ್ದಾರ್ (ಹಿಂ): ಬೆ.10.05ಕ್ಕೆ, ಮ.12.50ಕ್ಕೆ, ರಾ.7.05ಕ್ಕೆ, ಕೆಜಿಎಫ್ 2(ಕ): ಮ.3.35ಕ್ಕೆ, ರಾ.9.50ಕ್ಕೆ.
ಸ್ಕ್ರೀನ್ 3	ಸರ್ಕಾರು ವಾರಿ ಪಾಟ (ತೆ): ಬೆ.9.40ಕ್ಕೆ, ಮ.3.50ಕ್ಕೆ, ರಾ.10ಕ್ಕೆ, ಅವತಾರ ಪುರುಷ (ಕ): ಮ.1ಕ್ಕೆ, ಕ್ರಿಟಿಕಲ್ ಕೀರ್ತನೆಗಳು (ಕ): ರಾ.7.10ಕ್ಕೆ.
ಸ್ಕ್ರೀನ್ 4	ಕೆಜಿಎಫ್ 2(ಕ): ಬೆ.9.55ಕ್ಕೆ, ಕಸ್ತೂರಿ ಮಹಲ್ (ಕ): ಮ.1.25ಕ್ಕೆ, ಅಯ್ಯಂಗಾರನ್ (ತ): ಸಂ.4.05ಕ್ಕೆ, ಸೆಲ್ಫಿ ಮಮ್ಮಿ ಗೂಗಲ್ ಡ್ಯಾಡಿ (ಕ): ಸಂ.6.55ಕ್ಕೆ, ಜಯೇಶ್‌ಬಾಯ್ ಜೋರ್ದಾರ್ (ಹಿಂ): ರಾ.9.30ಕ್ಕೆ,

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1	ಸೆಲ್ಫಿ ಮಮ್ಮಿ ಗೂಗಲ್ ಡ್ಯಾಡಿ (ಕ): ಬೆ.11ಕ್ಕೆ, ಸಂ.4ಕ್ಕೆ, ಕ್ರಿಟಿಕಲ್ ಕೀರ್ತನೆಗಳು (ಕ): ಮ.1.20ಕ್ಕೆ, ಡಾನ್ (ತ): ಸಂ.6.25ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 2	ಕಸ್ತೂರಿ ಮಹಲ್ (ಕ): ಬೆ.10.45ಕ್ಕೆ, ಜಯೇಶ್‌ಬಾಯ್ ಜೋರ್ದಾರ್ (ಹಿಂ): ಮ.1.25ಕ್ಕೆ, ಕ್ರಿಟಿಕಲ್ ಕೀರ್ತನೆಗಳು (ಕ): ಮ.3.55ಕ್ಕೆ, ಸರ್ಕಾರು ವಾರಿ ಪಾಟ (ತೆ): ಸಂ.6.25ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 3	ಸರ್ಕಾರು ವಾರಿ ಪಾಟ (ತೆ): ಬೆ.10.30ಕ್ಕೆ, ಮ.1.35ಕ್ಕೆ, ಸಂ.4.40ಕ್ಕೆ, ಕೆಜಿಎಫ್ 2 (ಕ): ರಾ.7.45ಕ್ಕೆ
ಸ್ಕ್ರೀನ್ 4	ಕೆಜಿಎಫ್ 2 (ಕ): ಮ.1.20ಕ್ಕೆ, ಅವತಾರ ಪುರುಷ (ಕ): ಸಂ.4.30ಕ್ಕೆ, ಜಯೇಶ್‌ಬಾಯ್ ಜೋರ್ದಾರ್ (ಹಿಂ): ರಾ.7.05ಕ್ಕೆ, ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್

ಮೊ.ನಂ: 8951357139

ಫೋರಂ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಕೆಜಿಎಫ್ 2 (ಕ): ಬೆ.8ಕ್ಕೆ, ಬೆ.9ಕ್ಕೆ, ಬೆ.10.30ಕ್ಕೆ, ಬೆ.11.15ಕ್ಕೆ, ಬೆ.11.30ಕ್ಕೆ, ಮ.12.30ಕ್ಕೆ, ಮ.2ಕ್ಕೆ, ಮ.2.45ಕ್ಕೆ, ಮ.3ಕ್ಕೆ, ಸಂ.4ಕ್ಕೆ, ಸಂ.5.30ಕ್ಕೆ, ಸಂ.6.15ಕ್ಕೆ, ಸಂ.6.30ಕ್ಕೆ, ರಾ.7.30ಕ್ಕೆ, ರಾ.9ಕ್ಕೆ, ರಾ.9.45ಕ್ಕೆ, ರಾ.10ಕ್ಕೆ, ಆರ್‌ಆರ್‌ಆರ್ (ಕ): ರಾ.9.30ಕ್ಕೆ, ಕೆಜಿಎಫ್ 2 (ಹಿಂ): ಬೆ.10.45ಕ್ಕೆ, ಸಂ.6ಕ್ಕೆ, ಆರ್‌ಆರ್‌ಆರ್ (ತೆ): ಮ.2.15ಕ್ಕೆ, ಬೀಸ್ಟ್ (ತ): ಬೆ.11.30ಕ್ಕೆ, ಮ.2.50ಕ್ಕೆ, ಸಂ.6.10ಕ್ಕೆ, ರಾ.9.30ಕ್ಕೆ.

ಗರುಡ ಮಾಲ್, 1ನೇ ಮಹಡಿ, ಮೊ.ನಂ: 9901373210

ಹರೀಶ ವಯಸ್ಸು 36 (ಕ): ಮ.3.30ಕ್ಕೆ, ಲವ್ ಮಾಕ್ಟೇಲ್ 2 (ಕ): ಮ.12.25ಕ್ಕೆ, ಮ.3.05ಕ್ಕೆ, ರಾಧೆಶ್ಯಾಮ್ (ತೆ): ಬೆ.9.15ಕ್ಕೆ, ಬೆ.10.20ಕ್ಕೆ, ಮ.12.10ಕ್ಕೆ, ಮ.1.15ಕ್ಕೆ, ಸಂ.4.10ಕ್ಕೆ, ಸಂ.6.05ಕ್ಕೆ, ರಾ.7.05ಕ್ಕೆ, ರಾ.9ಕ್ಕೆ, ರಾ.10ಕ್ಕೆ, ದಿ ಬ್ಯಾಟ್‌ಮ್ಯಾನ್ (ಇಂ): ಬೆ.11.55ಕ್ಕೆ, ಸಂ.5.55ಕ್ಕೆ, ಗಂಗೂಬಾಯ್ ಕಾಠಿಯಾವಾಡಿ (ಹಿಂ): ರಾ.9.30ಕ್ಕೆ, ಎದರ್ಕುಂ ತುನಿಂದವನ್ (ತ): ಬೆ.9.15ಕ್ಕೆ, ಮ.3.25ಕ್ಕೆ, ಸಂ.6.30ಕ್ಕೆ, ರಾ.9.45ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಪದ್ಮ ಚಿತ್ರಮಂದಿರ	(ದೂ: 2521923)
ಡಾನ್ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಕೆಜಿಎಫ್–2 (ಕ)	4 ಪ್ರದರ್ಶನಗಳು
ಉಮಾ ಚಿತ್ರಮಂದಿರ	(ದೂ: 2520009)
ಇಲ್ಲಿಂದ ಆರಂಭವಾಗಿದೆ (ಕ)	1 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಒಲುಮೆ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಸರ್ಕಾರು ವಾರಿ ಪಾಠ (ತೆ)	4 ಪ್ರದರ್ಶನಗಳು
ಗಾಯಿತ್ರಿ	
ಕಸ್ತೂರಿ ಮಹಲ್ (ಕ)	4 ಪ್ರದರ್ಶನಗಳು
ರಾಜ್‌ಕಮಲ್	
ಸರ್ಕಾರು ವಾರಿ ಪಾಠ (ತೆ)	4 ಪ್ರದರ್ಶನಗಳು
ಸಂಗಂ	
ಅವತಾರ ಪುರುಷ (ಕ)	4 ಪ್ರದರ್ಶನಗಳು
ಲಿಡೋ	
ಸರ್ಕಾರು ವಾರಿ ಪಾಠ (ತೆ)	4 ಪ್ರದರ್ಶನಗಳು
ತಿಬ್ಬಾದೇವಿ	
ಸರ್ಕಾರು ವಾರಿ ಪಾಠ (ತೆ)	4 ಪ್ರದರ್ಶನಗಳು
ಸ್ಟರ್ಲಿಂಗ್	
ಸೆಲ್ಫಿ ಮಮ್ಮಿ ಗೂಗ್ಲಿ ಡ್ಯಾಡಿ (ಕ)	2 ಪ್ರದರ್ಶನಗಳು
ಕ್ರಿಟಿಕಲ್ ಕೀರ್ತನಗಳು (ಕ)	2 ಪ್ರದರ್ಶನಗಳು

ಬಡವರಿಗೆ ಬೆಡ್‌ಶೀಟ್ ವಿತರಿಸಿ ಡಿಕೆಶಿ ಹುಟ್ಟುಹಬ್ಬ ಆಚರಣೆ




ತಿ.ನರಸೀಪುರ, ಮೇ 15 (ಎಸ್‌ಕೆ)– ಇಲ್ಲಿನ ತಿರುಮಕೂಡಲಿನ ಚೌಡೇಶ್ವರಿ ದೇವಾಲಯದಲ್ಲಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರ 61ನೇ ಹುಟ್ಟುಹಬ್ಬವನ್ನು ಅವರ ಅಭಿಮಾನಿ ಬಳಗದಿಂದ ಬಡವರಿಗೆ ಬೆಡ್‌ಶೀಟ್(ಹೊದಿಕೆ) ವಿತರಿಸುವ ಮೂಲಕ ಆಚರಿಸಲಾಯಿತು.

ಬೆಡ್‌ಶೀಟ್, ಸಿಹಿ ವಿತರಿಸಿ ಮಾತನಾಡಿದ ಡಿ.ಕೆ.ಶಿವಕುಮಾರ್ ಅಭಿಮಾನಿ ಬಳಗದ ಅಧ್ಯಕ್ಷ ಆರ್.ಚೇತನ್, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರು ಹಾಕಿಕೊಟ್ಟ ಮಾರ್ಗದರ್ಶನದಲ್ಲಿ ನಾವೆಲ್ಲಾ ಕೆಲಸ ಮಾಡುವ ಮೂಲಕ ನೊಂದವರ ಧ್ವನಿಯಾಗಿ ನಿಲ್ಲಬೇಕು. ಆಗ ಮಾತ್ರ ಅವರ ಹುಟ್ಟುಹಬ್ಬ ಆಚರಣೆಗೆ ಅರ್ಥ ಬರುತ್ತದೆ ಎಂದರು.

ಕಾಂಗ್ರೆಸ್ ಹಿರಿಯ ಮುಖಂಡ ಪಿ.ಸ್ವಾಮಿನಾಥಗೌಡ ಮಾತನಾಡಿ, ಕಾಂಗ್ರೆಸ್‌ನಲ್ಲಿ ತಮ್ಮದೇ ಆದ ಛಾಪು ಮೂಡಿಸಿರುವ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಪಕ್ಷ ಬಲಿಷ್ಠಗೊಳಿಸಿ, ರಾಜ್ಯದಲ್ಲಿ ಮತ್ತೆ ಕಾಂಗ್ರೆಸ್ ಅನ್ನು ಅಧಿಕಾರಕ್ಕೆ ತರುವ ನಿಟ್ಟಿನಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಕಾರ್ಯಕರ್ತರಾದ ನಾವು ಅವರ ಮಾರ್ಗದರ್ಶನದಲ್ಲಿ ಪಕ್ಷವನ್ನು ಅಧಿಕಾರಕ್ಕೆ ತರಲು ಪಣತೊಡಬೇಕು ಎಂದರು. ಕಾರ್ಯಕ್ರಮದಲ್ಲಿ ಟಿ.ಎಂ.ನಾಗಣ್ಣ, ಟಿ.ಬಿ.ಸುರೇಶ್, ಸೋಮಣ್ಣ, ಗ್ರಾಪಂ ಮಾಜಿ ಉಪಾಧ್ಯಕ್ಷ ಪುಟ್ಟು, ಈಶ್ವರ್‌ಗೌಡ, ವೇಣು, ಅಚ್ಚು, ನಟೇಶ್, ಶ್ರೀಧರ್, ಸಂತೃಪ್ತಿ ಕುಮಾರ್, ಲಕ್ಷ್ಮಣ, ನಾಗೇಶ್, ನಾಗರಾಜ್, ರವಿಕುಮಾರ್ ಮತ್ತಿತರರಿದ್ದರು.

ಪಿ.ಸಿ.ನಾಗೇಂದ್ರರಾವ್ ನಿಧನ



ಬೆಟ್ಟದಪುರ, ಮೇ 15– ಬೆಟ್ಟದಪುರದ ನಿವಾಸಿ ಹಾಗೂ ನಿವೃತ್ತ ಆಯುರ್ವೇದ ವೈದ್ಯ ಪಿ.ಸಿ.ನಾಗೇಂದ್ರರಾವ್(80) ಭಾನುವಾರ ಬೆಳಗ್ಗೆ ನಿಧನರಾದರು. ಮೃತರು ಹಲವು ವರ್ಷ ಪಿರಿಯಾಪಟ್ಟಣ ತಾಲೂಕಿನ ದೊಡ್ಡಕಮರವಳ್ಳಿ ಆಯುರ್ವೇದಿಕ್ ಆಸ್ಪತ್ರೆಯಲ್ಲಿ ವೈದ್ಯರಾಗಿ ಸೇವೆ ಸಲ್ಲಿಸಿದ್ದರು. ಮೃತರು ಪತ್ನಿ, ಸಹೋದರರು ಮತ್ತು ಸಹೋದರಿಯರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ನಗೇಂದ್ರರಾವ್ ನಿಧನಕ್ಕೆ ದೊಡ್ಡಕಮರಹಳ್ಳಿ ಮುಖಂಡ ಕಲ್ಯಾಣಪ್ಪ, ಬೆಟ್ಟದಪುರ ನಿವೃತ್ತ ಶಿಕ್ಷಕ ಜಿ.ಬಿ.ಜಗದೀಶ್, ತಾಪಂ ಮಾಜಿ ಸದಸ್ಯ ಕುಂಜಪ್ಪ ಕಾರ್ನಾಡ್, ಅನಿತಾ, ಜೆಡಿಎಸ್ ಮುಖಂಡ ಗಗನ್, ಶರಣ ವಚನ ಪರಿಷತ್ ಅಧ್ಯಕ್ಷ ಬಿ.ಸಿ.ಮಹದೇವಪ್ಪ, ಗ್ರಾಪಂ ಅಧ್ಯಕ್ಷೆ ಮಂಜುಳಾ, ಸದಸ್ಯರಾದ ರಾಜಶೇಖರ್, ಗಿರೀಶ್ ಗೌಡ, ರಾಜೇಂದ್ರ, ಎಸ್.ಮಹದೇವಪ್ಪ ಸೇರಿದಂತೆ ಇತರರು ಸಂತಾಪ ಸೂಚಿಸಿದ್ದಾರೆ.

ಐಪಿಎಲ್: ಪ್ಲೇ ಆಫ್ ಖಚಿತ ಪಡಿಸಿದ ಗುಜರಾತ್



ಮುಂಬೈ, ಮೇ 15– ವೃದ್ಧಿಮಾನ್ ಸಾಹ ಅವರ ಅರ್ಧಶತಕದ ನೆರವಿನಿಂದ ಚೆನ್ನೈ ಸೂಪರ್ ಕಿಂಗ್ಸ್ ವಿರುದ್ಧ ಗುಜರಾತ್ ಟೈಟನ್ಸ್ 7 ವಿಕೆಟ್‌ಗಳ ಜಯ ಸಾಧಿಸಿದೆ. ಇದರೊಂದಿಗೆ ಆಡಿರುವ 13 ಪಂದ್ಯಗಳಲ್ಲಿ 10ನೇ ಗೆಲುವಿನೊಂದಿಗೆ ಒಟ್ಟು 20 ಅಂಕ ಸಂಪಾದಿಸಿ ಅಗ್ರಸ್ಥಾನ ಕಾಯ್ದುಕೊಂಡಿರುವ ಹಾರ್ದಿಕ್ ಪಾಂಡ್ಯ ಬಳಗ 'ಕ್ವಾಲಿಫೈಯರ್ 1'ರಲ್ಲಿ ಆಡುವುದನ್ನು ಖಚಿತ ಪಡಿಸಿದೆ.

ಇಲ್ಲಿನ ವಾಂಖೇಡೆ ಅಂಗಳದಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ಚೆನ್ನೈ ನಿಗದಿತ 20 ಓವರ್‌ಗಳಲ್ಲಿ 5 ವಿಕೆಟ್‌ಗಳಲ್ಲಿ 133 ರನ್‌ಗಳ ಸಾಧಾರಣ ಮೊತ್ತ ಪೇರಿಸಿತು. ತಂಡದ ಪರ ಇನ್ನಿಂಗ್ಸ್ ಆರಂಭಿಸಿದ ಡೆವೊನ್ ಕಾನ್ವೆ 5 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ಬಳಿಕ ಜೊತೆಯಾದ ಋತುರಾಜ್ ಗಾಯಕ್ವಾಡ್, ಮೊಯಿನ್ ಅಲಿ ಅರ್ಧಶತಕದ ಜೊತೆಯಾಟವಾಡಿ ತಂಡಕ್ಕೆ ಚೇತರಿಕೆ ನೀಡಿದರು. ಆದರೆ 2 ಸಿಕ್ಸರ್ ಒಳಗೊಂಡ 21 ರನ್ ಗಳಿಸಿದ್ದ ಮೊಯಿನ್ ಅಲಿ ವಿಕೆಟ್ ಒಪ್ಪಿಸಿದರು. ಮತ್ತೊಂದೆಡೆ ಅದ್ಭುತ ಇನ್ನಿಂಗ್ಸ್ ಕಟ್ಟಿದ ಗಾಯಕ್ವಾಡ್ 53 ರನ್ ಪೇರಿಸಿ ನಿರ್ಗಮಿಸಿದರು. ಬಳಿಕ ಬಂದ ಶಿವಂ ದುಬೆ ಶೂನ್ಯಕ್ಕೆ ವಿಕೆಟ್ ಒಪ್ಪಿಸಿ ನಿರಾಸೆ ಮೂಡಿಸಿದರು. ಮತ್ತೊಂದೆಡೆ ಉಪಯುಕ್ತ ಬ್ಯಾಟಿಂಗ್ ನಡೆಸಿದ ಎನ್.ಜಗದೀಶನ್ 39, ನಾಯಕ ಧೋನಿ 7 ರನ್ ಗಳಿಸಿದರು. ಗುಜರಾತ್ ಪರ ಮೊಹಮ್ಮದ್ ಶಮಿ 2, ರಶೀದ್ ಖಾನ್, ಅಲ್ಜಾರಿ ಜೋಸೆಫ್ ಹಾಗೂ ಸಾಯಿ ಕಿಶೋರ್ ತಲಾ ಒಂದೊಂದು ವಿಕೆಟ್ ಕಬಳಿಸಿದರು. ಬಳಿಕ ಗೆಲುವಿನ ಗುರಿ ಬೆನ್ನತ್ತಿದ ಗುಜರಾತ್ 19.1 ಓವರ್‌ಗಳಲ್ಲಿ 3 ವಿಕೆಟ್ ನಷ್ಟಕ್ಕೆ 137 ರನ್ ಗಳಿಸಿತು. ತಂಡದ ಪರ ಆರಂಭಿಕರಾದ ಶುಭ್‌ಮನ್ ಗಿಲ್ ಹಾಗೂ ವೃದ್ಧಿಮಾನ್ ಸಾಹ ಮೊದಲ ವಿಕೆಟ್‌ಗೆ 59 ರನ್ ಗಳಿಸಿ ಭರ್ಜರಿ ಆರಂಭ ಒದಗಿಸಿದರು. ಆದರೆ ಗಿಲ್ 18 ರನ್ ಗಳಿಸಿ ಔಟಾದರು. ನಂತರ ಬಂದ ಮ್ಯಾಥ್ಯೂ ವೇಡ್ 20, ನಾಯಕ ಹಾರ್ದಿಕ್ ಪಾಂಡ್ಯ 7 ರನ್ ಗಳಿಸಿ ಬಹುಬೇಗ ನಿರ್ಗಮಿಸಿದರೂ, ತಾಳ್ಮೆಯ ಬ್ಯಾಟಿಂಗ್ ಪ್ರದರ್ಶಿಸಿದ ಸಹಾ 57 ಎಸೆತಗಳಲ್ಲಿ 1 ಸಿಕ್ಸರ್, 8 ಬೌಂಡರಿ ಒಳಗೊಂಡ 67 ರನ್ ಗಳಿಸಿ ಅಜೇಯರಾಗಿ ಉಳಿಯುವ ಮೂಲಕ ತಂಡಕ್ಕೆ ಜಯ ತಂದು ಕೊಟ್ಟರು. ಉಳಿದಂತೆ ಡೇವಿಡ್ ಮಿಲ್ಲರ್ 15 ರನ್ ಗಳಿಸಿದರು. ಸಿಎಸ್‌ಕೆ ಪರ ಮತೀಶ ಪತಿರಾನ 2, ಮೊಯಿನ್ ಅಲಿ 1 ವಿಕೆಟ್ ಪಡೆದರು. ವೃದ್ಧಿಮಾನ್ ಸಹಾ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ಲಕ್ನೋ ಮಣಿಸಿ 2ನೇ ಸ್ಥಾನಕ್ಕೇರಿದ ರಾಜಸ್ಥಾನ್



ಮುಂಬೈ, ಮೇ 15– ಟ್ರೆಂಟ್ ಬೋಲ್ಟ್ ಅವರ ಆಲ್‌ರೌಂಡ್ ಆಟದ ನೆರವಿನಿಂದ ರಾಜಸ್ಥಾನ್ ರಾಯಲ್ಸ್ ಲಕ್ನೋ ಸೂಪರ್ ಜೈಂಟ್ಸ್ ವಿರುದ್ಧ 24 ರನ್‌ಗಳ ಗೆಲುವು ದಾಖಲಿಸಿದೆ. ಈ ಮೂಲಕ ಅಂಕಪಟ್ಟಿಯಲ್ಲಿ ಲಕ್ನೋ ಹಿಂದಿಕ್ಕಿರುವ ರಾಜಸ್ಥಾನ್ 2ನೇ ಸ್ಥಾನಕ್ಕೇರಿದೆ.

ಇಲ್ಲಿನ ಬ್ರೆಬೋರ್ನ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ರಾಜಸ್ಥಾನ್ 6 ವಿಕೆಟ್ ನಷ್ಟಕ್ಕೆ 178 ರನ್‌ಗಳ ಸವಾಲಿನ ಮೊತ್ತ ಪೇರಿಸಿತ್ತು. ತಂಡದ ಪರ ಇನ್ನಿಂಗ್ಸ್ ಆರಂಭಿಸಿದ ಜೋಸ್ ಬಟ್ಲರ್ 2 ರನ್ ಗಳಿಸಿ ನಿರ್ಗಮಿಸಿದರು. ಈ ವೇಳೆ ಜೊತೆಯಾದ ಯಶಸ್ವಿ ಜೈಸ್ವಾಲ್ ಹಾಗೂ ನಾಯಕ ಸಂಜು ಸ್ಯಾಮ್ಸನ್ 64 ರನ್ ಜೊತೆಯಾಟವಾಡಿದರು. ಆದರೆ ಈ ವೇಳೆ ಉತ್ತಮವಾಗಿ ಆಡುತ್ತಿದ್ದ ಸಂಜು ಸ್ಯಾಮ್ಸನ್ 32 ರನ್ ಗಳಿಸಿ ಔಟಾದರು. ನಂತರ ಬಂದ ಕನ್ನಡಿಗ ದೇವದತ್ ಪಡಿಕಲ್ ಬಿರುಸಿನ 39 ರನ್ ಗಳಿಸಿ ನಿರ್ಗಮಿಸಿದರೇ, ಜೈಸ್ವಾಲ್ 41 ರನ್ ಗಳಿಸಿ ಔಟಾದರು. ಉಳಿದಂತೆ ರಿಯಾನ್ ಪರಾಗ್ 19, ಜೇಮ್ಸ್ ನೀಶಮ್ 14, ಟ್ರೆಂಟ್ ಬೋಲ್ಟ್ 17, ಅಶ್ವಿನ್ 10 ರನ್ ಗಳಿಸಿದರು. ಲಕ್ನೋ ಪರ ರವಿ ಬಿಷ್ಣೋಯಿ 2, ಆಯುಷ್ ಬಡೋನಿ, ಜೇಸನ್ ಹೋಲ್ಡರ್, ಆವೇಶ್ ಖಾನ್ ತಲಾ ಒಂದೊಂದು ವಿಕೆಟ್ ಪಡೆದರು.

ನಂತರ ಗುರಿ ಬೆನ್ನತ್ತಿದ ಲಕ್ನೋ ನಿಗದಿತ 20 ಓವರ್‌ಗಳಲ್ಲಿ 8 ವಿಕೆಟ್ ನಷ್ಟಕ್ಕೆ 154 ರನ್ ಗಳಿಸಿ ಸೋಲು ಅನುಭವಿಸಿತು. ತಂಡದ ಪರ ದೀಪಕ್ ಹೂಡಾ 59, ಮಾರ್ಕಸ್ ಸ್ಟೋಯಿನಿಸ್ 27, ಕೃನಾಲ್ ಪಾಂಡ್ಯ 25, ಕೆ.ಎಲ್. ರಾಹುಲ್ 10 ರನ್ ಗಳಿಸಿದರು. ರಾಜಸ್ಥಾನ್ ಪರ ಬೌಲ್ಟ್, ಪ್ರಸಿದ್ಧ ಕೃಷ್ಣ ಹಾಗೂ ಮೆಕಾಯ್ ತಲಾ 2 ಮತ್ತು ಚಹಲ್ ಹಾಗೂ ಅಶ್ವಿನ್ ತಲಾ ಒಂದೊಂದು ವಿಕೆಟ್ ಗಳಿಸಿದರು. ಗುಜರಾತ್ ಪರ ಬ್ಯಾಟಿಂಗ್ ಹಾಗೂ ಬೌಲಿಂಗ್‌ನಲ್ಲಿ ಉತ್ತಮ ಪ್ರದರ್ಶನ ನೀಡಿದ ಟ್ರೆಂಟ್ ಬೌಲ್ಟ್ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ಸಾಧಕರಿಗೆ 'ಶ್ರೀ ಬಸವ ಭೂಷಣ' ಪ್ರಶಸ್ತಿ ಪ್ರದಾನ



ಮೈಸೂರು, ಮೇ 15(ಎಂಕೆ)– ಮೈಸೂರಿನ ಕೃಷ್ಣಮೂರ್ತಿಪುರಂನಲ್ಲಿರುವ ನಮನ ಕಲಾಮಂಟಪದಲ್ಲಿ ಸುವರ್ಣ ಬೆಳಕು ಫೌಂಡೇಶನ್ ಹಾಗೂ ಶ್ರೀ ಬಸವೇಶ್ವರ ಸಾಂಸ್ಕೃತಿಕ ಪ್ರತಿಷ್ಠಾನದ ವತಿಯಿಂದ ಬಸವ ಜಯಂತಿ ಆಚರಣೆ ಹಾಗೂ ಅಭಿನಂದನಾ ಸಮಾರಂಭ ನಡೆಯಿತು. ಈ ವೇಳೆ ವಿವಿಧ ಕ್ಷೇತ್ರಗಳಲ್ಲಿನ ಸಾಧಕರಾದ ಸೋಮಶೇಖರ ಇಮ್ರಾಪುರ ಅವರಿಗೆ 'ಶ್ರೀ ಬಸವ ವಿಭೂಷಣ', ಪ್ರಕಾಶ್ ಜಿ.ಎಸ್ ಹಳ್ಳಿ, ಕಿರಣ್ ಸಿಡ್ಲೆಹಳ್ಳಿ, ಮಲ್ಲೇಶ್, ಶ್ರೀಧರ್, ಅಂಬಿಕಾ, ಸ್ನೇಕ್ ಪ್ರಶಾಂತ್ ಅವರಿಗೆ 'ಶ್ರೀ ಬಸವ ಭೂಷಣ' ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಬಳಿಕ ಹಿರಿಯ ಸಮಾಜ ಸೇವಕ ಡಾ.ಕೆ.ರಘುರಾಂ ವಾಜಪೇಯಿ ಮಾತನಾಡಿ, ಬಸವಣ್ಣನವರ ತತ್ವ ಸಿದ್ಧಾಂತಗಳು ಸಾರ್ವಕಾಲಿಕ ಪ್ರಸ್ತುತತೆಯನ್ನು ಪಡೆದುಕೊಂಡಿವೆ. ಸಮ ಸಮಾಜದ ನಿರ್ಮಾತೃಗಳಾದ ಅವರು, ನಮ್ಮೆಲ್ಲರಿಗೂ ಪ್ರೇರಣೆಯಾಗಿದ್ದಾರೆ. ಬಸವಣ್ಣನವರು ತೋರಿದ ಮಾರ್ಗದಲ್ಲಿ ಸಾಗುವುದು ಅನಿವಾರ್ಯವಾಗಿದೆ ಎಂದು ಹೇಳಿದರು.

ಶ್ರೀ ಸೋಮಶೇಖರ ಸ್ವಾಮೀಜಿ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್, ರಾಜ್ಯ ಮುಕ್ತ ಕವಿ ಪರಿಷತ್ ಅಧ್ಯಕ್ಷ ಮುತ್ತುಸ್ವಾಮಿ, ಹಿಮಾಲಯ ಪ್ರತಿಷ್ಠಾನದ ಅಧ್ಯಕ್ಷ ಅನಂತು, ಸುವರ್ಣ ಬೆಳಕು ಫೌಂಡೇಶನ್ ಅಧ್ಯಕ್ಷ ಮಹೇಶ್ ನಾಯಕ್, ಶ್ರೀ ಬಸವೇಶ್ವರ ಸಾಂಸ್ಕೃತಿಕ ಸಮಿತಿ ಅಧ್ಯಕ್ಷ ಬಸವರಾಜೇಂದ್ರ ಸ್ವಾಮಿ, ಎನ್.ವಿ. ರಮೇಶನ್, ಬಿ.ಆರ್.ಮಂಜುನಾಥ್. ಹರ್ಷವರ್ಧನ ಮತ್ತಿತರರು ಉಪಸ್ಥಿತರಿದ್ದರು.

ಸಹಸ್ರಾರು ಜನರ ಅಶ್ರುತರ್ಪಣದ ನಡುವೆ ಶಾಸಕ ಜಿಟಿಡಿ ಮೊಮ್ಮಗಳ ಅಂತ್ಯಕ್ರಿಯೆ

ಪುಟ್ಟ ಕಂದಮ್ಮನ ಅಗಲಿಕೆಗೆ ಕಂಬನಿ ಮಿಡಿದ ಮುಖಂಡರು, ಗಣ್ಯರು



ಮೈಸೂರು, ಮೇ 15(ಎಸ್‌ಬಿಡಿ)– ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರ ಮೊಮ್ಮಗಳು ಮೂರು ವರ್ಷದ ಗೌರಿಯ ಅಂತ್ಯಕ್ರಿಯೆ ಸಹಸ್ರಾರು ಜನರ ಅಶ್ರುತರ್ಪಣದ ನಡುವೆ ಭಾನುವಾರ ಮಧ್ಯಾಹ್ನ ನೆರವೇರಿತು. ರಾಜಕೀಯ ಕ್ಷೇತ್ರದ ಹಲವು ಮುಖಂಡರೂ ಭಾಗಿಯಾಗಿ, ಪುಟ್ಟ ಕಂದಮ್ಮನ ಅಗಲಿಕೆಗೆ ಕಂಬನಿ ಮಿಡಿದರು.

ಮೈಸೂರು ತಾಲೂಕು ಗುಂಗ್ರಾಲ್ ಛತ್ರದ ನಿವಾಸದ ಬಳಿ ಬೆಳಗ್ಗೆ 6ರಿಂದ ಮಧ್ಯಾಹ್ನ 12 ಗಂಟೆವರೆಗೆ ಗೌರಿಯ ಪಾರ್ಥಿವ ಶರೀರವನ್ನು ಅಂತಿಮ ದರ್ಶನಕ್ಕಿಡಲಾಗಿತ್ತು. ನಂತರ ಜಿಟಿಡಿ ಅವರ ತೋಟದಲ್ಲಿ ವಿಧಿ–ವಿಧಾನಗಳೊಂದಿಗೆ ಅಂತಿಮ ಸಂಸ್ಕಾರ ನೆರವೇರಿಸಲಾಯಿತು. ಮುದ್ದಾದ ಮಗುವಿನ ಪಾರ್ಥಿವ ಶರೀರವನ್ನು ತಂದೆ ಜಿ.ಡಿ.ಹರೀಶ್‌ಗೌಡ ತೆಗೆದುಕೊಂಡು ಹೋಗುವಾಗ ಅಲ್ಲಿ ನೆರೆದಿದ್ದ ಜನರ ಕಣ್ಣಾಲಿಗಳು ತೇವಗೊಂಡವು. ತೊದಲು ನುಡಿಗಳಿಂದ ತಬ್ಬಿ ಮುದ್ದಾಡುತ್ತಿದ್ದ ಮಗಳಿಗೆ ಅಂತಿಮ ವಿದಾಯ ಹೇಳುವಾಗ ಹರೀಶ್‌ಗೌಡ ದಂಪತಿ ಬಿಕ್ಕಿ ಬಿಕ್ಕಿ ಅತ್ತರು. ಈ ವೇಳೆ ಕುಟುಂಬದವರು ಹಾಗೂ ಸಂಬಂಧಿಕರ ರೋದನೆ ಮುಗಿಲುಮುಟ್ಟಿತ್ತು.

ಬೇಬಿಮಠದ ಸ್ವಾಮೀಜಿ, ಸಂಸದ ಪ್ರತಾಪ್ ಸಿಂಹ, ಶಾಸಕರಾದ ಸಿ.ಎಸ್.ಪುಟ್ಟರಾಜು, ಸಾ.ರಾ.ಮಹೇಶ್, ಎಲ್.ನಾಗೇಂದ್ರ, ಅಶ್ವಿನ್‌ಕುಮಾರ್, ಕೆ.ಮಹದೇವ್, ಅನಿಲ್ ಚಿಕ್ಕಮಾದು, ಹೆಚ್.ಪಿ.ಮಂಜುನಾಥ್, ಹರ್ಷವರ್ಧನ್, ಬೆಂಗಳೂರಿನ ಎ.ದೇವೇಗೌಡ, ವಿಧಾನಪರಿಷತ್ ಸದಸ್ಯರಾದ ಡಾ.ತಿಮ್ಮಯ್ಯ, ಸಿ.ಎನ್.ಮಂಜೇಗೌಡ, ಮರಿತಿಬ್ಬೇಗೌಡ, ಶ್ರೀಕಂಠೇಗೌಡ, ಎನ್. ಮಹೇಶ್, ಡಾ.ಯತೀಂದ್ರ ಸಿದ್ದರಾಮಯ್ಯ, ಜೆಡಿಎಸ್ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಸೇರಿದಂತೆ ಅನೇಕ ರಾಜಕೀಯ ಮುಖಂಡರು ಗೌರಿಯ ಅಂತ್ಯಸಂಸ್ಕಾರದಲ್ಲಿ ಪಾಲ್ಗೊಂಡು, ಕಂಬನಿ ಮಿಡಿದರು. ಮಾಜಿ ಸಚಿವ ಸಿಎಂ ಇಬ್ರಾಹಿಂ ಸೇರಿದಂತೆ ಹಲವು ಸಂಜೆ ಜಿಟಿಡಿ ಮನೆಗೆ ಭೇಟಿ ನೀಡಿ, ಸಾಂತ್ವನ ಹೇಳಿದರು.

ಸುತ್ತೂರು ಶ್ರೀಗಳು, ಆದಿಚುಂಚನಗಿರಿ ಮೈಸೂರು ಶಾಖಾಮಠದ ಶ್ರೀಗಳು, ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು, ಮಾಜಿ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯ ಹಾಗೂ ಹೆಚ್.ಡಿ. ಕುಮಾರಸ್ವಾಮಿ, ಕೇಂದ್ರ ಸಚಿವ ಪ್ರಹ್ಲಾದ್ ಜೋಷಿ, ಸಂಸದ ಶ್ರೀನಿವಾಸ ಪ್ರಸಾದ್, ವಿಧಾನ ಪರಿಷತ್ ಸದಸ್ಯ ಅಡಗೂರು ಹೆಚ್.ವಿಶ್ವನಾಥ್, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ಸಚಿವರಾದ ಎಸ್.ಟಿ.ಸೋಮಶೇಖರ್, ವಿ. ಸೋಮಣ್ಣ, ಆನಂದ್‌ಸಿಂಗ್, ಶಾಸಕ ಪ್ರಿಯಾಂಕ ಖರ್ಗೆ ಸೇರಿದಂತೆ ಅನೇಕ ರಾಜಕೀಯ ನಾಯಕರು ಕರೆ ಮಾಡಿ, ಜಿಟಿಡಿ ಹಾಗೂ ಹರೀಶ್‌ಗೌಡರಿಗೆ ಸಾಂತ್ವನ ಹೇಳಿದರು.

'ಮಾಜಿ ಸಚಿವರು, ಆತ್ಮೀಯರೂ ಆದ ಜಿ.ಟಿ.ದೇವೇಗೌಡರ ಮೊಮ್ಮಗಳು ಗೌರಿ ಸಾವಿನ ಸುದ್ದಿ ತಿಳಿದು ಅತೀವ ಸಂಕಟವಾಯಿತು. ಬದುಕಿ ಬಾಳಬೇಕಿದ್ದ ಎಳೆಯ ಕಂದಮ್ಮನ ಅಗಲಿಕೆಯಿಂದ ನೊಂದಿರುವ ಜಿ.ಟಿ.ದೇವೇಗೌಡರ ಕುಟುಂಬದ ಶೋಕದಲ್ಲಿ ನಾನೂ ಭಾಗಿ. ಮೃತ ಗೌರಿಯ ಆತ್ಮಕ್ಕೆ ಚಿರಶಾಂತಿ ಸಿಗಲಿ, ಮಗುವಿನ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಜಿ.ಟಿ.ದೇವೇಗೌಡರು ಹಾಗೂ ಆಕೆಯ ತಂದೆ, ತಾಯಿಗೆ ದೇವರು ಕರುಣಿಸಲಿ' ಎಂದು ಮಾಜಿ ಸಿಎಂ ಸಿದ್ದರಾಮಯ್ಯ ತಿಳಿಸಿದ್ದಾರೆ.

'ಮಾಜಿ ಮಂತ್ರಿಗಳಾದ ಜಿ.ಟಿ.ದೇವೇಗೌಡರ ಮೊಮ್ಮಗಳು, ಮೂರು ವರ್ಷದ ಹಸುಗೂಸು ಗೌರಿ ಅನಾರೋಗ್ಯದಿಂದ ಅಸುನೀಗಿರುವ ಸುದ್ದಿ ಕೇಳಿ ದಿಗ್ಭ್ರಮೆಯಾಯಿತು. ಮುದ್ದು ಕಂದನ ಅಗಲಿಕೆ ನನಗೆ ಬಹಳ ದುಃಖ ಉಂಟು ಮಾಡಿದೆ. ಆ ಮಗುವಿನ ಆತ್ಮಕ್ಕೆ ಚಿರಶಾಂತಿ ಸಿಗಲಿ ಹಾಗೂ ಈ ದುಃಖವನ್ನು ಭರಿಸುವ ಶಕ್ತಿಯನ್ನು ಜಿ.ಟಿ. ದೇವೇಗೌಡರು, ಅವರ ಪುತ್ರ ಹರೀಶ್‌ಗೌಡ ಮತ್ತು ಕುಟುಂಬಕ್ಕೆ ಆ ಭಗವಂತ ದಯಪಾಲಿಸಲಿ ಎಂದು ಪ್ರಾರ್ಥಿಸುತ್ತೇನೆ' ಎಂದು ಮಾಜಿ ಸಿಎಂ ಹೆಚ್.ಡಿ.ಕುಮಾರಸ್ವಾಮಿ ಟ್ವೀಟ್ ಮಾಡಿ, ಶೋಕ ವ್ಯಕ್ತಪಡಿಸಿದ್ದಾರೆ.

'ಚಾಮುಂಡೇಶ್ವರಿ ಕ್ಷೇತ್ರದ ಶಾಸಕರು, ಮಾಜಿ ಸಚಿವರು, ಆತ್ಮೀಯರು ಆದ ಜಿ.ಟಿ.ದೇವೇಗೌಡರ ಮೊಮ್ಮಗಳು ಗೌರಿಯ ಸಾವಿನ ಸುದ್ದಿ ತಿಳಿದು ಅತೀವ ದುಃಖವಾಯಿತು. ಮೃತ ಗೌರಿಯ ಆತ್ಮಕ್ಕೆ ಚಿರಶಾಂತಿ ಸಿಗಲಿ, ಮಗುವಿನ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಜಿ.ಟಿ. ದೇವೇಗೌಡರು ಹಾಗೂ ಆಕೆಯ ತಂದೆ–ತಾಯಿಗೆ ಕರುಣಿಸಲಿ ಎಂದು ದೇವರಲ್ಲಿ ಪ್ರಾರ್ಥಿಸುತ್ತೇನೆ' ಎಂದು ಶಾಸಕ ತನ್ವೀರ್ ಸೇಠ್ ಟ್ವೀಟ್ ಮಾಡಿ, ಸಂತಾಪ ಸೂಚಿಸಿದ್ದಾರೆ.





ನಿರ್ಮಾಪಕ ಆನೇಕಲ್ ಬಾಲರಾಜ್ ನಿಧನ



ಬೆಂಗಳೂರು, ಮೇ 15– ಚಿತ್ರ ನಿರ್ಮಾಪಕ ಆನೇಕಲ್ ಬಾಲರಾಜ್ ಅವರು ಭಾನುವಾರ ಬೆಂಗಳೂರಿನಲ್ಲಿ ನಡೆದ ಅಪಘಾತದಲ್ಲಿ ನಿಧನರಾಗಿದ್ದಾರೆ. ಬಾಲರಾಜ್ ಅವರು ವಾಕಿಂಗ್ ಮಾಡುತ್ತಿದ್ದಾಗ ವಾಹನವೊಂದು ಹಿಂಬದಿಯಿಂದ ಡಿಕ್ಕಿ ಹೊಡೆದು, ಗಂಭೀರವಾಗಿ ಗಾಯಗೊಂಡ ಅವರನ್ನು ಸ್ಥಳೀಯ ಆಸ್ಪತ್ರೆಗೆ ದಾಖಲಿಸಲಾಗಿ, ಚಿಕಿತ್ಸೆ ಫಲಕಾರಿಯಾಗದೆ ಸಾವನ್ನಪ್ಪಿದ್ದಾರೆ.

ಮುತ್ತತ್ತಿಯಲ್ಲಿ ಈಜಲು ಹೋದ ಪ್ರವಾಸಿಗ ಸಾವು

ರಕ್ಷಿಸಲು ನದಿಗೆ ಹಾರಿದ ಈಜುಗಾರನೂ ನೀರುಪಾಲು

ಹಲಗೂರು, ಮೇ 15–ಇಲ್ಲಿಗೆ ಸಮೀಪದ ಮುತ್ತತ್ತಿಯ ಕಾವೇರಿ ನದಿಯಲ್ಲಿ ಇಬ್ಬರು ನೀರು ಪಾಲಾದ ಘಟನೆ ನಡೆದಿದೆ. ಮೃತಪಟ್ಟವರನ್ನು ಬೆಂಗಳೂರು ಕೆ.ಆರ್.ಪುರಂನ ಮಿಥುನ್(20) ಹಾಗೂ ಸ್ಥಳೀಯ ಈಜುಗಾರ ಮುತ್ತುರಾಜ್(40) ಎಂದು ಗುರುತಿಸಲಾಗಿದೆ

ಘಟನೆ ವಿವರ: ಬೆಂಗಳೂರಿನ ಮಿಥುನ್ ಕುಟುಂಬದೊಂದಿಗೆ ಮುತ್ತತ್ತಿಗೆ ಪ್ರವಾಸ ಬಂದಿದ್ದರು. ಈ ವೇಳೆ ಮಿಥುನ್ ಈಜಲು ನದಿಗೆ ಇಳಿದಿದ್ದಾರೆ. ಈ ವೇಳೆ ನೀರಿನ ಸೆಳೆತಕ್ಕೆ ಸಿಲುಕಿ ಕೊಚ್ಚಿ ಹೋಗಿದ್ದಾರೆ. ಇದನ್ನು ನೋಡಿದ ದಡದಲ್ಲಿದ್ದ ಈಜುಗಾರ ಮುತ್ತುರಾಜ್, ಮಿಥುನ್‌ನನ್ನು ರಕ್ಷಿಸಲು ನದಿಗೆ ಹಾರಿದ್ದಾರೆ. ಆದರೆ ನೀರಿನ ಸೆಳೆತಕ್ಕೆ ಸಿಲುಕಿ ಅವರೂ ನೀರು ಪಾಲಾದರೆನ್ನಲಾಗಿದೆ.

ಸುದ್ದಿ ತಿಳಿದು ಸ್ಥಳಕ್ಕೆ ಧಾವಿಸಿದ ಹಲಗೂರು ಪೊಲೀಸರು ಶವಗಳ ಶೋಧ ಕಾರ್ಯ ನಡೆಸಿದ್ದಾರೆ. ಮುತ್ತುರಾಜ್ ಶವ ಸಿಕ್ಕಿದ್ದು, ಮಿಥುನ್ ಮೃತದೇಹಕ್ಕಾಗಿ ಶೋಧ ಕಾರ್ಯ ಮುಂದುವರೆದಿದೆ. ಈ ಬಗ್ಗೆ ಹಲಗೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ